ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 18 ಬುಧವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 153 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮುನಿರತ್ನಗೆ ನ್ಯಾಯಾಂಗ ಬಂಧನ; ಪರಪ್ಪನ ಅಗ್ರಹಾರಕ್ಕೆ ಸ್ಥಳಾಂತರ



ಬೆಂಗಳೂರು: ಗುತ್ತಿಗೆದಾರರೊಬ್ಬರಿಗೆ ಜೀವ ಬೆದರಿಕೆ ಹಾಕಿ, ಜಾತಿ ನಿಂದನೆ ಮಾಡಿದ ಆರೋಪದ ಮೇಲೆ ಬಂಧಿತರಾಗಿರುವ ಬಿಜೆಪಿ ಶಾಸಕ ಮುನಿರತ್ನ ನಾಯ್ಡು ಅವರಿಗೆ ಒಂದು ದಿನ ನ್ಯಾಯಾಂಗ ಬಂಧನ ವಿಧಿಸಿ ಜನಪ್ರತಿನಿಧಿಗಳ ವಿಶೇಷ ಕೋರ್ಟ್ ಮಂಗಳವಾರ ಆದೇಶ ಹೊರಡಿಸಿದೆ. ಮುನಿರತ್ನ ಅವರ ಪೊಲೀಸ್ ಕಸ್ಟಡಿ ಅವಧಿ ಇಂದು ಅಂತ್ಯಗೊಂಡ ಹಿನ್ನೆಲೆಯಲ್ಲಿ ಆರೋಪಿಯನ್ನು ಜನಪ್ರತಿನಿಧಿಗಳ ವಿಶೇಷ ಕೋರ್ಟ್‌ಗೆ ಹಾಜರುಪಡಿಸಲಾಯಿತು. ■6ನೇ ಪುಟಕ್ಕೆ

ಸೆ.30ರವರೆಗೆ ದರ್ಶನ್, ಗ್ಯಾಂಗ್‌ನ ನ್ಯಾಯಾಂಗ ಬಂಧನ ವಿಸ್ತರಣೆ



ಬೆಂಗಳೂರು: ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಬಂಧಿತರಾಗಿರುವ ನಟ ದರ್ಶನ್ ಮತ್ತು ಇತರೆ ಆರೋಪಿಗಳ ನ್ಯಾಯಾಂಗ ಬಂಧನ ಅವಧಿಯು ಸೆ.30ರವರೆಗೂ ವಿಸ್ತರಣೆಯಾಗಿದೆ. ಕೊಲೆ ಕೇಸ್ ಆರೋಪ ಪಟ್ಟಿ ಸಲ್ಲಿಕೆಯಾದ ಬಳಿಕ ನ್ಯಾಯಾಲಯ ದರ್ಶನ್, ಪವಿತ್ರ ಗೌಡ ಸೇರಿದಂತೆ ಎಲ್ಲಾ 17 ಆರೋಪಿಗಳನ್ನು ಸೆ. 12 ರವರೆಗೆ, ಆ ಬಳಿಕ ಸೆ. 17ರವರೆಗೆ ನ್ಯಾಯಾಂಗ ಬಂಧನಕ್ಕೆ ನೀಡಿತ್ತು. ಇಂದು ■6ನೇ ಪುಟಕ್ಕೆ

ಗಣೇಶನ ಬಂಧನ!
ಕಾಂಗ್ರೆಸ್ ವರಿಷ್ಠರು ಗರಂ

● ವಿವರಣೆ ನೀಡಲು ಕೆಪಿಸಿಸಿಗೆ ತಾಕೀತು ● ಕಾಂಗ್ರೆಸ್ ಹಿಂದೂ ವಿರೋಧಿ ಎಂಬಂತೆ ಬಿಂಬಿತವಾಗುತ್ತಿರುವುದಕ್ಕೆ ಮುಜುಗರ ● ಉತ್ತರ ಭಾರತದ ವಿಧಾನಸಭಾ ಚುನಾವಣೆಗಳಲ್ಲಿ ಪ್ರಧಾನಿ ಮೋದಿಗೆ ಪ್ರಬಲ ಅಸ್ತ್ರ ಸಿಕ್ಕಿದ ಆತಂಕ



ಬೆಂಗಳೂರು, ಸೆ.17(ಕೆಎಂಶಿ)– ಗಣೇಶೋತ್ಸವ ಸಂದರ್ಭದಲ್ಲಿ ಕರ್ನಾಟಕದಲ್ಲಿ ನಡೆದ ಗಲಭೆಗಳ ಬಗ್ಗೆ ಕಾಂಗ್ರೆಸ್ ವರಿಷ್ಠರು ಗರಂ ಆಗಿದ್ದಾರೆ.

ನಾಗಮಂಗಲ ಸೇರಿದಂತೆ ರಾಜ್ಯದ ಕೆಲವು ಭಾಗಗಳಲ್ಲಿ ಗಣೇಶೋತ್ಸವ ಆಚರಣೆ ವೇಳೆ ಕೋಮು ಗಲಭೆಗೆ ಎಡೆ ಮಾಡಿ ಇಡೀ ರಾಷ್ಟ್ರವೇ ಕರ್ನಾಟಕದತ್ತ ನೋಡಿದ್ದು ಎಐಸಿಸಿಯನ್ನು ಮುಜುಗರಕ್ಕೆ ಸಿಲುಕಿಸಿದೆ.

ಅದರಲ್ಲೂ ಗಣೇಶ ಪ್ರತಿಮೆಯನ್ನು ಪೊಲೀಸ್ ಅಧಿಕಾರಿಗಳು ತಬ್ಬಿಕೊಂಡು ಪೊಲೀಸ್ ವಾಹನದಲ್ಲಿ ಇಡುತ್ತಿರುವ ದೃಶ್ಯ, ಕರ್ನಾಟಕದಲ್ಲಿನ ಕಾಂಗ್ರೆಸ್ ಸರ್ಕಾರ ಹಿಂದೂ ವಿರೋಧಿ ಎಂಬ ಭಾವನೆ ಬಿಂಬಿಸಿ, ಇದನ್ನೇ ಉತ್ತರ ಭಾರತದಲ್ಲಿ ನಡೆಯುತ್ತಿರುವ ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿ ಬಳಸುತ್ತಿರುವುದು ಎಐಸಿಸಿಗೆ ಸಹಿಸಲಾಗುತ್ತಿಲ್ಲ. ಈ ಘಟನೆ ನಂತರ ಕರ್ನಾಟಕದಲ್ಲಿನ ಕಾನೂನು ಸುವ್ಯವಸ್ಥೆ ಬಗ್ಗೆ ಪೂರ್ಣ ಮಾಹಿತಿ ನೀಡಿ ಎಂದು ಕೆಪಿಸಿಸಿ ಅಧ್ಯಕ್ಷರಿಗೆ ಎಐಸಿಸಿ ಪತ್ರ ಬರೆದು ವಿವರಣೆ ಕೇಳಿದೆ. ಅಷ್ಟೇ ಅಲ್ಲದೆ, ರಾಜ್ಯದಲ್ಲಿ ಅಪರಾಧ ಕೃತ್ಯಗಳ ಪ್ರಮಾಣ ಹೆಚ್ಚುತ್ತಿರಲು ಕಾರಣವೇನು, ರಾಷ್ಟ್ರೀಯ ಅಂಕಿ–ಅಂಶಗಳ ಪ್ರಕಾರ ಕಳೆದ ವರ್ಷ 6000ದಷ್ಟು ಇದ್ದದ್ದು, ಈ ವರ್ಷ 9000ಕ್ಕೆ ಏರಿಕೆ ಆಗಿದೆ. ಅಪರಾಧ ಪ್ರಕರಣಗಳು ಹೆಚ್ಚಾಗಲು ಕಾರಣಗಳೇನು, ಗೃಹ ಇಲಾಖೆ ಮೇಲೆ ಹಿಡಿತ ಸಾಧಿಸಲು ಆಗುತ್ತಿಲ್ಲವೇ ಎಂದು ಕೆಪಿಸಿಸಿಯನ್ನು ಎಐಸಿಸಿ ಖಾರವಾಗಿ ಪ್ರಶ್ನಿಸಿದೆ. ಗಣೇಶೋತ್ಸವ ಸಂದರ್ಭದಲ್ಲಿ ಮುನ್ನೆಚ್ಚರಿಕಾ ಕ್ರಮಗಳನ್ನು ಏಕೆ ಕೈಗೊಳ್ಳುತ್ತಿಲ್ಲ, ಕರ್ನಾಟಕದಲ್ಲಿ ಗಣೇಶನನ್ನೇ ಬಂಧಿಸಿದ್ದಾರೆ ಎಂದು ಟ್ವೀಟ್ ಮಾಡಿ ನಮ್ಮ ಸರ್ಕಾರದ ವಿರುದ್ಧ ಹರಿಹಾಯ್ದಿದ್ದಾರೆ.

ಅಷ್ಟೇ ಅಲ್ಲದೆ, ಹರಿಯಾಣ ವಿಧಾನಸಭಾ ಚುನಾವಣಾ ವೇಳೆಯಲ್ಲೂ ಗಣೇಶ ಮೂರ್ತಿಯನ್ನು ಬಂಧಿಸಿದ್ದನ್ನು ಪ್ರಧಾನಿ ಅವರು ಪ್ರಚಾರದ ಅಸ್ತ್ರವನ್ನಾಗಿ ಮಾಡಿಕೊಂಡಿದ್ದಾರೆ. ಕಾಂಗ್ರೆಸ್ ಹಿಂದೂಗಳ ವಿರೋಧಿ ಎಂದು ಬಿಂಬಿಸುವ ಕೆಲಸ ನಡೆದಿದೆ. ಕರ್ನಾಟಕ ■6ನೇ ಪುಟಕ್ಕೆ

ಕಾಳಿದಾಸ ರಸ್ತೆಯ 10 ಎಕರೆ ಜಮೀನಿಗೆ ಕಾನೂನುಬಾಹಿರ ಖಾತೆ ಮಾಡಿ ಒಂದೇ ದಿನದಲ್ಲಿ ರದ್ದುಪಡಿಸುವ ತೀರ್ಮಾನ ಆರೋಪ

ಮೈಸೂರು ಪಾಲಿಕೆ ಆಯುಕ್ತರಿಗೆ ಡಿಸಿ ಶೋಕಾಸ್ ನೋಟಿಸ್



'ಮೈಸೂರು ಮಿತ್ರ' ವರದಿ ಆಧರಿಸಿ ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ ತ್ವರಿತ ಕ್ರಮ



ಲಕ್ಷ್ಮೀಕಾಂತ ರೆಡ್ಡಿ ಷರೀಫ್

ಮೈಸೂರು, ಸೆ. 17(ಆರ್‌ಕೆ)– ಮೈಸೂರಿನ ಜಯಲಕ್ಷ್ಮೀಪುರಂ ವ್ಯಾಪ್ತಿಯ ಕಾಳಿದಾಸ ರಸ್ತೆಯಲ್ಲಿ ಕುವೆಂಪು ಟ್ರಸ್ಟ್‌ಗೆ ಹೊಂದಿಕೊಂಡಂತಿರುವ ನೂರಾರು ಕೋಟಿ ಮೌಲ್ಯದ ಬರೋಬ್ಬರಿ 10 ಎಕರೆ ಭೂಮಿಯನ್ನು ಕುಟುಂಬವೊಂದಕ್ಕೆ ಅಕ್ರಮವಾಗಿ ಖಾತೆ ಮಾಡಿಕೊಟ್ಟು, ಈ ಬಗ್ಗೆ ಆಕ್ಷೇಪಣೆ ವ್ಯಕ್ತವಾದ ಒಂದೇ ದಿನದಲ್ಲಿ ಖಾತೆ ರದ್ದುಪಡಿಸುವ ತೀರ್ಮಾನ ಕೈಗೊಂಡಿರುವ ಆರೋಪದ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಅವರು ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ಅವರಿಗೆ ಕಾರಣ ಕೇಳಿ ನೋಟಿಸ್ ಜಾರಿ ಮಾಡಿದ್ದಾರೆ.


ಹಿನಕಲ್ ಗ್ರಾಮದ ಸರ್ವೆ ನಂ. 155ರ ಕುವೆಂಪು ಟ್ರಸ್ಟ್‌ಗೆ ಹೊಂದಿಕೊಂಡಂತಿರುವ 10 ಎಕರೆ ಜಮೀನಿಗೆ ಅಕ್ರಮವಾಗಿ ಖಾತೆ ಮಾಡಿರುವ ಬಗ್ಗೆ 'ಮೈಸೂರು ಮಿತ್ರ' ಪತ್ರಿಕೆಯ ಸೆ.15ರ ಸಂಚಿಕೆಯಲ್ಲಿ **"ಮುಡಾ ಬ್ರಹ್ಮಾಂಡ ಭ್ರಷ್ಟಾಚಾರದ ಬೆನ್ನ ಹಿಂದೆಯೇ ಮೈಸೂರು ಮಹಾನಗರ ಪಾಲಿಕೆಯಲ್ಲೂ ನೂರಾರು ಕೋಟಿಯ 10 ಎಕರೆ ಭೂಮಿ ಕಬಳಿಕೆ ಯತ್ನ"** ಶೀರ್ಷಿಕೆಯಡಿ ಸುದ್ದಿ ಪ್ರಕಟವಾದ ಬೆನ್ನಲ್ಲೇ ಅದೇ ದಿನ ಪಾಲಿಕೆ ಆಯುಕ್ತರಿಗೆ ನೋಟಿಸ್ ನೀಡಿರುವ ಜಿಲ್ಲಾಧಿಕಾರಿಗಳು, ದಾಖಲೆಗಳನ್ನು ಪರಿಶೀಲಿಸದೇ ಖಾತೆ ಮಾಡಿರುವುದಕ್ಕೆ ಸಂಬಂಧಿಸಿದಂತೆ ನೋಟಿಸ್ ತಲುಪಿದ ಮೂರು ದಿನಗಳಲ್ಲಿ ಸೂಕ್ತ ಲಿಖಿತ ಸಮಜಾಯಿಷಿ ಸಲ್ಲಿಸಬೇಕು. ತಪ್ಪಿದಲ್ಲಿ ನಿಯಮಾನುಸಾರ ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದ್ದಾರೆ.


ವರದಿ ಸಾರಾಂಶ ದಾಖಲು: ಜಿಲ್ಲಾಧಿಕಾರಿಗಳು, ಪಾಲಿಕೆ ಆಯುಕ್ತರಿಗೆ ಕಾರಣ ಕೇಳಿ ಜಾರಿ ಮಾಡಿರುವ ನೋಟಿಸ್‌ನಲ್ಲಿ, 'ಮೈಸೂರು ಮಿತ್ರ'ದಲ್ಲಿ ಪ್ರಕಟವಾದ ವರದಿಯ ಸಂಪೂರ್ಣ ಸಾರಾಂಶವನ್ನೂ ನಮೂದಿಸಿದ್ದಾರೆ. ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ ರಾಜ್ಯಾಧ್ಯಕ್ಷ ■6ನೇ ಪುಟಕ್ಕೆ

ಬೈಕ್‌ಗೆ ಟಿಪ್ಪರ್ ಡಿಕ್ಕಿಯಾಗಿ ಕೇರಳ ಮೂಲದ

ದಂಪತಿ, ಮಗು ಸ್ಥಳದಲ್ಲೇ ಸಾವು

ಗುಂಡ್ಲುಪೇಟೆ ಸುಲ್ತಾನ್ ಬತ್ತೇರಿ ರಸ್ತೆಯಲ್ಲಿ ದಾರುಣ ಘಟನೆ





ಟಿಪ್ಪರ್ ಚಕ್ರದಡಿ ಸಿಲುಕಿರುವ ಬೈಕ್. ಅಪಘಾತದಲ್ಲಿ ಮೃತಪಟ್ಟ ಪತಿ ಧನೇಶ್, ಪತ್ನಿ ಅನುಜಾ, ಪುತ್ರ ಇಷಾನ್‌ಕೃಷ್ಣ.

ಗುಂಡ್ಲುಪೇಟೆ, ಸೆ.17–ಬೈಕ್‌ಗೆ ಟಿಪ್ಪರ್ ಡಿಕ್ಕಿ ಹೊಡೆದು ಕೇರಳ ಮೂಲದ ಒಂದೇ ಕುಟುಂಬದ ಮೂವರು ಸ್ಥಳದಲ್ಲೇ ದಾರುಣವಾಗಿ ಮೃತಪಟ್ಟಿರುವ ಘಟನೆ ಪಟ್ಟಣದ ಹೊರವಲಯದ ಸುಲ್ತಾನ್ ಬತ್ತೇರಿ ರಸ್ತೆಯಲ್ಲಿ ಮಂಗಳವಾರ ಮಧ್ಯಾಹ್ನ ನಡೆದಿದೆ.

ಕೇರಳದ ವಯನಾಡು ಮೂಲದ ಧನೇಶ್ (42), ಈತನ ಪತ್ನಿ ಅನುಜಾ (37) ಹಾಗೂ ಪುತ್ರ ಇಷಾನ್ ಕೃಷ್ಣ (7) ಮೃತಪಟ್ಟವರು. ಇವರು 3 ಗಂಟೆಯಲ್ಲಿ ಬೈಕ್‌ನಲ್ಲಿ ವಯನಾಡಿನಿಂದ ಗುಂಡ್ಲುಪೇಟೆ ಕಡೆಗೆ ಬರುತ್ತಿದ್ದರು. ಇದೇ ವೇಳೆ ಕೇರಳ ರಸ್ತೆ ಪಕ್ಕದ ಕೂತನೂರು ಕ್ವಾರಿಯಿಂದ ಕಲ್ಲು ತುಂಬಿಕೊಂಡು ಪಟ್ಟಣದ ಕಡೆಗೆ ಬರುತ್ತಿದ್ದ ಟಿಪ್ಪರ್ (ಕೆಎ–11, ಬಿ–8497) ಬೈಕ್‌ಗೆ ಡಿಕ್ಕಿ ಹೊಡೆದಿದೆ. ಕೆಳಗೆ ಬಿದ್ದ ಧನೇಶ್, ಪತ್ನಿ ಅನುಜಾ ಹಾಗೂ ಪುತ್ರ ಇಷಾನ್ ಕೃಷ್ಣರನ್ನು ಬೈಕ್ ■6ನೇ ಪುಟಕ್ಕೆ

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್‌ವೇ ಸಂಚಾರದಲ್ಲಿ ಅಡಿಗಡಿಗೂ ಆತಂಕ

ಒಂದೂವರೆ ವರ್ಷದಲ್ಲಿ ರಾಮನಗರ–ಶ್ರೀರಂಗಪಟ್ಟಣ ನಡುವೆ

12 ದರೋಡೆ ಪ್ರಕರಣ

ಶ್ರೀರಂಗಪಟ್ಟಣ ಗ್ರಾಮಾಂತರ ಠಾಣೆ ಪೊಲೀಸರಿಂದ ನಾಲ್ವರ ಸೆರೆ; ಆರು ಪ್ರಕರಣಗಳಲ್ಲಿ 92 ಗ್ರಾಂ ಚಿನ್ನಾಭರಣ ವಶ



ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್‌ವೇನಲ್ಲಿ ದುಷ್ಕರ್ಮಿಗಳ ದಾಳಿಯಿಂದ ಜಖಂಗೊಂಡಿರುವ ಕಾರು

ಮೈಸೂರು, ಸೆ. 17(ಆರ್‌ಕೆ)– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್‌ವೇನಲ್ಲಿ ಸಂಚರಿಸುವ ಕಾರುಗಳನ್ನು (ಲಘು ವಾಹನಗಳು) ತಡರಾತ್ರಿ ತಡೆದು ಬೆದರಿಸಿ ನಗದು, ಚಿನ್ನಾಭರಣ ದೋಚುವ ಯತ್ನ ಮುಂದುವರಿದಿದೆ. ವ್ಯವಸ್ಥಿತವಾಗಿ ನಡೆಯುತ್ತಿರುವ ಖದೀಮರ ಗ್ಯಾಂಗ್ ಪತ್ತೆಹಚ್ಚುವಲ್ಲಿ ಪೊಲೀಸರ ವೈಫಲ್ಯ ಎದ್ದು ಕಾಣುತ್ತಿದೆ ಎಂದು ವಾಹನ ಮಾಲೀಕರು ಹಾಗೂ ಚಾಲಕರು ತೀವ್ರ ಬೇಸರ ವ್ಯಕ್ತಪಡಿಸಿದ್ದಾರೆ.

ಎಕ್ಸ್‌ಪ್ರೆಸ್‌ವೇ ವಾಹನ ಸಂಚಾರಕ್ಕೆ ಮುಕ್ತವಾದ 2023ರ ಮಾರ್ಚ್ ತಿಂಗಳಿಂದ ರಾಮನಗರ–ಶ್ರೀರಂಗಪಟ್ಟಣ ಸರಹದ್ದಿನಲ್ಲಿ ಒಟ್ಟು 12 ದರೋಡೆ ಪ್ರಕರಣಗಳು ಆಯಾ ವ್ಯಾಪ್ತಿಯ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿವೆ. ರಾಮನಗರ ಠಾಣೆಯಲ್ಲಿ 4, ಮದ್ದೂರಿನಲ್ಲಿ 3, ಮಂಡ್ಯದಲ್ಲಿ 1, ಮಂಡ್ಯ ಗ್ರಾಮಾಂತರದಲ್ಲಿ 1 ಹಾಗೂ ಶ್ರೀರಂಗಪಟ್ಟಣ ಗ್ರಾಮಾಂತರ ಠಾಣೆಯಲ್ಲಿ 3 ಪ್ರಕರಣಗಳು ದಾಖಲಾಗಿವೆ ಎಂದು ಆಯಾಯ ಠಾಣೆಗಳ ಇನ್ಸ್‌ಪೆಕ್ಟರ್‌ಗಳು ತಿಳಿಸಿದ್ದಾರೆ. ಈ ಹೆದ್ದಾರಿ ಉದ್ದಕ್ಕೂ ಸಮರ್ಪಕ ದೀಪಗಳು, ಸಿಸಿ, ಎಐ ಕ್ಯಾಮರಾಗಳನ್ನು ಅಳವಡಿಸಿದ್ದರೂ, ರಾತ್ರಿ 12 ಗಂಟೆಯಿಂದ ಮುಂಜಾನೆ 4 ಗಂಟೆ ನಡುವೆ ನಿರ್ಜನ ಪ್ರದೇಶಗಳಲ್ಲಿ ನಿಂತ ಇಲ್ಲವೇ ಚಲಿಸುತ್ತಿರುವ ಕಾರುಗಳಲ್ಲಿದ್ದವರಿಗೆ ಮಾರಕಾಸ್ತ್ರಗಳನ್ನು ತೋರಿಸಿ, ಬೆದರಿಸಿ ನಗದು, ಚಿನ್ನಾಭರಣ ದೋಚಿ ಪರಾರಿಯಾದ ಪ್ರಕರಣಗಳು ವರದಿಯಾಗಿವೆ.


ಸಿದ್ದಲಿಂಗಪುರ–ಮಂಡ್ಯ, ಮಂಡ್ಯದ ಅಮರಾವತಿ ಹೋಟೆಲ್ ಬೈಪಾಸ್– ಮದ್ದೂರು, ಕೆಸ್ತೂರು–ಚನ್ನಪಟ್ಟಣ ಹಾಗೂ ರಾಮನಗರ ನಡುವೆ ಕೆಲವು ನಿರ್ಜನ ಪ್ರದೇಶಗಳಲ್ಲಿ ಹೆಚ್ಚಾಗಿ ಇಂತಹ ಕೃತ್ಯಗಳು ನಡೆಯುತ್ತಿವೆ. ಖದೀಮರು ಹೊಂಚು ಹಾಕಿ ಕಾರುಗಳಲ್ಲಿ ಸಂಚರಿಸುವ ಪ್ರಯಾಣಿಕರನ್ನು ದೋಚುತ್ತಿದ್ದರು. ಶ್ರೀರಂಗಪಟ್ಟಣ ಗ್ರಾಮಾಂತರ ಠಾಣೆ ಇನ್ಸ್‌ಪೆಕ್ಟರ್ ಬಿ.ಜಿ. ಕುಮಾರ್ ಹಾಗೂ ಕ್ರೈಂ ತಂಡದ ಪೊಲೀಸರು, ಇತ್ತೀಚೆಗೆ ನಾಲ್ವರನ್ನು ಬಂಧಿಸಿ ದೋಚಿದ್ದ 92 ಗ್ರಾಂ ■6ನೇ ಪುಟಕ್ಕೆ

ಹೆದ್ದಾರಿಯಲ್ಲಿ ವಾಹನಗಳ ನಿಲ್ಲಿಸಲು ಹೋಗಬೇಡಿ...

ಅನಿವಾರ್ಯವಾದರೆ ಟೋಲ್ ಪ್ಲಾಜಾ, ಪೆಟ್ರೋಲ್ ಬಂಕ್‌ಗಳಲ್ಲಿ ಮಾತ್ರ ನಿಲ್ಲಿಸಿ; ಪೊಲೀಸ್: ಕೆಟ್ಟರೆ ಗತಿಯೇನು?

ಮೈಸೂರು, ಸೆ.17(ಆರ್‌ಕೆ)–ದುಷ್ಕರ್ಮಿಗಳು ಮಾರಕಾಸ್ತ್ರಗಳ ತೋರಿಸಿ, ಬೆದರಿಸಿ ದರೋಡೆ ಮಾಡುತ್ತಿರುವುದರಿಂದ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಯಲ್ಲಿ ಕಂಡ ಕಂಡಲ್ಲಿ ವಾಹನಗಳ ನಿಲ್ಲಿಸಬೇಡಿ ಎಂದು ಪೊಲೀಸರು ಸಲಹೆ ನೀಡಿದ್ದಾರೆ. ವಾಹನಗಳನ್ನು ಹಿಂಬಾಲಿಸಿ ಇಲ್ಲವೇ ರಸ್ತೆಬದಿ ನಿಲ್ಲಿಸಿದರೆ ಬಂದು ದರೋಡೆ ಮಾಡುತ್ತಾರೆ. ನಿರ್ಜನ ಪ್ರದೇಶದಲ್ಲಿ ಇಂತಹ ಕೃತ್ಯಗಳು ನಡೆಯುತ್ತಿದ್ದು, ಈಗಾಗಲೇ ಸಾಕಷ್ಟು ಪ್ರಕರಣಗಳೂ ದಾಖಲಾಗಿವೆ. ರಾತ್ರಿ ವೇಳೆ ಹೈವೇ ಪೆಟ್ರೋಲಿಂಗ್ ಹೆಚ್ಚಿಸಿ, ಎಲ್ಲೆಡೆ ಸಿಸಿ ಕ್ಯಾಮರಾಗಳನ್ನು ಅಳವಡಿಸಿದ್ದರೂ, ಅಪರಾಧ ಕೃತ್ಯ ನಡೆಯುತ್ತಿವೆ ಎಂದು ಪೊಲೀಸರು ತಿಳಿಸಿದ್ದಾರೆ. ಆದ್ದರಿಂದ ಸಾರ್ವಜನಿಕರು ಎಕ್ಸ್‌ಪ್ರೆಸ್‌ವೇನಲ್ಲಿ ವಾಹನಗಳನ್ನು ನಿಲ್ಲಿಸಬಾರದು. ಅನಿವಾರ್ಯವಾದರೆ ಟೋಲ್ ಪ್ಲಾಜಾ, ಪೆಟ್ರೋಲ್ ಬಂಕ್‌ಗಳು, ಗ್ರಾಮಗಳ ಬಳಿ ಜನರಿರುವೆಡೆ ಮಾತ್ರ ನಿಲ್ಲಿಸುವುದು ಒಳಿತು ಎಂದು ಸಲಹೆ ನೀಡಿದ್ದಾರೆ. ಒಂದು ವೇಳೆ ವಾಹನ ಕೆಟ್ಟರೆ ಗತಿಯೇನು?

ಪಿ.ಆರ್.ತಿಪ್ಪೇಸ್ವಾಮಿ ಜನ್ಮ ಶತಮಾನೋತ್ಸವದ ಅಂಗವಾಗಿ
ಇಂದಿನಿಂದ ಚಿತ್ರಕಲಾ ಪ್ರದರ್ಶನ, ಸ್ಪರ್ಧೆ, ಪ್ರಾತ್ಯಕ್ಷಿಕೆ


ಪಿ.ಆರ್.ತಿಪ್ಪೇಸ್ವಾಮಿ

ಮೈಸೂರು, ಸೆ.17(ಜಿಎ)–ಹಿರಿಯ ಕಲಾವಿದ ದಿವಂಗತ ಪಿ.ಆರ್.ತಿಪ್ಪೇಸ್ವಾಮಿ ಅವರ ಜನ್ಮ ಶತಮಾನೋತ್ಸವ ಸಮಾರೋಪ ಸಮಾರಂಭದ ಅಂಗವಾಗಿ ಸೆ.18, 19 ಮತ್ತು 20ರಂದು ಚಿತ್ರಕಲಾ ಪ್ರದರ್ಶನ, ಸ್ಪರ್ಧೆ, ಪ್ರಾತ್ಯಕ್ಷಿಕೆ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭವನ್ನು ವಿಜಯನಗರ 2ನೇ ಹಂತದಲ್ಲಿರುವ ಶ್ರೀ ಕಲಾನಿಕೇತನ ಕಲಾ ಶಾಲೆಯಲ್ಲಿ ಆಯೋಜಿಸಲಾಗಿದೆ ಎಂದು ಪಿ.ಆರ್.ತಿಪ್ಪೇಸ್ವಾಮಿ ಪ್ರತಿಷ್ಠಾನದ ಅಧ್ಯಕ್ಷ ರಾಜಶೇಖರ ಕದಂಬ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಲಲಿತಕಲಾ, ಶಿಲ್ಪಕಲಾ ಅಕಾಡೆಮಿ, ಕದಂಬ ರಂಗವೇದಿಕೆಯ ಸಂಯುಕ್ತಾಶ್ರಯದಲ್ಲಿ ಈ ಕಾರ್ಯಕ್ರಮ ಏರ್ಪಡಿಸಿದ್ದು, ಸೆ.18ರಂದು ಬೆಳಗ್ಗೆ 11 ಗಂಟೆಗೆ ಚಾಲನೆಗೊಳ್ಳಲಿದೆ. ಶಿಲ್ಪಕಲಾವಿದರಾದ ವಿಶ್ವಕರ್ಮ ಆಚಾರ್ಯ ಮತ್ತು ಉಪನ್ಯಾಸಕ ಸೈಯದ್ ಆಸೀಫ್ ಅಲಿ ಚಿತ್ರಕಲಾ ಪ್ರಾತ್ಯಕ್ಷಿಕೆ ಉದ್ಘಾಟಿಸಲಿದ್ದಾರೆ ಎಂದು ತಿಳಿಸಿದರು.

ಸೆ.19ರಂದು ಬೆಳಗ್ಗೆ 11ಗಂಟೆಗೆ ಲಲಿತ ಕಲಾ ಅಕಾಡೆಮಿ ವತಿಯಿಂದ ಚಿತ್ರಕಲಾ ಸ್ಪರ್ಧೆ, ಪ್ರಾತ್ಯಕ್ಷಿಕೆ ನಡೆಯಲಿದೆ. ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಚಾಲನೆ ನೀಡಲಿದ್ದಾರೆ. ಸೆ.20ರಂದು ಸಂಜೆ 4ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿ, ಜೊತೆಗೆ ಪಿಆರ್‌ಟಿ ಕಲಾ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಡಾ.ಹೆಚ್.ಸಿ.ಮಹದೇವಪ್ಪ ಅಧ್ಯಕ್ಷತೆ ವಹಿಸುವರು. ಪುರುಷೋತ್ತಮ ಬಿಳಿಮಲೆ ಸಮಾರೋಪ ಭಾಷಣ ಮಾಡುವರು, ಶಾಸಕ ಕೆ.ಹರೀಶ್‌ಗೌಡ ಬಹುಮಾನ ವಿತರಣೆ ಮಾಡಲಿದ್ದಾರೆ. ಹೆಚ್.ಎಂ.ರೇವಣ್ಣ, ಷಸ.ಕುಮಾರ್, ಡಾ.ಮಾನಸ, ಎಂ.ಸಿ.ರಮೇಶ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಕೆ.ಸಿ.ಮಹದೇವಶೆಟ್ಟಿ, ಸಿ.ಚಿಕ್ಕಣ್ಣ, ಚಂದ್ರಶೇಖರಯ್ಯ ಉಪಸ್ಥಿತರಿದ್ದರು.

ಸೆ.20, ಮೈಸೂರಲ್ಲಿ ಕೇಂದ್ರ ರೇಷ್ಮೆ ಮಂಡಳಿ ಅಮೃತ ಮಹೋತ್ಸವ

ಕೇಂದ್ರ ಸಚಿವರು, ರಾಜ್ಯ ಸಚಿವರು, ರೇಷ್ಮೆ ಬೆಳೆಗಾರರು ಭಾಗಿ


ಮೈಸೂರಿನ ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆಯ ಸಭಾಂಗಣದಲ್ಲಿ ಮಂಡಳಿ ಸದಸ್ಯ ಕಾರ್ಯದರ್ಶಿ ಪಿ.ಶಿವಕುಮಾರ್ ಮಾತನಾಡಿದರು.

ಮೈಸೂರು,ಸೆ.17(ಜಿಎ)–ಕೇಂದ್ರ ರೇಷ್ಮೆ ಮಂಡಳಿ 75 ವರ್ಷ ಪೂರೈಸಿರುವ ಹಿನ್ನೆಲೆಯಲ್ಲಿ ಸೆ.20ರಂದು ಅಮೃತ ಮಹೋತ್ಸವ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಮಂಡಳಿಯ ಸದಸ್ಯ ಕಾರ್ಯದರ್ಶಿ ಪಿ.ಶಿವಕುಮಾರ್ ತಿಳಿಸಿದರು.

ಮೈಸೂರಿನ ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆಯ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 11 ಗಂಟೆಗೆ ಮುಕ್ತ ವಿವಿಯ ಘಟಿಕೋತ್ಸವ ಭವನದಲ್ಲಿ ಕಾರ್ಯಕ್ರಮ ಆಯೋಜಿಸಿದ್ದು, ಕೇಂದ್ರ ಭಾರಿ ಕೈಗಾರಿಕೆ, ಉಕ್ಕು ಸಚಿವ ಹೆಚ್.ಡಿ.ಕುಮಾರಸ್ವಾಮಿ ಮುಖ್ಯ ಅತಿಥಿಯಾಗಿ ಭಾಗವಹಿಸುವರು. ವಿದೇಶಾಂಗ ವ್ಯವಹಾರ, ಜವಳಿ ಖಾತೆ ರಾಜ್ಯ ಸಚಿವೆ ಪಬಿತ್ರಾ ಮಾರ್ಗರಿಟ, ರೈಲ್ವೆ ಜಲಶಕ್ತಿ ರಾಜ್ಯ ಸಚಿವ ವಿ.ಸೋಮಣ್ಣ ಭಾಗವಹಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಪಶುಸಂಗೋಪನೆ ಸಚಿವ ಕೆ.ವೆಂಕಟೇಶ್, ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕರಾದ ಜಿ.ಟಿ.ದೇವೇಗೌಡ, ಟಿ.ಎಸ್.ಶ್ರೀವತ್ಸ, ಕೆ.ಹರೀಶ್‌ಗೌಡ ಅತಿಥಿಗಳಾಗಿ ಭಾಗವಹಿಸುವರು ಎಂದು ತಿಳಿಸಿದರು.

ಅಮೃತ ಮಹೋತ್ಸವ ಕಾರ್ಯಕ್ರಮದಲ್ಲಿ ವಿವಿಧ ರಾಜ್ಯಗಳ ರೇಷ್ಮೆ ಬೆಳೆಗಾರರು ಭಾಗವಹಿಸಲಿದ್ದಾರೆ. ಅಂದು ನೂತನ ರೇಷ್ಮೆ, ಹಿಪ್ಪುನೇರಳೆ ತಳಿಗಳನ್ನು ಬಿಡುಗಡೆ ಮಾಡಲಾಗುವುದು ಎಂದರು.

1948ರಲ್ಲಿ ಆರಂಭವಾದ ಕೇಂದ್ರ ರೇಷ್ಮೆ ಮಂಡಳಿಯಡಿ ದೇಶಾದ್ಯಂತ 159 ಘಟಕಗಳಿದ್ದು, 9 ಸಂಶೋಧನಾ ಸಂಸ್ಥೆಗಳು ವಿವಿಧ ರಾಜ್ಯಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ದೇಶದ 27 ರಾಜ್ಯಗಳಲ್ಲಿ ರೇಷ್ಮೆ ಉತ್ಪಾದನೆಯಾಗುತ್ತಿದ್ದು, ಪ್ರಸ್ತುತ ರೇಷ್ಮೆ ಉತ್ಪಾದನೆಯಲ್ಲಿ ಭಾರತ 2ನೇ ಸ್ಥಾನದಲ್ಲಿದೆ. 2023–24ರಲ್ಲಿ ವಿಶ್ವದ ರೇಷ್ಮೆ ಉತ್ಪಾದನೆಯಲ್ಲಿ ಭಾರತ ಶೇ.42ರಷ್ಟು ಪಾಲು ಹೊಂದಿದೆ 2023–24ರಲ್ಲಿ 2028 ಕೋಟಿ ಮೌಲ್ಯದ ರೇಷ್ಮೆ ರಫ್ತು ಮಾಡಲಾಗಿದೆ. 2.63 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಹಿಪ್ಪು ನೇರಳೆ ಬೆಳೆಯಲಾಗುತ್ತಿದ್ದು, ಕಚ್ಚಾ ರೇಷ್ಮೆ ಪ್ರಮಾಣವೂ ಏರಿಕೆಯಾಗಿದೆ. 2047ರ ವೇಳೆಗೆ ಮೊದಲ ಸ್ಥಾನಕ್ಕೆ ಕೊಂಡೊಯ್ಯುವ ನಿಟ್ಟಿನಲ್ಲಿ ಶ್ರಮಿಸಲಾಗುತ್ತಿದೆ ಎಂದರು.

ಚೀನಾದಿಂದ ಕಚ್ಚಾ ರೇಷ್ಮೆ ಆಮದು ಮಾಡಿಕೊಳ್ಳಲಾಗುತ್ತಿತ್ತು. ಆದರೆ, ಈಗ ಆಮದು ಪ್ರಮಾಣ ಇಳಿಕೆಯಾಗಿದ್ದು, 2022–23ನ್ನು ಹೊರತುಪಡಿಸಿದರೆ ಇತ್ತೀಚಿನ ವರ್ಷಗಳಲ್ಲಿ ಹೆಚ್ಚು ಆಮದು ಮಾಡಿಕೊಂಡಿಲ್ಲ. ಭಾರತದಿಂದಲೇ ಸುಮಾರು 950 ಮೆಟ್ರಿಕ್ ಟನ್ ರೇಷ್ಮೆಗೂಡನ್ನು ರಫ್ತು ಮಾಡಲಾಗಿದೆ ಎಂದು ಶಿವಕುಮಾರ್ ವಿವರಿಸಿದರು.

ರೇಷ್ಮೆ ಕೇವಲ ಬಟ್ಟೆ ತಯಾರಿಕೆಗೆ ಮಾತ್ರವಲ್ಲದೆ ಆಹಾರ, ಔಷಧ, ಸೌಂದರ್ಯ ವರ್ಧಕಗಳ ತಯಾರಿಕೆಗೂ ಬಳಕೆಯಾಗುತ್ತಿದೆ. ಹಿಪ್ಪುನೇರಳೆ ಎಲೆಗಳನ್ನು ಸಕ್ಕರೆ ಕಾಯಿಲೆಗೆ ಔಷಧಿ ತಯಾರಿಕೆಗೆ ಬಳಸಲಾಗುತ್ತದೆ. ಇದರಿಂದಾಗಿ ರೈತರಿಗೆ ಹೆಚ್ಚು ಲಾಭವಾಗುತ್ತದೆ. ರೇಷ್ಮೆ ಬೆಳೆಗಾರರಿಗೆ ಈ ನಿಟ್ಟಿನಲ್ಲಿ ಅಗತ್ಯ ತರಬೇತಿ ನೀಡಲಾಗುತ್ತಿದ್ದು, ರೇಷ್ಮೆ ಉಪ ಉತ್ಪನ್ನ ಮಾಡುವವರಿಗೆ ಸ್ಟಾರ್ಟ್‌ಅಪ್ ಆರಂಭಿಸಲು ಉತ್ತೇಜನ ನೀಡಲಾಗುತ್ತಿದೆ ಎಂದರು.

ವಾಣಿಜ್ಯ ಬೆಳೆಗಳ ಪೈಪೋಟಿ, ಕೃಷಿ ಪ್ರದೇಶ ಇಳಿಕೆ, ಯುವಕರ ಬದಲಾದ ಆಸಕ್ತಿಯಿಂದಾಗಿ ರೇಷ್ಮೆ ಬೆಳೆಯುವವರ ಸಂಖ್ಯೆ ಕಡಿಮೆಯಾಗಿದೆ.

ಇದರಲ್ಲಿ ರಿಯಲ್ ಎಸ್ಟೇಟ್ ಪಾತ್ರವೂ ಇದೆ. ಕೋವಿಡ್ ನಿಂದಾಗಿಯೂ ರೇಷ್ಮೆ ಉತ್ಪಾದನೆ ಕುಂಠಿತ ವಾಗಿತ್ತು. ಕಳೆದ ಎರಡು ಮೂರು ವರ್ಷ ಗಳಿಂದ ಚೇತರಿಕೆಯಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಬಿಟಿಎಸ್‌ಎಸ್‌ಓ ನಿರ್ದೇಶಕ ಡಾ.ಸೆಲ್ವಕುಮಾರ್, ಸಿಟಿಆರ್‌ಟಿಐ ನಿರ್ದೇಶಕ ಎನ್.ಬಿ.ಚೌದರಿ, ಎಂಇಎಸ್‌ಎಸ್‌ಓ ನಿರ್ದೇಶಕ ಡಾ.ಎನ್.ಕೆ.ಭಾಟಿಯ, ಸಿಎಸ್‌ಆರ್‌ಟಿಐ ನಿರ್ದೇಶಕ ಡಾ.ಗಾಂಧಿ ದಾಸ್ ಉಪಸ್ಥಿತರಿದ್ದರು.

ಕುಲಾಂತರಿ ಆಹಾರ, ಬಹು ರಾಷ್ಟ್ರೀಯ ಕಂಪನಿಗಳ ವಿರುದ್ಧ ಸೆ.29ರಿಂದ ದೊಡ್ಡ ಹೊಸೂರು ಸತ್ಯಾಗ್ರಹ

ಮೈಸೂರು, ಸೆ.17(ಜಿಎ)–ಕುಲಾಂತರಿ ಆಹಾರ ಮತ್ತು ಬಹು ರಾಷ್ಟ್ರೀಯ ಕಂಪನಿಗಳು ನಮ್ಮ ಕೃಷಿ ಕ್ಷೇತ್ರಕ್ಕೆ ಕಾಲಿಡದಂತೆ ಬುಡ ಸಮೇತ ಕಿತ್ತೊಗೆಯಬೇಕೆಂದು ಸರ್ಕಾರಗಳನ್ನು ಆಗ್ರಹಿಸುವ ನಿಟ್ಟಿನಲ್ಲಿ ಸೆ.29, 30 ಮತ್ತು ಅಕ್ಟೋಬರ್ 1 ಮತ್ತು 2ರಂದು ತುಮಕೂರಿನ ದೊಡ್ಡ ಹೊಸೂರು ಗ್ರಾಮದ ಗಾಂಧೀಜಿ ಸಹಜ ಬೇಸಾಯ ಆಶ್ರಮದಲ್ಲಿ ಕುಲಾಂತರಿ ಆಹಾರ ವಿರೋಧಿ ಒಕ್ಕೂಟದ ವತಿಯಿಂದ ದೊಡ್ಡ ಹೊಸೂರು ಸತ್ಯಾಗ್ರಹ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ರಾಜ್ಯ ರೈತ ಸಂಘದ ಪದಾಧಿಕಾರಿ ಹೊಸಕೋಟೆ ಬಸವರಾಜು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದಿನ ಈಸ್ಟ್ ಇಂಡಿಯಾ ಕಂಪನಿಯಂತೆ ಈಗ ಬಹು ರಾಷ್ಟ್ರೀಯ ಕಂಪನಿಗಳು ಬಂದಿವೆ. ಹೀಗೇ ಮುಂದುವರಿದರೆ ನಮ್ಮ ಪಾರಂಪರಿಕ ಕೃಷಿ ಜ್ಞಾನ, ನಮ್ಮ ದನ, ಎಮ್ಮೆ, ಆಡು, ಕುರಿ, ಕೋಳಿ, ಅನ್ನ, ಕಾಳು ಕಡ್ಡಿ, ಕೂಲಿ ಕಾರ್ಮಿಕರು, ಅಂಗಡಿ ಮುಂಗಟ್ಟುಗಳು ಮಾಯವಾಗುತ್ತವೆ. ಅವರ ಕೃತಕ ಸರಕು, ವಿಷಮಿಶ್ರಿತ ಆಹಾರ ಮೊದಲಾದವು ಮನೆ ಮನೆಗೂ ಬಂದು ನಮ್ಮ ಗ್ರಾಮ, ಸಮಾಜವನ್ನು ಹಾಳುಗೆಡವುತ್ತವೆ. ಹೀಗಾಗಿ ಜಾಗೃತಿ ಮೂಡಿಸಲು ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಕುಲಾಂತರಿ ಕಾಯ್ದೆ ತಿರಸ್ಕರಿಸಬೇಕು, ಸಹಜ ಬೇಸಾಯವನ್ನು ಪಂಚಾಯಿತಿಗಳ ಮೂಲಕ ಸ್ಥಾಪಿಸಬೇಕು, ರಾಜ್ಯ ಸರ್ಕಾರ ರಾಜ್ಯವನ್ನು ಕುಲಾಂತರಿ ಮುಕ್ತ ರಾಜ್ಯವೆಂದು ಘೋಷಿಸಬೇಕು, ಕೇಂದ್ರ ಸರ್ಕಾರ ಕುಲಾಂತರಿಗೆ ಸಂಬಂಧಪಟ್ಟ ಸಂಶೋಧನೆ ಹಾಗೂ ಅದಕ್ಕೆ ಪೂರೈಸುವ ಹಣಕಾಸು ನಿಲ್ಲಿಸಬೇಕು. ಕೇಶಕ್ಕೆ ಕುಲಾಂತರಿ ಆಹಾರದ ಸಲುವಾಗಿ ಹೊರ ರಾಷ್ಟ್ರಗಳಿಂದ ಹೂ ಬರುವುದಕ್ಕೆ ನಿರ್ಬಂಧ ಹೇರಬೇಕು, ದೇಶದಲ್ಲಿ ಕಳೆ ನಾಶಕ ಮಾರಾಟ ನಿಷೇಧಿಸಬೇಕು, ರಾಜ್ಯ ಸರ್ಕಾರ ಸಹಜ ಬೇಸಾಯಕ್ಕೆ ಶೇ. 75 ರಷ್ಟು ಅಭಿವೃದ್ಧಿಯ ಹಣವನ್ನು ಪಂಚಾಯಿತಿಗಳ ಮೂಲಕ ನೀಡಬೇಕು ಎಂಬುವು ದೊಡ್ಡ ಹೊಸೂರು ಸತ್ಯಾಗ್ರಹದ ಪ್ರಮುಖ ಬೇಡಿಕೆಗಳಾಗಿವೆ ಎಂದರು.

ಸುದ್ದಿಗೋಷ್ಠಿಯಲ್ಲಿ ಡಾ.ಹೆಚ್. ಮಂಜುನಾಥ್, ಬಿ.ಕರುಣಾಕರನ್, ಚಿಕ್ಕಣ್ಣ, ಶಾಂತಕೃಷ್ಣ, ಗಿರೀಶ್ ಮತ್ತಿ ತರರು ಉಪಸ್ಥಿತರಿದ್ದರು.

ಮಕ್ಕಳ ಕಲ್ಯಾಣ ಸಮಿತಿಗೆ ಅಧ್ಯಕ್ಷರು, ಸದಸ್ಯರ ನೇಮಕ

ಮೈಸೂರು, ಸೆ.17(ಎಸ್‌ಪಿಎನ್)–ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು ಹಾಗೂ ಹಾಸನ ಜಿಲ್ಲೆ ಸೇರಿ ದಂತೆ ಒಟ್ಟು 26 ಜಿಲ್ಲೆಗಳ ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಮಂಡಳಿ ಮಕ್ಕಳ ಕಲ್ಯಾಣ ಸಮಿತಿಗೆ ಅಧ್ಯಕ್ಷರು ಮತ್ತು ಸದಸ್ಯರನ್ನು 3 ವರ್ಷಗಳ ಅಧಿಕಾರಾವಧಿಗೆ ನೇಮಕ ಮಾಡಲಾಗಿದೆ. ಮೈಸೂರು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷರಾಗಿ ಎಂ.ರವಿಚಂದ್ರ, ಸದಸ್ಯರಾಗಿ ಎಂ.ಮಹದೇವ್, ಎನ್.ಆರ್.ರಾಣಿ, ಎಚ್.ವಿ.ಸರಸ್ವತಿ ಅವರನ್ನು ನೇಮಿಸಿದೆ. ಚಾಮರಾಜನಗರ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷರಾಗಿ ಬಿ.ಲತಾ, ಸದಸ್ಯರಾಗಿ ಲೀನಾಕುಮಾರಿ, ಕೆಶ್ವೇತಾ, ಗಾಯಿತ್ರಿ ಎನ್.ಅರುಣ್‌ಕುಮಾರ್ ಅವರನ್ನು ನೇಮಿಸಿದೆ. ಹಾಸನ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷರಾಗಿ ಎಂ.ಎಸ್. ಮಧುಕುಮಾರಿ, ಸದಸ್ಯರಾಗಿ ಎಂ.ಎಲ್. ಉಮಾ, ಕೆ.ಎಸ್.ರವಿ, ಬಿ.ಕೆ. ಮನು, ಜೆ.ಎನ್.ರಂಗ ಸ್ವಾಮಿ ನೇಮಕವಾಗಿದ್ದಾರೆ. ಕೊಡಗು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷ ರಾಗಿ ವಿ.ಅಂಬಿಕಾ, ಸದಸ್ಯರಾಗಿ ಎನ್.ಆರ್.ರೂಪ, ಎ.ಎಂ.ರೀಸ್ತಾ ಅವರನ್ನು ನೇಮಿಸ ಲಾಗಿದೆ. ಮಂಡ್ಯ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷರಾಗಿ ಎಸ್.ಬಿ.ಸುಮಿತ್ರ, ಸದಸ್ಯರಾಗಿ ಕೆ.ಸಿ.ನಳಿನಾ, ಎಂ.ನಂದೀಶ್, ಆರ್.ರವಿ ಶಂಕರ್, ಡಿ.ಕೆ.ಶಿವಲಿಂಗೇ ಗೌಡ ಅವರನ್ನು ನೇಮಿಸಲಾಗಿದೆ.



ಸ್ವಾಗತ...

ಮೈಸೂರು ತಾಲೂಕು ಬೀರಿಹುಂಡಿಯಲ್ಲಿ ಏರ್ಪಡಿಸಿದ್ದ ಶ್ರೀ ವಿಶ್ವಕರ್ಮ ಜಯಂ ತ್ಯುತ್ಸವಕ್ಕೆ ಆಗಮಿಸಿದ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇ ಗೌಡರು, ವಿಶ್ವಕರ್ಮ ಸಮಾಜದ ನಿಟ್ಟರಹಳ್ಳಿ ನೀಲಕಂಠ ಚಾರ್ಯ ಸ್ವಾಮೀಜಿ ಅವರನ್ನು ಭಾರಿ ಹಾರದೊಂದಿಗೆ ಸ್ವಾಗತಿಸಲಾಯಿತು. ಈ ವೇಳೆ ವಿಶ್ವಕರ್ಮ ಸಮಾಜದ ರಾಜ್ಯ ಮಹಿಳಾ ಅಧ್ಯಕ್ಷೆ ವಸಂತ ಮುರುಳಿ, ಆಶಾ ಗುರೂಜಿ, ಗುಂಡ್ಲುಪೇಟೆ ನಾಗೇಂದ್ರ, ಮುಳ್ಳೂರು ರಾಮಲಿಂಗಚಾರಿ, ಗ್ರಾ ಪಂ ಸದಸ್ಯರಾದ ವಿಜಯಾ, ಸೋಮೇಶ, ರಾಜೇಶ, ಬಸವಲಿಂಗ ಚಾರಿ, ರವಿ, ಶಿವ ನಂಜಪ್ಪ ಇತರರು ಉಪಸ್ಥಿತರಿದ್ದರು.

ಶಿಕ್ಷಕರ ದಿನಾಚರಣೆ


ಮೈಸೂರಿನ ಅಕ್ಷ ಭಾರತ್ ಮಿಷನ್ ಹಾಗೂ ಸುರಕ್ಷಾ ಫೌಂಡೇಶನ್ ವತಿಯಿಂದ ಶಾಶ್ವತ ಸೇವಾ ಶಾಲೆಯಲ್ಲಿ ಶಿಕ್ಷಕರ ದಿನ ಆಚರಿಸಲಾಯಿತು. ಕಾರ್ಯಕ್ರಮವನ್ನು ಅಕ್ಷ ಭಾರತ್ ಮಿಷನ್ ಸಂಸ್ಥಾಪಕ ಜಯಾನಂದ್ ತೋಪುಗೋಲು ಉದ್ಘಾಟಿಸಿದರು. ಯಾಂದಲ್ಲಿ ಶಾಲೆಯ ಶಿಕ್ಷಕ ಮಂಜುನಾಥ್, ಶಾಂತಿ, ಶಾಶ್ವತ ಶಾಲೆಯ ರಮೇಶ್ ತಾಯೂರು, ಲಕ್ಕಪ್ಪ ದಾವಣಗೆರೆ, ಮಂಜುಳಾ ಇದ್ದರು.

ವಾರ್ಷಿಕ ಸಭೆ ಉದ್ಘಾಟನೆ...


ಮೈಸೂರಿನ ಡಿ.ದೇವರಾಜ ಅರಸು ರಸ್ತೆಯ ಶ್ರೀ ಲೋಕಾಭಿರಾಮಮಂದಿರದಲ್ಲಿ ದಿ ಮೈಸೂರು ಸಿಟಿ ಶ್ರೀ ಶಿವಛತ್ರಪತಿ ಕೋ–ಆಪರೇಟಿವ್ ಸೊಸೈಟಿ ವಾರ್ಷಿಕ ಸಭೆ ನಡೆಯಿತು. ಸಂಘದ ಅಧ್ಯಕ್ಷ ಕೆ.ನಾಗೇಂದ್ರರಾವ್ (ಅವತಾಡೆ) ಅಧ್ಯಕ್ಷತೆ ವಹಿಸಿದ್ದರು. ಇದೇ ವೇಳೆ ಎಸ್‌ಎಸ್‌ಎಲ್‌ಸಿ, ಪಿಯುಸಿ ಹಾಗೂ ಪದವಿಯ 17 ಮಂದಿಗೂ ನಗದು ಪ್ರತಿಭಾ ಪುರಸ್ಕಾರ ನೀಡಲಾಯಿತು. ಉಪಾಧ್ಯಕ್ಷ ಕೃಷ್ಣಾಜಿ ರಾವ್ ಗಾಯಕ್‌ವಾಡ್, ನಿರ್ದೇಶಕರಾದ ಎಸ್.ವೆಂಕೋಬರಾವ್ ಕಿರುದಂತ್, ಸುನೀಲ್ ಸಂಕಪಾಳ್, ಹರಿರಾವ್ ಸಿಂಧೆ, ಸುರೇಶ್‌ಬಾಬು, ತುಕರಾಮ್‌ರಾವ್, ಮೀರಾಬಾಯಿ ಕೇಸರ್ಕರ್, ವನಿತಾ ಬಾಯಿ, ಸುನೀತಾ, ಕಿರಣ್ ಇನ್ನಿತರರಿದ್ದರು.

ಮಹಾರಾಣಿ ಕಾಲೇಜು ನಿವೃತ್ತ ಪ್ರಿನ್ಸಿಪಾಲ್ ಪ್ರೊ. ವಿಜಯ ವೀರಸಿಂಹ ನಿಧನ



ಮೈಸೂರು,ಸೆ.17–ಮೈಸೂರು ಮಹಾರಾಣಿ ಕಾಲೇಜು ನಿವೃತ್ತ ಪ್ರಿನ್ಸಿಪಾಲ್ ಹಾಗೂ ಕುವೆಂಪುನಗರದ ಆದಿಚುಂಚನಗಿರಿ ರಸ್ತೆ ನಿವಾಸಿ ಪ್ರೊ. ವಿಜಯ ವೀರಸಿಂಹ (82) ಮಂಗಳವಾರ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ಪ್ರೊ. ಸಿಂಹ ಅವರು ಮಹಾರಾಣಿ ಮಹಿಳಾ ಕಲಾ ಕಾಲೇಜಿನಲ್ಲಿ ಪ್ರಿನ್ಸಿಪಾಲ್ ಮತ್ತು ಪ್ರಾಧ್ಯಾಪಕರಾಗಿ 18 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಅಲ್ಲದೆ ಹಾಸನ ಜಿಲ್ಲೆಯಲ್ಲೂ ಕಾರ್ಯ ನಿರ್ವಹಿಸಿದ್ದಾರೆ. ಮೃತರು ಓರ್ವ ಪುತ್ರಿ, ಪುತ್ರ, ಸೊಸೆ, ಅಳಿಯ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಇವರ ಪತ್ನಿ ಎಂ.ಆರ್.ಲೀಲಾ 20 ವರ್ಷಗಳ ಹಿಂದೆಯೇ ನಿಧನರಾಗಿದ್ದರು. ಅಂತ್ಯಕ್ರಿಯೆ ಕೆ.ಜಿ.ಕೊಪ್ಪಲಿನ ರುದ್ರ ಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಕೆ.ವಿ.ನಾಗೇಂದ್ರ

ಮೈಸೂರಿನ ಕುವೆಂಪುನಗರ ನಿವಾಸಿ ಹಾಗೂ ಮೂಲತಃ ಚಾಮರಾಜನಗರ ತಾಲೂಕು ಕುದೇರು ಗ್ರಾಮದ ಸೂರಪ್ಪನವರ ಮೊಮ್ಮಗ ಕೆ.ವಿ.ನಾಗೇಂದ್ರ (58) ಮಂಗಳವಾರ ನಿಧನರಾದರು. ಮೃತರು ಪತ್ನಿ ಅನಿತಾ, ಪುತ್ರ ಅಖಿಲೇಶ್ವರ್, ಪುತ್ರಿ ಅನಘ, ಸಹೋದರ, ಸಹೋದರಿಯರು ಸೇರಿದಂತೆ ಅಪಾರ ಬಂಧು–ವರ್ಗ ಅಗಲಿದ್ದಾರೆ. ಇಂದು ಮಧ್ಯಾಹ್ನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರ ಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಿಂಗಮ್ಮ

ಕೆ.ಆರ್.ಪೇಟೆ: ತಾಲೂಕಿನ ಕಾಮನಹಳ್ಳಿ ಗ್ರಾಮದ ನಿವೃತ್ತ ಶಿಕ್ಷಕರಾದ ಕೃಷ್ಣೇಗೌಡರ ಧರ್ಮಪತ್ನಿ ಶ್ರೀಮತಿ ನಿಂಗಮ್ಮ(80) ಅವರು ಮಂಗಳವಾರ ನಿಧನ ಹೊಂದಿದ್ದಾರೆ. ಮೃತರು ಪತಿ ಕೃಷ್ಣೇಗೌಡ, ಮೂವರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಸ್ವಗ್ರಾಮ ಕಾಮನಹಳ್ಳಿ ಗ್ರಾಮದಲ್ಲಿ ನಡೆಯಿತು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

18.09.2024 ಬುಧವಾರ, ಮಳೆ ನಕ್ಷತ್ರ: ಉತ್ತರಾ, 13.09.2024ರಿಂದ 26.09.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಶುಕ್ಲ ಪಕ್ಷ, ತಿಥಿ: ಹುಣ್ಣಿಮೆ, ನಕ್ಷತ್ರ: ಪೂಭಾ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಚರ್ಮದಲ್ಲಿ ಕಾಣಿಸಿಕೊಳ್ಳುವ ವಿವಿಧ ರೀತಿಯ ಗಂಟುಗಳು, ಅಪಘಾತದಿಂದ ಉಂಟಾಗುವ ಚಿಕ್ಕ ಗಾಯಗಳು, ಉಸಿರಾಟದ ಸಮಸ್ಯೆಗಳು ಮತ್ತು ಹಲ್ಲು ನೋವು, ಹುಳುಕು ಹಲ್ಲು, ಬಾಯಿಂದ ದುರ್ವಾಸನೆ, ವಸಡಿನಿಂದ ರಕ್ತಸ್ರಾವ ಮುಂತಾದ ದಂತ ಮತ್ತು ಬಾಯಿ ರೋಗಗಳಿಗೆ ಪ್ರತ್ಯೇಕ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ಗಂಟೆಯಿಂದ.
- **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಅವಧೂತ ದತ್ತಪೀಠಾಧಿಪತಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಮತ್ತು ದತ್ತಪೀಠ ಉತ್ತರಾಧಿಕಾರಿ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಅವರ 2ನೇ ಚಾತುರ್ಮಾಸ್ಯ ವ್ರತದೀಕ್ಷಾ ಮಹೋತ್ಸವ, ಚಾತುರ್ಮಾಸ್ಯ ವ್ರತ ಪರಿಸಮಾಪ್ತಿ, ಪವಮಾನ ಹೋಮ, ಸೀಮೋಲ್ಲಂಘನ, ಬೆಂಗಳೂರಿಗೆ ವಿಶ್ವರೂಪ ವಿಜಯಯಾತ್ರೆ, ಸ್ಥಳ: ಆಶ್ರಮದ ಆವರಣ, ಬೆಳಗ್ಗೆಯಿಂದ.
- **ಕಾವೇರಿ ಆಯುರ್ವೇದ ಆಸ್ಪತ್ರೆ:** ಕತ್ತು ಮತ್ತು ಭುಜದ ನೋವಿಗೆ ಉಚಿತ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 9 ಗಂಟೆಯಿಂದ.
- **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.
- **ಅಂಬಾರಿ ಬಾಯ್ಸ್ :** 10ನೇ ವರ್ಷದ ಗಣಪತಿ ಪೂಜಾ ಮಹೋತ್ಸವ, ಕ್ರೀಡೆಗಳು ಮತ್ತು ರಂಗೋಲಿ ಸ್ಪರ್ಧೆ, ಸ್ಥಳ: ಕಾಮಾಟಗೇರಿ, ನಜರ್‌ಬಾದ್.
- **ಕರ್ನಾಟಕ ಸಾಹಿತ್ಯ ಅಕಾಡೆಮಿ, ಮಹಾಜನ ಪ್ರಥಮ ದರ್ಜೆ ಕಾಲೇಜು, ಚಿಂತನ ಚಿತ್ತಾರ:** ಪ್ರೊ.ಜಿ.ಎಚ್. ನಾಯಕರ 'ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಆದರ್ಶ ಮತ್ತು ವಾಸ್ತವ' ಪುಸ್ತಕ ಲೋಕಾರ್ಪಣೆ ಮತ್ತು ಉಪನ್ಯಾಸ ಕಾರ್ಯಕ್ರಮ, ಉದ್ಘಾಟನೆ : ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್, ವಿಶೇಷ ಉಪನ್ಯಾಸ: ಕನ್ನಡ ಪ್ರಾಧ್ಯಾಪಕ ಪ್ರೊ.ಮೈಸೂರು ಕೃಷ್ಣಮೂರ್ತಿ, ಮುಖ್ಯ ಅತಿಥಿಗಳು : ಅಕಾಡೆಮಿ ರಿಜಿಸ್ಟ್ರಾರ್ ಕರಿಯಪ್ಪ, ಹೋರಾಟಗಾರ್ತಿ ಮೀರಾ ನಾಯಕ, ಕೀರ್ತಿಶ್ರೀ ನಾಯಕ, ಲೇಖಕ ಜಿ.ಪಿ.ಬಸವರಾಜು, ಅಧ್ಯಕ್ಷತೆ: ಮಹಾಜನ ಕಾಲೇಜು ಪ್ರಿನ್ಸಿಪಾಲ್ ಆರ್.ಜಯಕುಮಾರಿ, ಸ್ಥಳ: ಮಹಾಜನ ಪ್ರಥಮ ದರ್ಜೆ ಕಾಲೇಜು ಸಭಾಂಗಣ, ಜಯಲಕ್ಷ್ಮಿಪುರಂ, ಬೆಳಗ್ಗೆ 10ಕ್ಕೆ
- **ಶಾರದಾ ವಿಲಾಸ ಕಾಲೇಜು, ಇಂಡಿಯನ್ ಕ್ರಾಸ್ ಸೊಸೈಟಿ:** ರಕ್ತದಾನ ಶಿಬಿರ, ಉಪಸ್ಥಿತರು: ಶಾರದಾ ವಿಲಾಸ ಶಿಕ್ಷಣ ಸಂಸ್ಥೆ ಅಧ್ಯಕ್ಷ ಡಾ. ಬಿ.ಎಂ.ಸುಬ್ರಾಯ, ಕಾರ್ಯದರ್ಶಿ ಎನ್.ಚಂದ್ರಶೇಖರ್, ಇಂಡಿಯನ್ ರೆಡ್ ಕ್ರಾಸ್ ಸೊಸೈಟಿ ಕಾರ್ಯದರ್ಶಿ ಎಸ್.ಎಸ್.ವೈದ್ಯನಾಥ, ಅಧ್ಯಕ್ಷತೆ: ಶಾರದಾ ವಿಲಾಸ ಕಾಲೇಜು ಪ್ರಿನ್ಸಿಪಾಲ್ ಡಾ.ಎಂ.ದೇವಿಕಾ, ಸ್ಥಳ: ಎ.ವಿ.ಹಾಲ್, ಎಸ್‌ವಿಸಿ, ಬೆಳಗ್ಗೆ 10ಕ್ಕೆ.
- **ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ, ಜೆಎಸ್‌ಎಸ್ ಮೆಡಿಕಲ್ ಕಾಲೇಜು ಮತ್ತು ಜೆಎಸ್‌ಎಸ್ ಆಸ್ಪತ್ರೆ :** ಜೆಎಸ್‌ಎಸ್ ಬಯೋರೆಪೊಸಿಟರಿ ಸೆಂಟರ್ ಉದ್ಘಾಟನಾ ಸಮಾರಂಭ, ಮುಖ್ಯ ಅತಿಥಿಗಳು : ಟಾಟಾ ಇನ್ಸ್‌ಟಿಟ್ಯೂಟ್ ಆಫ್ ಜೆನೆಟಿಕ್ಸ್ ಅಂಡ್ ಸೊಸೈಟಿ (ಟಿಐಜಿಎಸ್) ನಿರ್ದೇಶಕ ಡಾ. ರಾಕೇಶ್ ಮಿಶ್ರಾ, ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಸಮ ಕುಲಾಧಿಪತಿ ಡಾ. ಬಿ. ಸುರೇಶ್, ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಕುಲಪತಿ ಡಾ. ಸುರೀಂದರ್ ಸಿಂಗ್, ಅಧ್ಯಕ್ಷತೆ : ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ. ಬೆಟಸೂರ ಮಠ, ಸ್ಥಳ: ಪೆಥಾಲಜಿ ವಿಭಾಗ, ಜೆಎಸ್‌ಎಸ್ ಆಸ್ಪತ್ರೆ, ಬೆಳಗ್ಗೆ 10.15ಕ್ಕೆ.
- **ಡಾ. ವಿಷ್ಣು ಸೇನಾ ಸಮಿತಿ :** ಡಾ. ವಿಷ್ಣುವರ್ಧನ್‌ರವರ 74ನೇ ಹುಟ್ಟುಹಬ್ಬ ಆಚರಣೆ, ಮುಖ್ಯ ಅತಿಥಿಗಳು : ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕರಾದ ಟಿ.ಎಸ್. ಶ್ರೀವತ್ಸ, ಹರೀಶ್‌ಗೌಡ, ಮಾಜಿ ಮೇಯರ್ ಶಿವಕುಮಾರ್, ಮೈಸೂರು ಜಿಲ್ಲಾ ಮತ್ತು ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಹಿರಿಯ ಸಮಾಜ ಸೇವಕ ಕೆ. ರಘುರಾಂ ವಾಜಪೇಯಿ, ಸ್ಥಳ: ಸಮಿತಿ ಆವರಣ, ಬೆಳಗ್ಗೆ 10.30ಕ್ಕೆ.
- **ಮೈಸೂರು ನಗರ (ಜಿಲ್ಲೆ) ಜನತಾದಳ :** ಜೆಡಿಎಸ್ ಸದಸ್ಯತ್ವ ನೋಂದಣಿ ಅಭಿಯಾನ, ಉಪಸ್ಥಿತರು : ರಾಜ್ಯ ಶಾಸಕಾಂಗ ಪಕ್ಷದ ನಾಯಕ ಸುರೇಶ್‌ಬಾಬು, ರಾಜ್ಯ ಯೂತ್ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಶಾಸಕ ಜಿ.ಟಿ.ದೇವೇಗೌಡ, ಮಾಜಿ ಶಾಸಕ ಸಾ.ರಾ.ಮಹೇಶ್, ಶಾಸಕರಾದ ಜಿ.ಡಿ.ಹರೀಶ್‌ಗೌಡ, ಬಾಲಕೃಷ್ಣೇಗೌಡ, ಡಾ.ಅನ್ನದಾನಿ, ವಿಧಾನಪರಿಷತ್ ಸದಸ್ಯ ಜವರಾಯಿಗೌಡ, ಸಿ.ಎನ್.ಮಂಜೇಗೌಡ, ಕೆ.ವಿವೇಕಾನಂದ, ಗೋವಿಂದರಾಜು, ಮಾಜಿ ಶಾಸಕ ಕೆ.ಮಹದೇವ್, ಮಾಜಿ ಶಾಸಕ ಅಶ್ವಿನ್‌ಕುಮಾರ್, ಸ್ಥಳ: ಜೆಡಿಎಸ್ ಕಚೇರಿ ಆವರಣ, ಬೆಳಗ್ಗೆ 11ಕ್ಕೆ.
- **ಎಸ್‌ಪಿವಿಜಿಎಂಸಿ ಟ್ರಸ್ಟ್:** 63ನೇ ಪಾರಂಪರಿಕ ಸಂಗೀತೋತ್ಸವ, ಸಂಜೆ 5.30ರಿಂದ ಪಂಡಿತ್ ಭೀಮಾಶಂಕರ ಬಿದನೂರ ಮತ್ತು ವಿದ್ಯಾರ್ಥಿಗಳ ಸಮೂಹ ತಬಲ, ಸಂಜೆ 6.45ಕ್ಕೆ ವಿದ್ವಾನ್ ಟಿ.ಎಂ.ಕೃಷ್ಣ ಅವರಿಂದ ಗಾಯನ, ವಿದುಷಿ ಅಕ್ಕರೈ ಶುಭಲಕ್ಷ್ಮೀ–ವಯೋಲಿನ್, ವಿದ್ವಾನ್ ಸುಮೇಶ್ ನಾರಾಯಣ್–ಮೃದಂಗ, ವಿದುಷಿ ಸುಕನ್ಯಾ ರಾಮಗೋಪಾಲ್–ಘಟಂ, ಸ್ಥಳ: ಎಸ್‌ಪಿವಿಜಿಎಂಸಿ ಟ್ರಸ್ಟ್, 8ನೇ ಟ್ರಸ್ಟ್, ವಿವಿ ಮೊಹಲ್ಲಾ.
- **ಜನಚೈತನ್ಯ ಫೌಂಡೇಷನ್ :** ಅಂತರರಾಷ್ಟ್ರೀಯ ಸರೋದ್ ವಾದಕ ದಿವಂಗತ ಪಂಡಿತ್ ರಾಜೀವ್ ತಾರಾನಾಥ್ ಸಂಗೀತ ನಮನ (ಭಾವಗೀತೆ, ಜನಪದ ಗೀತೆ, ರಂಗಗೀತೆಗಳು) ನೈಜ ವಾದ್ಯ ಸಂಗೀತದೊಂದಿಗೆ, ಉದ್ಘಾಟನೆ : ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ನಾಗೇಶ್ ವಿ. ಬೆಟ್ಟಕೋಟೆ, ಅಧ್ಯಕ್ಷತೆ : ಕರ್ನಾಟಕ ಸುಗಮ ಸಂಗೀತ ಪರಿಷತ್ ಜಿಲ್ಲಾಧ್ಯಕ್ಷ ಡಾ. ನಾಗರಾಜ್ ವಿ. ಬೈರಿ, ಮುಖ್ಯ ಅತಿಥಿಗಳು : ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಸಂಸ್ಕೃತಿ ಚಿಂತಕ ಡಾ. ರಘುರಾಂ ವಾಜಪೇಯಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ಪ್ರೊ. ಕೃಷ್ಣಮನವಳ್ಳಿ, ಡಾ. ಸಿ.ವಿ. ಶ್ರೀನಾಥ್‌ಶೆಟ್ಟಿ, ಎಸ್. ಬಸವರಾಜು, ಎನ್.ಎಸ್. ಇಸ್ಲಾಹುದ್ದೀನ್, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಲಕ್ಷ್ಮೀಪುರಂ, ಸಂಜೆ 5ಕ್ಕೆ.
- **ಕರ್ನಾಟಕ ಗಮಕ ಕಲಾ ಪರಿಷತ್ತು, ಮೈಸೂರು ಜಿಲ್ಲಾ ಗಮಕ ಕಲಾ ಪರಿಷತ್ ಟ್ರಸ್ಟ್:** ಗಮಕ ಕಾರ್ಯಕ್ರಮ, ಉದ್ಘಾಟನೆ: ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ನುಡಿನಮನ: ಗಮಕಿ ಡಾ.ಜ್ಯೋತಿ ಶಂಕರ್, ಅಧ್ಯಕ್ಷತೆ: ಕರ್ನಾಟಕ ಮುಕ್ತಕ ಸಾಹಿತ್ಯ ಅಕಾಡೆಮಿಯ ಎಸ್.ರಾಮಪ್ರಸಾದ್, ವಾಚನ: ಶುಭಾ ರಾಘವೇಂದ್ರ, ವ್ಯಾಖ್ಯಾನ: ಕೃ.ಪಾ.ಮಂಜುನಾಥ್, ಸ್ಥಳ: ಶ್ರೀರಾಮಮಂದಿರ, ಕೃಷ್ಣಮೂರ್ತಿಪುರಂ, ಸಂಜೆ 5ಕ್ಕೆ.
- **ಶ್ರೀ ಸುತ್ತೂರು ಮಠ:** ಬೆಳದಿಂಗಳ ಸಂಗೀತ–271ರ ಅಂಗವಾಗಿ ವಿದುಷಿ ಪಾವನಿ ಭಾರದ್ವಾಜ್ ಅವರಿಂದ ಗಾಯನ ಕಾರ್ಯಕ್ರಮ, ಸಾನ್ನಿಧ್ಯ :ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ, ವಿದ್ವಾನ್ ರೂಪನಗುಡಿ ರತ್ನತೇಜ–ವಯೋಲಿನ್, ವಿದ್ವಾನ್ ಎಚ್.ಎಲ್. ಶಿವಶಂಕರಸ್ವಾಮಿ–ಮೃದಂಗ, ವಿದ್ವಾನ್ ಎಂ.ಎಸ್. ಜಯರಾಂ– ಘಟಂ, ಸ್ಥಳ: ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6ಕ್ಕೆ.
- **ಶ್ರೀ ರಾಮಕೃಷ್ಣ ಪರಮಹಂಸ ಸೇವಾ ಪ್ರತಿಷ್ಠಾನ:** ತಿಂಗಳ ತಿಳಿವು ಉಪನ್ಯಾಸ ಕಾರ್ಯಕ್ರಮ, ಸಾನ್ನಿಧ್ಯ: ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜೀ ಮಹಾರಾಜ್, ತಿಂಗಳ ಅತಿಥಿ: ಸಾಹಿತಿ ಪ್ರೊ.ಸಿ.ನಾಗಣ್ಣ, ಉಪಸ್ಥಿತರು: ಮಾಜಿ ಎಂಎಲ್‌ಸಿ ಡಿ.ಮಾದೇಗೌಡ, ಡಾ.ಎಸ್.ಪಿ. ಯೋಗಣ್ಣ, ಕೆ.ಕೆಂಪಲಿಂಗರಾಜು, ಪ್ರೊ.ಜಿ.ಚಂದ್ರಶೇಖರ್, ಬಸವಣ್ಣ, ಹೆಚ್.ಜೆ.ಬಸವಲಿಂಗಪ್ಪ, ಸ್ಥಳ: ಪರಮಹಂಸ ಮಂಟಪ, ರಾಮಕೃಷ್ಣನಗರ ವೃತ್ತ, ಸಂಜೆ 6ಕ್ಕೆ

ಸರಗೂರಿನಲ್ಲಿಂದು

- **ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಪಡುವಲು ಶ್ರೀ ವಿರಕ್ತ ಮಠ, ಬಿಡಗಲು, ತಾಲೂಕು ಶರಣ ಸಾಹಿತ್ಯ ಪರಿಷತ್ತು, ಸರಗೂರು ಮತ್ತು ಹೆಚ್.ಡಿ.ಕೋಟೆ:** ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ 109ನೇ ಜಯಂತಿ ಹಾಗೂ ದತ್ತಿ ಉಪನ್ಯಾಸ ಕಾರ್ಯಕ್ರಮ, ಸಾನ್ನಿಧ್ಯ: ಪಡುವಲು ಶ್ರೀ ವಿರಕ್ತ ಮಠದ ಶ್ರೀ ಮಹದೇವ ಸ್ವಾಮೀಜಿ, ಶ್ರೀ ಸಾಲೂರು ಬೃಹನ್ಮಠದ ಶ್ರೀ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ, ಉದ್ಘಾಟನೆ: ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪನಿರ್ದೇಶಕ ಎಸ್.ಟಿ.ಜವರೇಗೌಡ, ಹಿರಿಯ ಪತ್ರಕರ್ತ ಅಂಶಿಪ್ರಸನ್ನಕುಮಾರ್ ಅವರಿಂದ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಶ್ರೀಗಳ ಜೀವನ ಸಾಧನೆ ಕುರಿತು ಉಪನ್ಯಾಸ, ಅಧ್ಯಕ್ಷತೆ: ಜಿಲ್ಲಾ ಶಸಾಪ ಅಧ್ಯಕ್ಷ ಡಾ.ಹೆಳವರಹುಂಡಿ ಸಿದ್ದಪ್ಪ, ಪ್ರಾಸ್ತಾವಿಕ ನುಡಿ: ಕಸಾಪ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್, ಮುಖ್ಯ ಅತಿಥಿಗಳು: ಅಧೀಕ್ಷಕ ಎಂ.ಕೆ.ಗಣೇಶ್, ಸುರೇಶ್, ಕೆ.ಗುರುಸ್ವಾಮಿ, ಪಿ.ಕೆ.ಶಿವರಾಜ್, ಸ್ಥಳ: ಪಡುವಲು ಶ್ರೀ ವಿರಕ್ತ ಮಠ, ಬಿಡಗಲು ಸರಗೂರು, ಬೆಳಗ್ಗೆ 11.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 'ವಾದ್ಯ ವೈಭವ' ಸಂಗೀತ ವಾದ್ಯಗಳ ಪರಿಚಯ ಮಾಲಿಕೆ, ಪ್ರಸ್ತುತಿ: ಚೈತ್ರಿಕಾ. ಎಸ್, 6.40 ಅರಿವಿನ ಶಿಖರ : ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಎ. ಎಸ್. ನಾಗಲಕ್ಷ್ಮಿ, ಎಸ್. ಸಂಗೀತಾ, ವ್ಯಾಖ್ಯಾನ–ಡಾ. ಹೆಚ್. ಎನ್. ಮಂಜುರಾಜ್, 6.50 ರೈತರಿಗೆ ಸಲಹೆ, 7.15 ವಾತ್ಸಲ್ಯವಾಣಿ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ನಿರ್ದೇಶಕರು, ಮಕ್ಕಳ ರಕ್ಷಣೆ, ಕರ್ನಾಟಕ ಸರ್ಕಾರ, 8.30 ಚಿತ್ರಗೀತೆಗಳು, 9.05 ಮಕ್ಕಳ ಕ್ಯಾನ್ಸರ್ ಜಾಗೃತಿ ಕುರಿತು ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ಇಂಡಿಯನ್ ಕ್ಯಾನ್ಸರ್ ಕೇರ್ ಸೊಸೈಟಿ, 9.10 ವೃತ್ತಿ ಮಾರ್ಗದರ್ಶನ : 'ಮೈಸೂರು ವಿಶ್ವವಿದ್ಯಾಲಯದ ಮಾನಸಗಂಗೋತ್ರಿಯಲ್ಲಿರುವ ಇಎಂಆರ್‌ಸಿ ಅಂದರೆ ಎಜುಕೇಶನಲ್ ಮಲ್ಟಿಮೀಡಿಯಾ ರಿಸರ್ಚ್ ಸೆಂಟರ್‌ನ ಚಟುವಟಿಕೆಗಳು ಕುರಿತು ಇಎಂಆರ್‌ಸಿ ಕೇಂದ್ರದ ನಿರ್ದೇಶಕರಾದ ಡಾ. ಸಪ್ನಾ. ಎಂ.ಎಸ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ : ಬೇದ್ರೆ ಮಂಜುನಾಥ್, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ: ಪಂಡಿತ್. ವಿಶ್ವಮೋಹನ್ ಭಟ್–ಮೋಹನವೀಣಾ ವಾದನ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ

ಮಧ್ಯಾಹ್ನ: 12.30 ಆಯುಷ್ ವಾಣಿ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ಆಯುಷ್ ಇಲಾಖೆ, ಕರ್ನಾಟಕ ಸರ್ಕಾರ, 12.35 ದೇವರನಾಮ, 12.45 ಜನಪದ ಸಂಗೀತ, 1.20 ಭಾವಗೀತೆಗಳು, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ : ದೊರೆಸ್ವಾಮಿ ಐಯ್ಯಂಗಾರ್–ವೀಣಾ, 4.00 ಮಹಿಳಾರಂಗ –ಹೀಗಿದೆ ನೋಡಿ ನಮ್ ಜೋಡಿ, ಭಾಗವಹಿಸುವವರು: ವಯೋಲಿನ್ ವಾದಕಿ ಮತ್ತು ಶಿಕ್ಷಕಿ ವೀಣಾ ಹಾಗೂ ನಿವೃತ್ತ ಬ್ಯಾಂಕ್ ಮ್ಯಾನೇಜರ್ ಮತ್ತು ಸಮಾಜ ಸೇವಕ ಸುರೇಶ್ ದಂಪತಿ, ಪ್ರಸ್ತುತಿ : ಅಬ್ದುಲ್ ರಶೀದ್, 4.45 ಹಿಂದಿ ಪಾಠ–ಡಾ. ಮಾಧವಿ ಭಂಡಾರಿ, 6.50 ಕೃಷಿರಂಗ, ಕೃಷಿ ದೀವಿಗೆ : ಸಂಶೋಧನಾ ಸಂಸ್ಥೆಯೊಂದಿಗೆ ಕೃಷಿ ಕಲಿಕೆ ಕುರಿತ ಬಾನುಲಿ ಸರಣಿ ರಾಗಿ ಬೆಳೆ ರೋಗ ನಿರ್ವಹಣೆ. ಈ ಕುರಿತು ಮಂಡ್ಯದ ವಿ.ಸಿ. ಫಾರಂ ವಲಯ ಕೃಷಿ ಸಂಶೋಧನಾ ಕೇಂದ್ರದ ಸಹಾಯಕ ಪ್ರಾಧ್ಯಾಪಕರಾದ ಡಾ. ಹೆಚ್. ಆರ್. ರವೀಂದ್ರ ಅವರೊಂದಿಗೆ ಸಂದರ್ಶನ. ಸಂದರ್ಶಕರು : ಎನ್. ಕೇಶವಮೂರ್ತಿ, 7.45 ಕನ್ನಡದಲ್ಲಿ ಭಾಷಣ, 8.00 'ಕ್ಷಿತಿಜ ಲಿಟರರಿ ಗುರು' ಸಾಹಿತ್ಯ ಸಾಧಕರೊಂದಿಗೆ ಸಂವಾದ, 9.30 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ: ಅಲಿ ಅಹ್ಮದ್ ಹುಸೇನ್ – ಶಹನಾಯ್, 10.00 ಜನಪದ ಸಂಗೀತ, 10.30 ಸವಿನೆನಪು

ಗೌರಿ ಲಂಕೇಶ್ ಹತ್ಯೆ ಪ್ರಕರಣ: ನಾಲ್ವರು ಆರೋಪಿಗಳಿಗೆ ಜಾಮೀನು

ಬೆಂಗಳೂರು: ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆ ಪ್ರಕರಣದ ನಾಲ್ವರು ಆರೋಪಿಗಳಿಗೆ ಹೈಕೋರ್ಟ್ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ಆರೋಪಿಗಳು ಸಲ್ಲಿಸಿದ್ದ ಜಾಮೀನು ಅರ್ಜಿಗಳನ್ನು ನ್ಯಾಯಮೂರ್ತಿ ಎಸ್.ವಿಶ್ವಜಿತ್ ಶೆಟ್ಟಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

ಆರೋಪಿಗಳಾದ ಹುಕ್ಕೇರಿಯ ಭರತ್ ಜಯವಂತ ಕುರಾನೆ (42), ಮಹಾರಾಷ್ಟ್ರದ ಛತ್ರಪತಿ ಸಂಭಾಜಿನಗರದ (ಈ ಹಿಂದಿನ ಹೆಸರು ಔರಂಗಾಬಾದ್) ಶ್ರೀಕಾಂತ್ ಪಂಗಾರ್ಕರ್ (48), ಶಿಕಾರಿಪುರದ ಸುನಿತ್ ಕುಮಾರ್ (42) ಮತ್ತು ಮಹಾರಾಷ್ಟ್ರ ಸತಾರದ ಸುಧನ್ವ ಗೋಂದಲೇಕರ್ (43)ಗೆ ಜಾಮೀನು ಮಂಜೂರು ಮಾಡಿದೆ.

ಆರೋಪಿಗಳು ತಲಾ ಒಂದು ಲಕ್ಷ ರೂಪಾಯಿ ಮೌಲ್ಯದ ವೈಯಕ್ತಿಕ ಬಾಂಡ್, ಇಬ್ಬರ ಭದ್ರತಾ ಖಾತರಿ ಒದಗಿಸಬೇಕು. ವಿಚಾರಣಾಧೀನ ನ್ಯಾಯಾಲಯ ವಿನಾಯಿತಿ ನೀಡದ ಹೊರತು ವಿಚಾರಣೆಯ ಎಲ್ಲಾ ದಿನ ಆರೋಪಿಗಳು ವಿಚಾರಣೆಗೆ ಹಾಜರಾಗಬೇಕು. ಅರ್ಜಿದಾರರು ಪ್ರಾಸಿಕ್ಯೂಷನ್ ಸಾಕ್ಷಿಗಳಿಗೆ ಬೆದರಿಕೆ ಹಾಕಬಾರದು ಮತ್ತು ಇಂಥಹದ್ದೇ ಆರೋಪದಲ್ಲಿ ಮತ್ತೆ ಭಾಗಿಯಾಗುವಂತಿಲ್ಲ. ಪ್ರಕರಣ ಇತ್ಯರ್ಥವಾಗುವವರೆಗೆ ನ್ಯಾಯಾಲಯ ಅನುಮತಿಸದ ಹೊರತು ಅರ್ಜಿದಾರರು ವಿಚಾರಣಾಧೀನ ನ್ಯಾಯಾಲಯದ ವ್ಯಾಪ್ತಿ ತೊರೆಯುವಂತಿಲ್ಲ. ಈ ಪೈಕಿ ಯಾವುದೇ ಷರತ್ತು ಉಲ್ಲಂಘಿಸಿದರೂ ಪ್ರಾಸಿಕ್ಯೂಷನ್ ಜಾಮೀನು ರದ್ದತಿಗೆ ಕೋರಬಹುದು ಎಂದು ನ್ಯಾಯಾಲಯ ಹೇಳಿದೆ. ಇದರೊಂದಿಗೆ ಪ್ರಕರಣದ 18 ಆರೋಪಿಗಳ ಪೈಕಿ 8 ಆರೋಪಿಗಳಿಗೆ ಜಾಮೀನು ದೊರೆತಂತಾಗಿದೆ. ಈ ಹಿಂದೆ ನಾಲ್ವರು ಆರೋಪಿಗಳಿಗೆ ಜಾಮೀನು ಮಂಜೂರಾಗಿತ್ತು.

ತಿ.ನರಸೀಪುರ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ (ನಿ), ಲಿಂಕ್ ರಸ್ತೆ, ತಿ.ನರಸೀಪುರ,

2023-24ನೇ ಸಾಲಿನ ವಾರ್ಷಿಕ ಮಹಾಸಭೆ ಆಹ್ವಾನ ಪತ್ರಿಕೆ

ಮಾನ್ಯ ಸಹಕಾರಿ ಬಂಧುಗಳೇ,

ಮೇಲ್ಕಂಡ ಸಂಘದ 2023-2024ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ದಿನಾಂಕ:19-09-2024ರ ಗುರುವಾರ ಬೆಳಗ್ಗೆ 11-00 ಗಂಟೆಗೆ ಸಂಘದ ಆವರಣದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ.ಟಿ.ಪಿ ಸುಬ್ರಹ್ಮಣ್ಯ ರವರ ಘನ ಅಧ್ಯಕ್ಷತೆಯಲ್ಲಿ ನಡೆಸಲು ಏರ್ಪಡಿಸಿರುತ್ತದೆ. ಸಂಘದ ಮಾನ್ಯ ಸರ್ವಸದಸ್ಯರೆಲ್ಲರಿಗೂ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಯನ್ನು ಅಂಚೆ ಮೂಲಕ ಕಳುಹಿಸಲಾಗಿರುತ್ತದೆ ಒಂದು ವೇಳೆ ಆಹ್ವಾನ ಪತ್ರಿಕೆ ತಲುಪದಿದ್ದ ಸದಸ್ಯರು ಇದನ್ನೇ ಆಹ್ವಾನವೆಂದು ಪರಿಗಣಿಸಿ ಸಕಾಲದಲ್ಲಿ ಆಗಮಿಸಿ ಮಹಾಸಭೆಗೆ ಭಾಗವಹಿಸಬೇಕಾಗಿ ಈ ಮೂಲಕ ಕೋರಿದೆ.

ಕಾರ್ಯಕಾರಿ ಮಂಡಳಿ ಅಪ್ಪಣೆ ಮೇರೆಗೆ ಸಹಿ/- ಜಿ.ರಘುನಂದನ್ ಕಾರ್ಯದರ್ಶಿ
ತಾ॥ವ್ಯ॥ಮಾ॥ಸ॥ಸಂ,(ನಿ) ತಿ.ನರಸೀಪುರ ಮೊ.ನಂ :9036840738

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮೈಸೂರು ಪ್ರಾಂತ್ಯ ಮಟ್ಟದ ಸರ್ಕಾರಿ ಅಧಿಕಾರಿಗಳ ಹಾಗೂ 'ಇತರೆ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ (ನಿ.), ಮೈಸೂರು

ನೋಂದಣಿ ಸಂಖ್ಯೆ: ಜೆ.ಆರ್.ಎಂ/ಎಸ್-7/ಹೆಚ್.ಹೆಚ್.ಎಸ್/41736/2013-14 ದಿ: 03.06.2013
ವಿಳಾಸ:-66,ಹೆಚ್.ಐ.ಜಿ,ಗ್ರೂಪ್-4,ಡಬ್ಬಲ್ ರೋಡ್ 2ನೇ ಫೇಸ್ ಕೆ.ಹೆಚ್.ಬಿ ಕಾಲೋನಿ ಹೂಟಗಳ್ಳಿ, ಮೈಸೂರು - 570018

12 ನೇ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ

ಮಾನ್ಯರೇ,

ಸಂಘದ ಸರ್ವಸದಸ್ಯರ 12ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ : 25-09-2024 ರಂದು ಬುಧವಾರ ಬೆಳಗ್ಗೆ 11-00 ಗಂಟೆಗೆ ಮೈಸೂರು ನಗರ ಶ್ರೀ ದರ್ಶಿನಿ ಫಂಕ್ಷನ್ ನಂ.40/ಎ,ಹೆಚ್.ಐ.ಜಿ, ಗ್ರೂಪ್-2, ಮಹಿಳಾ ಪ್ರಥಮ ದರ್ಜೆ ಕಾಲೇಜು ಹತ್ತಿರ ಕೆ.ಹೆಚ್.ಬಿ ಕಾಲೋನಿ ಹೂಟಗಳ್ಳಿ ಮೈಸೂರು ರಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಎಸ್ ರವಿ ರವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಏರ್ಪಡಿಸಲಾಗಿದ್ದು, ಈ ಸಂಬಂಧ ಎಲ್ಲಾ ಅರ್ಹ ಸದಸ್ಯರುಗಳಿಗೆ ಆಹ್ವಾನ ಪತ್ರಿಕೆಯನ್ನು ಈಗಾಗಲೇ ಅಂಚೆ ಮೂಲಕ ರವಾನಿಸಲಾಗಿದೆ. ಸದರಿ ಆಹ್ವಾನ ಪತ್ರಿಕೆ ತಲುಪದೆ ಇರುವಂತಹ ಸದಸ್ಯರುಗಳು ಇದನ್ನೇ ಆಹ್ವಾನ ಪತ್ರಿಕೆಯೆಂದು ಭಾವಿಸಿ ವಾರ್ಷಿಕ ಮಹಾಸಭೆಗೆ ಹಾಜರಾಗಬೇಕಾಗಿ ಈ ಮೂಲಕ ಕೋರಲಾಗಿದೆ.

ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ
ಸಹಿ/- ಮುಖ್ಯಕಾರ್ಯನಿರ್ವಹಣಾಧಿಕಾರಿ

ಮೈಸೂರು ಅರಮನೆ ಮಂಡಳಿ, ಮೈಸೂರು
ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಮೈಸೂರು
ದೂರವಾಣಿ ಸಂಖ್ಯೆ: 0821-2421051 ಇಮೇಲ್: ddmysorepalace@gmail.com

ಸಂಖ್ಯೆ: EO/MPB/DD/AEE/ELEC/T.NO-07/2024-25 ದಿನಾಂಕ: 17.09.2024

ಇ-ಟೆಂಡರ್ ಪ್ರಕಟಣೆ (ದ್ವಿಲಕೋಟೆ ಪದ್ಧತಿಯಲ್ಲಿ)
(ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಉಪ-ನಿರ್ದೇಶಕರು, ಮೈಸೂರು ಅರಮನೆ ಮಂಡಳಿ, ಮೈಸೂರು ರವರು, ಮೈಸೂರು ಅರಮನೆಯ ವಿದ್ಯುತ್ ಉಪ-ವಿಭಾಗಕ್ಕೆ ಸಂಬಂಧಿಸಿದಂತೆ ಒಟ್ಟು ಮೊತ್ತ **ರೂ. 43.00 ಲಕ್ಷದ 02 ಸಂಖ್ಯೆ ಖರೀದಿ / ದುರಸ್ಥಿ** ಕಾಮಗಾರಿಯನ್ನು ಕೈಗೊಳ್ಳುವ ಸಂಬಂಧ ನೊಂದಾಯಿತ ಅರ್ಹ ಗುತ್ತಿಗೆದಾರರು / ಏಜೆನ್ಸಿ / ತಯಾರಕರು / ಸಂಸ್ಥೆಯಿಂದ ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ ಟೆಂಡರ್ ಆಹ್ವಾನಿಸಲಾಗಿದೆ. (1) ವಿದ್ಯುನ್ಮಾನ (ಇ-ಟೆಂಡರ್) ವ್ಯವಸ್ಥೆ ಮುಖಾಂತರ ಮಾತ್ರ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ **01-10-2024 ಸಂಜೆ 5.30 ಗಂಟೆಯವರೆಗೆ.** (2) ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ **ದಿನಾಂಕ ಮತ್ತು ಸಮಯ : 03-10-2024 ಬೆಳಿಗ್ಗೆ 11.00 ಗಂಟೆಯ ನಂತರ** (3) ಟೆಂಡರ್‌ನ ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : **04-10-2024 ಬೆಳಿಗ್ಗೆ 11.00 ಗಂಟೆಯ** ನಂತರ ಅಥವಾ ನಂತರ ದಿನಗಳಲ್ಲಿ ತೆರೆಯಲಾಗುವುದು. (4) ಟೆಂಡರ್‌ಗಿಟ್ಟಿರುವ ಗರಿಷ್ಠ ಮೊತ್ತ ರೂ. 23.00 ಲಕ್ಷಗಳು ಹಾಗೂ ಕನಿಷ್ಠ ಮೊತ್ತ **ರೂ. 20.00 ಲಕ್ಷಗಳು,** ಟೆಂಡರ್‌ನ ನಿಬಂಧನೆಗಳು. ಷರತ್ತುಗಳು ಹಾಗೂ ಕಾಮಗಾರಿಯ ಹೆಚ್ಚಿನ ವಿವರಗಳಿಗೆ **http://www.kppp.karnataka.gov.in** ಅಂತರ್ಜಾಲದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯ ಎಲ್ಲಾ ದಿನಗಳಂದು ಪಡೆಯಬಹುದು. ಒಂದು ವೇಳೆ ಮೇಲೆ ನೀಡಲಾಗಿರುವ ದಿನಗಳು ಸಾರ್ವಜನಿಕ ರಜಾ ದಿನಗಳಾಗಿದ್ದಲ್ಲಿ ಅನಂತರದ ದಿನಗಳನ್ನು ಪರಿಗಣಿಸಲಾಗುವುದು.

ಸಹಿ/- ಉಪ ನಿರ್ದೇಶಕರು
ಮೈಸೂರು ಅರಮನೆ ಮಂಡಳಿ, ಮೈಸೂರು

DIPR/MYS/KAVITA/569/2024-25

ನಕ್ಕರೆ ಅದೇ ಸ್ವರ್ಗ

ಹುಡುಗ : ನಿಮ್ಮ ನಾಯಿ ಯಾಕೆ ಅಷ್ಟು ಸಿಟ್ಟಿನಿಂದ ನೋಡ್ತಾಯಿದೆ?
ಹುಡುಗಿ : ನೀ ಜಲ್ದಿ ಊಟ ಮಾಡು.
ಅದು ಅದರ ಪ್ಲೇಟ್ ಗೊತ್ತು ಹಿಡಿದೈತಿ.

ಮೈಸೂರು ಮಿತ್ರ

ಬುಧವಾರ, 18 ಸೆಪ್ಟೆಂಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಜೀವನದಲ್ಲಿ ಸದಾ ಸಂತೋಷವಾಗಿರಬೇಕು. ಅಂದರೆ ಭಾವನೆಗಳ ಕೈಗೆ ಬದುಕನ್ನು, ನೆನಪುಗಳ ಕೈಗೆ ಮನಸ್ಸನ್ನು, ಆಸೆಗಳ ಕೈಗೆ ಬುದ್ದಿಯನ್ನು, ಜನರ ಮಾತುಗಳಿಗೆ ಕಿವಿಯನ್ನು ಯಾವತ್ತಿಗೂ ಕೊಡದೇ ಇದ್ದರೆ ಸಾಕು!

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹಾರುವನ ತೊತ್ತಾಗಬೇಡ
ಗಾಣಿಗನ ಎತ್ತಾಗಬೇಡ.

ನಿಮ್ಮ ಪತ್ರಗಳು

ಚಾಮುಂಡಿಬೆಟ್ಟದಲ್ಲಿ ಶುಚಿ, ರುಚಿಕರ ಪ್ರಸಾದಕ್ಕೆ ಆದ್ಯತೆ ನೀಡಲಿ

ಮಾನ್ಯರೆ,

ಮೈಸೂರಿನ ಇತಿಹಾಸ ಪ್ರಸಿದ್ಧ ಚಾಮುಂಡಿಬೆಟ್ಟಕ್ಕೆ ಶ್ರೀ ಚಾಮುಂಡೇಶ್ವರಿ ದೇವಿಯ ದರ್ಶನ ಮಾಡಲು ದೇಶದ ನಾನಾ ಮೂಲೆಗಳಿಂದ ಪ್ರತಿನಿತ್ಯ ಸಾವಿರಾರು ಭಕ್ತರು ಆಗಮಿಸುತ್ತಾರೆ. ಬರುವ ಭಕ್ತರಿಗೆಲ್ಲ ಧಾರ್ಮಿಕ ದತ್ತಿ ಇಲಾಖೆ ವತಿಯಿಂದ ಪ್ರತಿದಿನ ಮೂರು ಹೊತ್ತು ಪ್ರಸಾದ ವ್ಯವಸ್ಥೆಯನ್ನು ಮಾಡಿರುವುದು ಸ್ವಾಗತಾರ್ಹ. ಆದರೆ ಗುಣಮಟ್ಟ ಸ್ವಲ್ಪ ಹೆಚ್ಚಿಸಿದಲ್ಲಿ ಒಳ್ಳೆಯದು. ಯಾಕೆಂದರೆ ಜೀವನದಲ್ಲಿ ಒಂದೇ ಬಾರಿ ಪ್ರಸಾದ ಸ್ವೀಕರಿಸುವ ಬಹುಸಂಖ್ಯಾತ ಭಕ್ತರಿದ್ದಾರೆ.

ಅವರಿಗೆ ಚಾಮುಂಡಿಬೆಟ್ಟ ಒಂದು ಒಳ್ಳೆಯ ನೆನಪಾಗಿ ಜೀವನದಲ್ಲಿ ಉಳಿಯಲು ರುಚಿ, ಶುಚಿಯಾದ ಪ್ರಸಾದ ವ್ಯವಸ್ಥೆ ಮಾಡಬೇಕಾಗಿರುತ್ತದೆ. ಭಕ್ತರು ಮತ್ತೊಮ್ಮೆ ಚಾಮುಂಡಿಬೆಟ್ಟಕ್ಕೆ ಆಗಮಿಸಿ ಪ್ರಸಾದವನ್ನು ಸ್ವೀಕರಿಸುವಂತೆ ಅಚ್ಚುಕಟ್ಟಾದ ಪ್ರಸಾದ ವ್ಯವಸ್ಥೆಯನ್ನು ಸಂಬಂಧಪಟ್ಟವರು ಮಾಡಬೇಕು. ಕಾಟಾಚಾರಕ್ಕೆ ಮಾಡಬಾರದು. ಚಾಮುಂಡಿಬೆಟ್ಟಕ್ಕೆ ಆದಾಯವೇನು ಕಡಿಮೆ ಇಲ್ಲ. ಸಾಕಷ್ಟು ಆದಾಯ ಬರುತ್ತದೆ. ಭಕ್ತರಿಂದ ಬಂದ ಕಾಣಿಕೆಯನ್ನು ಭಕ್ತರಿಗಾಗಿಯೇ ಪ್ರಸಾದದ ರೂಪದಲ್ಲಿ ವಿನಿಯೋಗಿಸುವುದು ಸೂಕ್ತವಲ್ಲವೇ? ಸ್ವೀಕರಿಸುವ ಪ್ರಸಾದ ರುಚಿ ಕಡಿಮೆ ಇದ್ದರೂ ಭಕ್ತರು ಯಾವುದೇ ದೂರನ್ನು ನೀಡುವುದಿಲ್ಲ. ಏಕೆಂದರೆ ಅದನ್ನು ದೇವರ ಪ್ರಸಾದ ಎಂದು ಸ್ವೀಕರಿಸುತ್ತಾರೆ. ಆದರೆ ವ್ಯವಸ್ಥಾಪಕರು ಉತ್ತಮವಾದ ರುಚಿಕಟ್ಟಾದ ಪ್ರಸಾದವನ್ನು ಒದಗಿಸುವುದು ಧರ್ಮ.

ಚಾಮುಂಡಿಬೆಟ್ಟದಿಂದ ಭಕ್ತರು ಹಸಿದುಕೊಂಡು ಹೋಗಬಾರದೆಂಬುದೇ ನಮ್ಮ ಉದ್ದೇಶವಾಗಿದೆ. ಆದ್ದರಿಂದ ಇದಕ್ಕೆ ಸಂಬಂಧಪಟ್ಟವರು ದಯವಿಟ್ಟು ಸೂಕ್ತ ಕ್ರಮವನ್ನು ವಹಿಸಬೇಕೆಂದು ವಿನಮ್ರತೆಯಿಂದ ವಿನಂತಿಸಿಕೊಳ್ಳುತ್ತೇನೆ.

–ಪರಶಿವಮೂರ್ತಿ ಎನ್ ಪಿ, ನಂಜೀಪುರ, ಸರಗೂರು ತಾಲೂಕು.

ಹಾಲಿನ ದರ ಏರಿಕೆ ಬೇಡ

ಮಾನ್ಯರೆ,

ಮಾಗಡಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯನವರು, ಮಾಗಡಿ ಶಾಸಕರು ಮತ್ತು ಸಹಕಾರ ಸಚಿವ ಕೆ.ಎನ್. ರಾಜಣ್ಣನವರ ಒತ್ತಡಕ್ಕೆ ಮಣಿದು ಹಾಲಿನ ದರವನ್ನು ಮತ್ತೆ 5 ರೂ. ಏರಿಸಲಾಗುವುದು ಎಂದು ತಿಳಿಸಿದ್ದಾರೆ. ಇದು ರೈತರನ್ನು ಮೆಚ್ಚಿಸಿ ಜನರ ಗಮನವನ್ನು ಬೇರೆಡೆ ಸೆಳೆಯುವ ತಂತ್ರದಂತೆ ಕಾಣುತ್ತಿದೆ.

ಹಾಲಿನ ದರ ಏರಿಸಿ ಇನ್ನೂ ಸರಿಯಾಗಿ 3 ತಿಂಗಳೂ ಕೂಡ ಆಗಿಲ್ಲ. ಆಗಲೇ ಮತ್ತೆ ದರ ಏರಿಸುವುದು ಎಂದರೇನು? 50 ಎಂಎಲ್ ಹೆಚ್ಚಿಗೆ ನೀಡಿ ಪ್ರತಿ ಅರ್ಧ ಲೀಟರ್‌ಗೆ 2 ರೂ ದರ ಹೆಚ್ಚಿಸಲಾಯಿತು (ಲೀಟರ್‌ಗೆ 4 ರೂ). ಇದರಿಂದಾಗಿ ಗ್ರಾಹಕರಿಗೆ ತಿಂಗಳಿಗೆ ಹೆಚ್ಚುವರಿ ಹೊರೆ ಆಯಿತು. ಹಾಲು ಹೆಚ್ಚುವರಿಯಾಗಿ 50 ಎಂಎಲ್ ನೀಡಿದ್ದರೂ ಅದು ಗ್ರಾಹಕರಿಗೆ ಲಾಭವೇನೂ ಆಗಲಿಲ್ಲ. ಏಕೆಂದರೆ ಅದು ಹೆಚ್ಚು ಇದೆ ಎಂದು ಕಾಣುವುದಿಲ್ಲ. ಆದರೆ ತಿಂಗಳ ಬಜೆಟ್ ಮಾತ್ರ ಗ್ರಾಹಕರಿಗೆ ಏರಿಕೆಯಾಯಿತು.

ಈಗ ಮತ್ತೆ 5 ರೂ. ಏರಿಕೆಯ ಪ್ರಸ್ತಾಪವೇಕೆ? ವಾಸ್ತವವಾಗಿ ಹೈನುಗಾರರಾಗಲಿ, ರೈತ ಸಂಘದವರಾಗಲಿ ದರ ಏರಿಸಿ ಎಂದು ಪ್ರಸ್ತಾಪ ಮಾಡುತ್ತಿಲ್ಲ. ನಿಜವಾಗಿ ಈ ಒತ್ತಡ ಬರುತ್ತಿರುವುದು ಈ ಹಾಲು ಒಕ್ಕೂಟಗಳ ಮಂದಿಯಿಂದ ಎನ್ನುವುದು ಗಮನಾರ್ಹ.

ಹೈನುಗಾರರಿಗೆ ಲೀಟರ್‌ಗೆ ಹೆಚ್ಚೆಂದರೆ 26 ರೂ. ನೀಡುತ್ತಾರೆ. ಆದರೆ ಗ್ರಾಹಕರಿಂದ ಕೇವಲ ಅರ್ಧ ಲೀಟರ್ ಹಾಲಿಗೇ 24 ರಿಂದ 27 ರೂ ವರೆಗೂ ಪಡೆಯುತ್ತಾರೆ. ಕೇವಲ 250 ಎಂಎಲ್ ಹಾಲಿಗೆ 13 ರೂ, 200 ಗ್ರಾಂ ಮೊಸರಿಗೆ 12 ರೂ ಪಡೆಯುತ್ತಾರೆ. 200 ಗ್ರಾಮ್ ನಂದಿನಿ ತುಪ್ಪದ ಬೆಲೆ ಪ್ರಸ್ತುತ 141 ರೂ. ಇದೆ.

ಹಾಲು ಒಕ್ಕೂಟಗಳು ರೈತರು ಕೇಳದಿದ್ದರೂ ಹಾಲು ಖರೀದಿ ದರವನ್ನು ತಾತ್ಕಾಲಿಕವಾಗಿ ಬೇಕಂತಲೇ ಏರಿಸಿ ರೈತರಿಗೆ ನೀಡಿದೆವೆಂದು ಸರ್ಕಾರಕ್ಕೆ ಬೆಲೆ ಏರಿಕೆಯ ಪ್ರಸ್ತಾಪ ಮಾಡುತ್ತಿವೆ. ಸರ್ಕಾರ ಬೆಲೆ ಹೆಚ್ಚು ಮಾಡುತ್ತದೆ. ಹಾಗೆಯೇ ನಂತರ ಹಾಲು ಉತ್ಪಾದನೆ ಹೆಚ್ಚಿದೆ ಎಂದೋ ಹಾಲು ಒಕ್ಕೂಟ ನಷ್ಟದಲ್ಲಿದೆ ಎಂದೋ ನಂತರ ರೈತರಿಗೆ ನೀಡುತ್ತಿದ್ದ ಹಾಲಿನ ದರವನ್ನು ಕಡಿತ ಮಾಡಿ ಹೈನುಗಾರರನ್ನೂ ಸುಲಿಯಲಾಗುತ್ತದೆ. ಇದು ವಾಸ್ತವ ಚಿತ್ರಣ. ಹೀಗಿರುವಾಗ ಪ್ರತಿ ಬಾರಿ ಹಾಲು ದರ ಏರಿಸಿ ಗ್ರಾಹಕರನ್ನು ಸುಲಿಯುವ ಕೆಲಸವನ್ನು ಸರ್ಕಾರ ಕೈ ಬಿಡಬೇಕು. ಕೆಎಂಎಫ್., ಒಕ್ಕೂಟಗಳಲ್ಲಿ ಇರುವ ಸಿಬ್ಬಂದಿ ಸಂಖ್ಯೆ ಅಗತ್ಯಕ್ಕೆ ತಕ್ಕಂತೆ ಇರುವುದೇ? ಹೆಚ್ಚುವರಿ ಇರುವುದೇ? ನೇಮಕಾತಿಗಳು ಸರ್ಕಾರದ ಅನುಮತಿ ಇಲ್ಲದೆ ನಡೆಯುತ್ತಿವೆಯೇ? ಎಂಬ ಬಗ್ಗೆ ಗಮನಹರಿಸಿ ಅನಗತ್ಯ ವೆಚ್ಚಗಳನ್ನು ಕಡಿಮೆ ಮಾಡಬೇಕು. ಒಕ್ಕೂಟಗಳ ಆಡಳಿತ ಪಾರದರ್ಶಕವಾಗಿ ನಡೆಯುವಂತೆ ಸರ್ಕಾರ ಗಮನ ಹರಿಸಬೇಕು.

ಒಂದು ವೇಳೆ ಹೈನುಗಾರರಿಗೆ ಇನ್ನೂ ಹೆಚ್ಚುವರಿ ಲೀಟರ್‌ಗೆ 5 ರೂ. ಕೊಡುವ ಪ್ರಸ್ತಾಪವಿದ್ದರೆ ಈಗ ಸರ್ಕಾರದ ವತಿಯಿಂದ ನೀಡುತ್ತಿರುವ 5 ರೂ. ಜೊತೆಗೆ ಇನ್ನೂ 5 ರೂ ಸೇರಿಸಿ ಸರ್ಕಾರದ ವತಿಯಿಂದಲೇ ನೀಡುವಂತಾಗಲಿ. ಅದಕ್ಕೆ ಗ್ರಾಹಕರ ತಕರಾರು ಇರುವುದಿಲ್ಲ.

–ಮುಳ್ಳೂರು ಪ್ರಕಾಶ್, ಕನಕದಾಸನಗರ ಮೈಸೂರು.


ಗಣೇಶೋತ್ಸವದ ಮೆರವಣಿಗೆ

ಮಾನ್ಯರೆ,

ಗಣೇಶನ ಹಬ್ಬ ಸರ್ವ ಜಾತಿ ಪಂಥಗಳ ಒಗ್ಗೂಡಿಸುವ ಭಾವೈಕ್ಯದ ಹಬ್ಬ. ಎಲ್ಲರ ಮನದಲ್ಲೂ ಸಕಾರಾತ್ಮಕ ಭಾವನೆ ತುಂಬಿ ಏಕಾಗ್ರತೆ ಹೆಚ್ಚಿಸಿ ಭಕ್ತಿ ಭಾವ ಮೂಡುವಂತೆ ಮಾಡುವ ಉತ್ಸವ. ಒಗ್ಗಟ್ಟು, ಏಕತೆ ಸಾರಿ ಎಲ್ಲರೂ ಒಂದಾಗಿ ನಲಿದು ಕಲೆತು ಆನಂದಿಸುವ ಹಬ್ಬ.

ಗಣೇಶನ ಶೋಭಾಯಾತ್ರೆಯಲ್ಲಿ ಕೆಲವರು ಕೆಟ್ಟ ಸಿನಿಮಾ ಹಾಡುಗಳನ್ನು ಹಾಕಿಕೊಂಡು ಅಸಭ್ಯವಾದ ರೀತಿಯಲ್ಲಿ ಕುಣಿದು, ಡಿಜೆ ಪಾರ್ಟಿ ಮಾಡುವುದು ಎಷ್ಟು ಸರಿ? ಇದು ನಮ್ಮ ಭಾರತೀಯರ ಸಂಸ್ಕೃತಿಯೇ? ಯೋಚಿಸಲೇ ಬೇಕಾದ ವಿಷಯ. ಗಣೇಶನ ಮೆರವಣಿಗೆ ವೇಳೆಯಲ್ಲಿ ನಮ್ಮ ನೆಲದ ಹಳೆಯ ನೃತ್ಯಗಳು, ಕೋಲಾಟ, ಪದಗಳು, ಭಜನೆ, ಭಕ್ತಿ ಪ್ರಧಾನ ಗೀತೆಗಳನ್ನು ಹಾಡಿದರೆ ಅರ್ಥಪೂರ್ಣ ಅಲ್ಲವಾ. ನಮ್ಮ ಮುಂದಿನ ಪೀಳಿಗೆಯವರಿಗೆ ನಮ್ಮ ಗಣಪನ ಪೂಜೆ ಮೆರವಣಿಗೆಯ ಜೊತೆಗೆ ನಮ್ಮ ನೆಲದ ಸಂಸ್ಕೃತಿಯನ್ನು ಬಿಂಬಿಸುವ ಹಾಗೂ ಮುನ್ನಡೆಸುವ ರಹದಾರಿಯನ್ನು ಹಾಕಿಕೊಡುವ ಗುರುತರ ಜವಾಬ್ದಾರಿ ನಮ್ಮ ನಿಮ್ಮೆಲ್ಲರ ಮೇಲಿದೆ. ಮುಂದಿನ ಬಾರಿಯಾದರೂ, ನಾದಸ್ವರದ ನಾದ, ಭಜನೆಗಳು, ಕೋಲಾಟದ ಸಂಭ್ರಮ, ಜಾನಪದ ಕಲೆಗಳ ಸೊಗಡು ನಿರೀಕ್ಷಿಸೋಣ ಹಾಗೂ ಉತ್ತಮ ಕಲೆ ಸಂಗೀತಗಳಿಗೆ ಪ್ರೋತ್ಸಾಹಿಸೋಣ ಎಂಬ ಕಳಕಳಿಯ ಮನವಿ.

–ಪುಷ್ಪಲತಾ ಫಣಿರಾಜ್, ಅಗ್ರಹಾರ, ಮೈಸೂರು.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ

ನೃತ್ಯಶಾಸ್ತ್ರ ಮಂಜರಿ

ಮೈಸೂರು ಕಲೆಗಳ ತವರು ಮನೆ, ನೃತ್ಯದ ಅರಮನೆ. ಇಲ್ಲಿ ನರ್ತನದಲ್ಲಿ ಪರಿಣಿತರಾದ ಹಲವಾರು ಕಲಾವಿದರಿದ್ದಾರೆ. ಅನೇಕ ಕಲಾಶಾಲೆಗಳಲ್ಲಿ ವಿದ್ಯಾರ್ಥಿಗಳು ನೃತ್ಯಾಭ್ಯಾಸವನ್ನು ಮಾಡುತ್ತಿದ್ದಾರೆ. ಪ್ರಯೋಗ ಪ್ರಧಾನಂ ಹಿ ನಾಟ್ಯಶಾಸ್ತ್ರಮ್ ಎಂಬ ಕಾಳಿದಾಸೋಕ್ತಿಗೆ ಅನುಸಾರವಾಗಿ ನಿರಂತರವಾಗಿ ಸುಂದರ ರಮಣೀಯ ನೃತ್ಯಗಳ ಪ್ರದರ್ಶನವೂ ಇಲ್ಲಿ ನಡೆಯುತ್ತಿದೆ. ಮೈಸೂರಿನ ಕಲಾವಿದರ ಕೀರ್ತಿ ರಾಷ್ಟ್ರದಲ್ಲೇ ಅಲ್ಲದೆ ಸಾಗರದಾಚೆಗೂ ಹರಡಿದೆಯೆಂಬುದು ಆನಂದದ ಕಾರಣ, ಹೆಮ್ಮೆಯ ಸಂಗತಿ. ಈ ಕ್ಷೇತ್ರದಲ್ಲಿ ಮಹಿಳೆಯರು ಪ್ರಮುಖರಾಗಿದ್ದಾರೆಂಬುದೂ ಸುವಿದಿತ. ವಸುಂಧರಾ ದೊರೆಸ್ವಾಮಿ, ಕೃಪಾ ಫಡ್ಕೆ, ತುಳಸಿ ರಾಮಚಂದ್ರ, ನಾಗಲಕ್ಷ್ಮೀ ನಾಗರಾಜ್ ಮುಂತಾದವರೆಲ್ಲ ನಾಟ್ಯ ಸರಸ್ವತಿಯ ಸಪರ್ಯೆಯನ್ನು ಮಾಡಿ ಧನ್ಯರಾಗುತ್ತಿದ್ದಾರೆ.

ಹಾಗಾದರೆ ನೃತ್ಯಾಂಗಣದಲ್ಲಿ ಪುರುಷರ ಕೊಡುಗೆ ಏನು? ನೃತ್ಯದ ಆರಂಭ ಶಿವನಿಂದ ಆಯಿತು. ಅವನ ನೃತ್ಯವೇ ತಾಂಡವ. ಅನಂತರ ಸೇರಿಕೊಂಡದ್ದು ಪಾರ್ವತಿಯ ಲಾಸ್ಯ. ಜಗತ್ತಿನ ಎಲ್ಲಾ ನೃತ್ಯಗಳಿಗೆ ಆಧಾರವಾದ ನಾಟ್ಯವನ್ನು ವಿವರಿಸುವ ನಾಟ್ಯ ಶಾಸ್ತ್ರವನ್ನು ರಚಿಸಿದವನು ಭರತಮುನಿ. ಅಭಿನಯ ದರ್ಪಣ, ನರ್ತನ ನಿರ್ಣಯ ಮುಂತಾದ ಶಾಸ್ತ್ರ ಗ್ರಂಥಗಳನ್ನು ರಚಿಸಿದವರೂ ಪುರುಷರೇ. ಹಾಗೆ ಇಂದು ಮೈಸೂರಿನಲ್ಲಿ ನೃತ್ಯಶಾಸ್ತ್ರದ ಗುರುವಾಗಿ, ಶಾಸ್ತ್ರ ಪ್ರತಿಪಾದಕ ಲೇಖಕರಾಗಿ, ಪ್ರಯೋಗ ಪ್ರವೀಣರಾಗಿ ಕಲಾ ಸೇವೆಯನ್ನು ಮಾಡುತ್ತಿರುವ ಆದರಣೀಯ ಕಲಾವಿದರು ಪ್ರೊ.ಕೆ.ರಾಮಮೂರ್ತಿರಾವ್. ಮೈಸೂರಿನ ಸುಸಂಸ್ಕೃತ ವ್ಯಕ್ತಿಗಳ ಪಟ್ಟಿಯನ್ನು ಮಾಡಲು ಹೊರಟಾಗ ಮನಸ್ಸಿಗೆ ಮೊದಲು ಬರುವುದು ಇವರ ಹೆಸರು.

ವೈವಿಧ್ಯಮಯ ವ್ಯಕ್ತಿತ್ವ

ಪ್ರೊ.ಕೆ.ರಾಮಮೂರ್ತಿರಾವ್ ಜೆಎಸ್‌ಎಸ್ ಮಹಾ ವಿದ್ಯಾಪೀಠದ ವಿದ್ಯಾಸಂಸ್ಥೆಗಳಲ್ಲಿ ದೀರ್ಘಕಾಲ ವಾಣಿಜ್ಯ ಶಾಸ್ತ್ರದ ಪ್ರಾಧ್ಯಾಪಕರಾಗಿ ಸಾವಿರಾರು ವಿದ್ಯಾರ್ಥಿಗಳಿಗೆ ವಿದ್ಯಾದಾನವನ್ನು ಮಾಡಿದ್ದಾರೆ. ನಂಜನಗೂಡು ಜೆಎಸ್‌ಎಸ್ ಕಾಲೇಜಿನ ಪ್ರಾಂಶುಪಾಲರಾಗಿದ್ದು ನಿವೃತ್ತರಾಗಿದ್ದಾರೆ. ಅದು ವೃತ್ತಿ. ಪ್ರವೃತ್ತಿಯಲ್ಲಿ ಅವರು ಕಲಾವಿದರು. ಕೀರ್ತಿಶೇಷ ಎಂ.ವಿಷ್ಣುದಾಸ್ ಅವರ ಶಿಷ್ಯರು. ಜೊತೆಗೆ ಶ್ರೇಷ್ಠ ಲೇಖಕರು, ಅಂಕಣಕಾರರು. ನಾಟ್ಯ ಸರಸ್ವತಿ ಜಟ್ಟಿ ತಾಯಮ್ಮ, ನೃತ್ಯ ದರ್ಪಣ, ಕಲಾಚಿಂತನ, ಮಾಸದ ಮಾತು ಮುಂತಾದವು ಅವರ ಕೃತಿಗಳು. ಹಲವಾರು ಪ್ರಶಸ್ತಿಗಳು ಅವರನ್ನು ಅಲಂಕರಿಸಿವೆ. ಅವರ ಈಚಿನ ಕೃತಿ **ನೃತ್ಯ ಶಾಸ್ತ್ರ ಮಂಜರಿ**. ಐನೂರು ಪುಟಗಳಲ್ಲಿ ಹರಡಿಕೊಂಡಿರುವ ಈ ಬೃಹತ್ ಗ್ರಂಥ ನೃತ್ಯಕ್ಕೆ ಸಂಬಂಧಿಸಿದ ಸಕಲ ಮುಖ್ಯ ವಿಷಯಗಳಿಗೆ ಕೈಪಿಡಿಯಾಗಿದೆ. ಸಾಮಾನ್ಯ ಜನರೂ ಓದಿ ಆನಂದಿಸಬಹುದಾದ ಸರಳ ಶೈಲಿಯಲ್ಲಿ ಗಹನ ವಿಷಯಗಳನ್ನು ಪ್ರತಿಪಾದಿಸಿರುವುದು ಇದರ ವೈಶಿಷ್ಟ್ಯ. ಇದರಲ್ಲಿ ಮೂವತ್ತು ಅಧ್ಯಾಯಗಳಿದ್ದು, ಭಾರತೀಯ ಸಂಸ್ಕೃತಿಯ ಉನ್ನತಿಯನ್ನು ಪ್ರತಿಬಿಂಬಿಸುವ ಪ್ರಯತ್ನವನ್ನು ಲೇಖಕರು ಮಾಡಿ ಸಫಲರಾಗಿದ್ದಾರೆ ಎಂದು ನಿಸ್ಸಂದೇಹವಾಗಿ ಹೇಳಬಹುದು.


ಪ್ರೊ.ರಾಮಮೂರ್ತಿರಾವ್ ಕಲೆಯನ್ನು ಜೀವನೋಪಾಯವೆಂದು ಪರಿಗಣಿಸಿಲ್ಲ. ಅದು ದೈವಾರಾಧನೆಯ ಪ್ರಕಾರವೆಂದೇ ಭಾವಿಸಿದ್ದಾರೆ. ಅವರು ಹೇಳಿದ್ದಾರೆ–

'ಭಾರತೀಯ ಕಲೆಗಳಲ್ಲಿ ಆಧ್ಯಾತ್ಮಿಕತೆ ಇದೆ. ಇದನ್ನು ನಾವು ದೈವಾರಾಧನೆಯ ಒಂದು ಭಾಗವೆಂದೇ ಭಾವಿಸುತ್ತೇವೆ (ಪು.3) ಮೂಲವಿಕಾಗ್ನಿ ಮಿತ್ರದಲ್ಲಿ ಮಹಾಕವಿ ಕಾಳಿದಾಸನು ನಾಟ್ಯದ ಬಗೆಗೆ ಹೇಳಿದ.

'ದೇವಾನಾಮಿದಮಾಮನಂತಿ ಮುನಯಃ ಶಾಂತಂ ಕ್ರತುಂ ಚಾಕ್ಷುಷಂ' (ಋಷಿಗಳು ನಾಟ್ಯವನ್ನು ದೇವತೆಗಳಿಗಾಗಿ ಮಾಡುವ ಚಾಕ್ಷುಷ ಯಜ್ಞ ಎಂದು ತಿಳಿಯುತ್ತಾರೆ) ಎಂಬುದು ಇಲ್ಲಿ ನೈಸರ್ಗಿಕವಾಗಿ ಪ್ರತಿಫಲಿತವಾಗಿದೆ. ಭಾರತ ದೇಶದ ನಾನಾ ನೃತ್ಯ ಪ್ರಕಾರಗಳನ್ನು ಪರಿಚಯಿಸುವಾಗ ಪ್ರೊ.ರಾಮಮೂರ್ತಿರಾವ್ ಅನೇಕ ಐತಿಹಾಂಶಗಳನ್ನು ತಿಳಿಸುತ್ತಾರೆ. ಇಲ್ಲಿ ಹಲವು ಅಪೂರ್ವ ಮಾಹಿತಿಗಳು ದೊರಕುತ್ತವೆ. ಉದಾಹರಣೆಗೆ ಮಣಿಪುರಿ ನೃತ್ಯದ ಬಗೆಗೆ ಅವರ ಮಾತುಗಳನ್ನು ಕೇಳೋಣ:

"1764ರಲ್ಲಿದ್ದ ಮಹಾರಾಜ ಭಾಗ್ಯಚಂದ್ರನು ಚೈತನ್ಯ ಪ್ರಭುವಿನ ಶಿಷ್ಯರಾದ ಶ್ರೀ ಪರಮಾನಂದ ಠಾಕೂರರ ಪ್ರೇರಣೆಯಿಂದ ವೈಷ್ಣವ ಮತವನ್ನು ಸ್ವೀಕರಿಸಿ ಎಲ್ಲಾ ಕಲೆಗಳಿಗೂ ಪ್ರೋತ್ಸಾಹ ನೀಡಿದನು. ಸ್ವತಃ ಕವಿಯೂ ಕಲಾರಸಿಕನೂ ಆಗಿದ್ದ ಅವನು ಮಣಿಪುರಿ ನೃತ್ಯವನ್ನು ಉನ್ನತ ಮಟ್ಟಕ್ಕೆ ತಂದನು. 'ಭಂಗಿ ಪರಂಗ್' (ಭಂಗಿಗಳ ಸಮೂಹ, 'ರಾಸಲೀಲಾ' ನೃತ್ಯಗಳನ್ನು ಮತ್ತು ಅತ್ಯಂತ ಸೊಬಗಿನಿಂದ ಕೂಡಿದ ಮಣಿಪುರಿ ನೃತ್ಯದ ವೇಷಭೂಷಣಗಳನ್ನೂ ಆತನೇ ನಿರೂಪಿಸಿದನೆಂದು ಹೇಳಲಾಗುತ್ತದೆ). ಅವನು 'ಗೋವಿಂದಜೀ' ಎಂಬ ಪ್ರಸಿದ್ಧ ದೇವಾಲಯವನ್ನೂ ಕಟ್ಟಿಸಿ ಅದರ ಮುಂದೆ ರಾಸಮಂಡಲವನ್ನೂ ನಿರ್ಮಿಸಿದನು. ಈತನ ಪುತ್ರಿ 'ಲೈಮಾ ಲೈರೋಬಿ' ಎಂಬಾಕೆ ಕೂಡ ಅದ್ಭುತ ಕಲಾವಿದೆಯಾಗಿದ್ದು ಈ ರಾಸಮಂಡಲದಲ್ಲಿ ರಾಧೆಯ ಪಾತ್ರ ವಹಿಸಿ ಮೊದಲು ಕುಣಿಯುವ ಕಲಾವಿದೆಯೆಂದು ಹೇಳುತ್ತಾರೆ. ಈ ಭಾಗ್ಯಚಂದ್ರ ಮಹಾರಾಜನ ಕಾಲ ಮಣಿಪುರಿ ನೃತ್ಯದ ಸುವರ್ಣಯುಗವೆನಿಸಿದ್ದು ನಂತರ 1886ರಲ್ಲಿ ಮಹಾರಾಜ ಚಂದ್ರಕೀರ್ತಿ ಸಿಂಗ್‌ರವರ ನಿಧನದ ನಂತರ ಇದಕ್ಕೆ ಪ್ರೋತ್ಸಾಹ ದೊರೆಯದಾಯ್ತು. ಕ್ರಿ.ಶ. 1891ರಲ್ಲಿ ಮಣಿಪುರವು ಬ್ರಿಟಿಷರ ಅಧೀನವಾಯ್ತು. ಅಂದಿನಿಂದ ನೃತ್ಯವು ಹೀನವೃತ್ತಿ ಎಂದು ಪ್ರಚಾರ ಮಾಡಲಾಯಿತು. ಆದರೆ ಮುಂದೆ ಕೆಲವೇ ವರ್ಷಗಳಲ್ಲಿ ಈ ನೃತ್ಯದ ಪುನರುತ್ಥಾನವಾಗಿ 'ಗೋವಿಂದಜೀ' ದೇವಾಲಯದಲ್ಲಿ ನೃತ್ಯ ನಡೆಯಲಾರಂಭಿಸಿತು. ರವೀಂದ್ರನಾಥ ಠಾಕೂರ್‌ರವರು ಈ ನೃತ್ಯದ ವೈಶಿಷ್ಟ್ಯಕ್ಕೆ ಮನಸೋತು ತಾವು ಸ್ಥಾಪಿಸಿದ 'ಶಾಂತಿನಿಕೇತನ'ದಲ್ಲಿ ಈ ಕಲೆಗೆ ಪ್ರೋತ್ಸಾಹ ಕೊಟ್ಟರು" (ಪು. 184–185)

ಇಂತಹ ಅಪೂರ್ವ ಮಾಹಿತಿಗಳು ಇಲ್ಲಿ ಲಭ್ಯ. ನೃತ್ಯ ಶಾಸ್ತ್ರದಲ್ಲಿ ಬರುವ ಗತಿಭೇದಗಳನ್ನು ಮಾತಿನಲ್ಲಿ ಎಷ್ಟು ಹೇಳಿದರೂ ಸಾಕ್ಷಾತ್ ನೋಡದೆ ಅವು ಸ್ಪಷ್ಟವಾಗುವುದಿಲ್ಲ. ಅದಕ್ಕಾಗಿ ಈ ಪುಸ್ತಕದಲ್ಲಿ ಆ ಗತಿಭೇದಗಳನ್ನು ತೋರಿಸುವ ಚಿತ್ರಗಳನ್ನು ಕೊಟ್ಟಿದ್ದಾರೆ.



ನೃತ್ಯ ಕಲಾವಿದರ ಜೀವನ ಚರಿತ್ರೆ

ಇಪ್ಪತ್ತೊಂಬತ್ತನೆಯ ಅಧ್ಯಾಯದಲ್ಲಿ ವಿವಿಧ ಪ್ರಕಾರದ ನೃತ್ಯಗಳ ಮುಖ್ಯ ಕಲಾವಿದರ ಜೀವನ ಚರಿತ್ರೆಗಳನ್ನು ಗ್ರಂಥಕಾರರು ಹೃದಯಂಗಮವಾಗಿ ಚಿತ್ರಿಸಿದ್ದಾರೆ. ಇವರಲ್ಲಿ ಅನೇಕರ ಹೆಸರನ್ನು ನಾವು ಕೇಳಿಲ್ಲ. ಅನರ್ಘ್ಯ ರತ್ನಗಳು ನಮ್ಮಲ್ಲಿದ್ದವು. ಅವನ್ನು ನಾವು ಗುರುತಿಸಿಲ್ಲ.

**Full many a gem of purest ray serene
The unfathorred caves of ocean bear**

ಎಂಬ ಸೂಕ್ತಿ ಇಲ್ಲಿ ನೆನಪಾಗುತ್ತದೆ. ಸಿದ್ದೇಂದ್ರ ಯೋಗಿ, ತಂಜಾವೂರು ಸಹೋದರರು, ಜಯದೇವ, ಕ್ಷೇತ್ರಜ್ಞ, ಬಾಲಸರಸ್ವತಿ, ರುಕ್ಮಿಣಿದೇವಿ ಅರುಂಡೇಲ್, ಜಟ್ಟಿ ತಾಯಮ್ಮ, ಮೂಗೂರು ಜೇಜಮ್ಮ, ಮೀನಾಕ್ಷಿ ಸುಂದರಂ ಪಿಳ್ಳೈ, ಉದಯಶಂಕರ್, ದಂಡಾಯುಧಪಾಣಿ ಪಿಳ್ಳೈ ಎಂಬ ಹನ್ನೊಂದು ಶ್ರೇಷ್ಠ ನರ್ತಕ–ನರ್ತಕಿಯರ ಬದುಕಿನ ಮುಖ್ಯ ಘಟ್ಟಗಳನ್ನು ಚಿತ್ರಿಸುವ ಕೆಲಸವನ್ನು ಪ್ರೊ. ರಾಮಮೂರ್ತಿರಾವ್ ಅವರು ಮಾಡಿದ್ದಾರೆ. ಒಬ್ಬೊಬ್ಬರ ಜೀವನವೂ ಒಂದೊಂದು ಕಾದಂಬರಿಗೆ ಅಥವಾ ಚಲನಚಿತ್ರಕ್ಕೆ ಉತ್ತಮ ವಸ್ತುವಾಗಬಹುದೆನಿಸುತ್ತದೆ. ಅವರು ಸಂಗೀತ ಸಾಹಿತ್ಯದ ಪ್ರಪಂಚಕ್ಕೆ ಕೊಟ್ಟ ಕೊಡುಗೆ ಶ್ಲಾಘನೀಯ. ಕ್ಷೇತ್ರಯ್ಯ ಕ್ಷೇತ್ರಜ್ಞ ಎಂದು ಪ್ರಸಿದ್ಧವಾದ ನರ್ತಕನ ಬಗೆಗೆ ಗ್ರಂಥಕಾರರು ಹೇಳಿದ್ದಾರೆ –

"ಕ್ಷೇತ್ರಜ್ಞ ಅದ್ಭುತ ಪ್ರತಿಭೆಯ ವಾಗ್ಗೇಯಕಾರ. ಪದರಚನೆಯಲ್ಲಂತೂ ಅದ್ವಿತೀಯ. ಅಪೂರ್ವವಾದ ರಾಗಗಳಲ್ಲಿ ಪದಂಗಳನ್ನು ರಚಿಸಿದ್ದಾನೆ. ಪದಗಳಲ್ಲಿ ನಾಯಕ ನಾಯಕಿಯರ ಪ್ರಬುದ್ಧ ಶೃಂಗಾರ ಭಾವವಿದೆ. ಸಾಹಿತ್ಯ ಮತ್ತು ಲಯವಿನ್ಯಾಸಗಳು ಭಾವೋದ್ದೀಪನಗೊಳಿಸುವಂತಿವೆ. ಈ ಪದಂಗಳನ್ನು ನೃತ್ಯಾಭಿನಯಕ್ಕೆಂದು ರಚಿಸಿದ್ದರೂ ಸಂಗೀತ ಕಛೇರಿಗಳಲ್ಲಿ ಹಾಡಲೂ ಹೊಂದುವಂತಿದೆ. ಕ್ಷೇತ್ರಯ್ಯನ ಪದಗಳಲ್ಲಿ ಶೃಂಗಾರ ಮಧುರಭಕ್ತಿಯಿಂದ ಕೂಡಿದೆ. ಸಂಗೀತ ಕ್ಷೇತ್ರದ ತ್ರಿಮೂರ್ತಿಗಳೆನಿಸಿರುವ ತ್ಯಾಗರಾಜರು, ಮುತ್ತುಸ್ವಾಮಿ ದೀಕ್ಷಿತರು ಮತ್ತು ಶ್ಯಾಮಶಾಸ್ತ್ರಿಗಳೇ ಕ್ಷೇತ್ರಯ್ಯನ ಪದಂಗಳನ್ನು ಮೆಚ್ಚಿಕೊಂಡಿದ್ದರು" (ಪು. 424).

ಇದೇ ರೀತಿಯಾಗಿ ಪ್ರೊ.ರಾಮಮೂರ್ತಿರಾವ್ ವಾಗ್ಗೇಯಕಾರರ ಜೀವನ ಚರಿತ್ರೆಗಳನ್ನೂ ಈ ಅಧ್ಯಾಯದಲ್ಲಿ ಕೊಟ್ಟಿದ್ದಾರೆ. ಮೈಸೂರು ಸದಾಶಿವರಾವ್, ವೀಣೆ ಶೇಷಣ್ಣ, ಸ್ವಾತಿ ತಿರುನಾಳ್, ಮೇಲತ್ತೂರು ವೆಂಕಟರಾಮಶಾಸ್ತ್ರಿ, ಧರ್ಮಪುರಿ ಸುಬ್ಬರಾಯರು, ಉತ್ತೂಕ್ಕಾಡು ವೆಂಕಟಸುಬ್ಬಯ್ಯರ್, ಪುರಂದರದಾಸರು, ಕನಕದಾಸರು, ಶ್ರೀಪಾದರಾಯರು, ವ್ಯಾಸರಾಜ ಸ್ವಾಮಿಗಳು, ಶ್ರೀ ವಾದಿರಾಜರು– ಎಂಬ ಮಹಾನುಭಾವರ ಪರಿಚಯವನ್ನು ಮಾಡಿಕೊಟ್ಟಿದ್ದಾರೆ. ನಮ್ಮ ದೇಶದ ಸಂಸ್ಕೃತಿ–ಸಾಹಿತ್ಯಗಳ ಸಿರಿವಂತಿಕೆಗೆ ಇವರ ಕೊಡುಗೆ ಎಷ್ಟು ಅಮೂಲ್ಯವೆಂಬುದನ್ನು ನಾವು ಸದಾ ನೆನೆಯಬೇಕು. ಇವರಲ್ಲಿ ಒಬ್ಬೊಬ್ಬರೂ ಒಂದೊಂದು ಬಂಗಾರದ ಗಣಿ.

ಪ್ರಸ್ತುತ ಗ್ರಂಥದಲ್ಲಿ ನೂರಾರು ವಿಷಯಗಳಿವೆ. ಒಂದೊಂದರ ಬಗೆಗೆ ಒಂದೊಂದು ವಾಕ್ಯವನ್ನು ಹೇಳುವುದೂ ಈ ಪುಟ್ಟ ಲೇಖನದಲ್ಲಿ ಸಾಧ್ಯವಲ್ಲ. ಆಸಕ್ತರು ಗ್ರಂಥವನ್ನೇಕೊಂಡು ಓದಬೇಕು. ಒಂದೊಂದು ಪುಟವನ್ನೂ ಓದಿ ಮೆಲುಕು ಹಾಕಬೇಕು. ಆಗಲೇ ನೃತ್ಯಶಾಸ್ತ್ರದ ಬೃಹದ್ವಿಶ್ವರೂಪ ಗೋಚರಿಸುವುದು. ಸುಮ್ಮನೆ ತಿರುವಿ ಹಾಕಿ ಪಕ್ಕಕ್ಕಿಡಬೇಕಾದ ಪುಸ್ತಕ ಇದಲ್ಲ. ಅಧ್ಯಯನ ಯೋಗ್ಯವಾದ ಗ್ರಂಥ.

ಈ ಗ್ರಂಥಕ್ಕೆ ಪ್ರಾಜ್ಞರಾದ ಡಾ.ಕಬ್ಬಿನಾಲೆ ವಸಂತ ಭಾರದ್ವಾಜರು ಬರೆದಿರುವ ಮುನ್ನುಡಿ ರತ್ನಾಭರಣದಂತಿದೆ. ವಾಚಕರೂ ಅದನ್ನು ಅವಶ್ಯಕವಾಗಿ ಓದಬೇಕು. ಈ ಪುಸ್ತಕವನ್ನು ಪ್ರಕಟಿಸಿರುವ ಸಂವಹನ ಸಂಸ್ಥೆಗೂ ಸಂಸ್ಕೃತಿಪ್ರಿಯರ ಕೃತಜ್ಞತೆ ಸಲ್ಲುತ್ತದೆ.

ನೃತ್ಯಶಾಸ್ತ್ರವು ನಮ್ಮ ಸಂಸ್ಕೃತಿಯ
ಶಿಖರ ಸತ್ಯದಲಿ ಬಹುಯತ್ನ
ಸಾಧ್ಯವಿದು ಜಟಿಲ
ಭೃತ್ಯಭಾವದಿ ಶಾಸ್ತ್ರದರ್ಚನೆಯ
ಮಾಡಿ ನಿತ್ಯ ಶುಭವನು
ಮನುಜಕುಲ ಪಡೆಯಬೇಕು ॥
ಕೆ. ರಾಮಮೂರ್ತಿರಾವ್
ಆಚಾರ್ಯವರ್ಯ ಮಾರಾರಿ
ಕೃಪೆಯಿಂದ ಶಾಸ್ತ್ರಜ್ಞರಾಗಿ
ನೂರಾರು ಶಿಷ್ಯರಿಗೆ ವಿದ್ಯೆಯನು
ಕಲಿಸಿ ಸಾರವನು ಗ್ರಂಥದಲಿ
ಕೊಟ್ಟರೀ ಜಗಕೆ॥
ಅವರ ಪುಸ್ತಕವಿಂದು
ಸಂಗ್ರಹಕೆ ಯೋಗ್ಯ
ವಿವಿಧ ವಿಷಯಗಳಿಂದ
ತುಂಬಿಹುದು ಭೋಗ್ಯ
ಭುವನವೆಲ್ಲಕ್ಕಿದರ
ಸವಿಯುಣುವ ಭಾಗ್ಯ
ಶಿವನ ಕೃಪೆಯಿಂದರ್ಕೆ
ಸರ್ವಜನಾಹೃದ್ಯ॥

ಕಲಬುರಗಿಯಲ್ಲಿ ವಿಶೇಷ ಸಂಪುಟ ಸಭೆ; ಪ್ರತ್ಯೇಕ ಸಚಿವಾಲಯ ಸೇರಿ

ಕಲ್ಯಾಣ ಕರ್ನಾಟಕ ಭಾಗಕ್ಕೆ ಭರಪೂರ ಕೊಡುಗೆ

ಕಲಬುರಗಿ, ಸೆ.17– ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವ ದಲ್ಲಿ ಮಂಗಳವಾರ ಕಲಬುರಗಿಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಕಲ್ಯಾಣ ಕರ್ನಾಟಕಕ್ಕೆ ಪ್ರತ್ಯೇಕ ಸಚಿವಾಲಯ ಸೇರಿದಂತೆ ಭರಪೂರ ಕೊಡುಗೆ ನೀಡಲಾಗಿದೆ.



ಇಂದು ಸಂಜೆ ಮಿನಿವಿಧಾನಸೌಧದಲ್ಲಿ ನಡೆದ ಸಚಿವ ಸಂಪುಟ ಸಭೆ ಬಳಿಕ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಮುಖ್ಯಮಂತ್ರಿ ಸಿದ್ದಾರಾಮಯ್ಯ, ಬಜೆಟ್ ನಲ್ಲಿ ಘೋಷಿಸಿದ್ದ ಕಲ್ಯಾಣ ಕರ್ನಾಟಕ ಭಾಗದ ಎಲ್ಲಾ ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ ಎಂದರು.

ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಪ್ರಸಕ್ತ 2024–25ನೇ ಸಾಲಿನ ಆಯವ್ಯಯದಲ್ಲಿ ದಾಖಲೆ ಪ್ರಮಾಣದಲ್ಲಿ 5,000 ಕೋಟಿ ರೂಪಾಯಿ ಅನುದಾನ ಹಂಚಿಕೆ ಮಾಡಲಾಗಿದೆ ಮತ್ತು ಕೃಷಿ ಇಲಾಖೆಗೆ 100 ಕೋಟಿ ಅನುದಾನ ಮೀಸಲಿಟ್ಟಿದ್ದೇವೆ ಎಂದರು.

ಇಂದು ನಡೆದ ಸಚಿವ ಸಂಪುಟ ಸಭೆಯಲ್ಲಿ 56 ವಿಷಯಗಳಲ್ಲಿ ಕಲ್ಯಾಣ ಕರ್ನಾಟಕಕ್ಕೆ ಸಂಬಂಧಿಸಿದ 46 ವಿಚಾರಗಳನ್ನು ಚರ್ಚಿಸಿದ್ದೇವೆ. ಕಲ್ಯಾಣ ಕರ್ನಾಟಕ ಭಾಗದ ಒಟ್ಟು ಮೊತ್ತ 11,770 ಕೋಟಿ ರೂ. ಆಗಿದ್ದು, ಬೀದರ್, ಮತ್ತು ರಾಯಚೂರಿನಲ್ಲಿ ಮಹಾನಗರ ಪಾಲಿಕೆ ಮಾಡಲು ತೀರ್ಮಾನಿಸಲಾಗಿದೆ ಎಂದು ಸಿಎಂ ಹೇಳಿದರು.

ಬೀದರ್ ಮತ್ತು ಕಲಬುರಗಿಯಲ್ಲಿ 7,200 ಕೋಟಿ ವೆಚ್ಚದಲ್ಲಿ ಕುಡಿಯುವ ನೀರು ಯೋಜನೆ ಜಾರಿಗೆ ತರಲು ನಿರ್ಧರಿಸಲಾಗಿದೆ ನಾರಾಯಣಪುರ ಡ್ಯಾಂನಿಂದ ನೀರು ಸರಬರಾಜು ಮಾಡಲಾಗುತ್ತದೆ. ಈ ಯೋಜನೆಯ ಬಗ್ಗೆ ಕೇಂದ್ರಕ್ಕೂ ಮಾಹಿತಿ ನೀಡಿದ್ದೇವೆ ಎಂದು ಸಿಎಂ ತಿಳಿಸಿದರು.

ಪ್ರತ್ಯೇಕ ಸಚಿವಾಲಯ: ಪ್ರತ್ಯೇಕ ಸಚಿವಾಲಯ ಮಾಡಬೇಕು ಎಂಬುದು ಬಹುದಿನಗಳ ಬೇಡಿಕೆಯಾಗಿತ್ತು. ಈ ಬಗ್ಗೆ ಸಂಪುಟ ಸಭೆಯಲ್ಲಿ ಚರ್ಚಿಸಲಾಗಿದೆ. ಕಲ್ಯಾಣ ಕರ್ನಾಟಕಕ್ಕೆ ಈ ವರ್ಷ 5000 ಕೋಟಿ ರೂ. ಕೊಟ್ಟಿದ್ದೇವೆ. ಆದರೆ ಕೇಂದ್ರ ಸರ್ಕಾರ ಇದುವರೆಗೆ ಒಂದು ರೂಪಾಯಿ ಕೊಟ್ಟಿಲ್ಲ. 371ಜೆ ಸೇರ್ಪಡೆಯಾಗಿ 10 ವರ್ಷ ಆಗಿದೆ. ಇದಕ್ಕಾಗಿ ಕೇಂದ್ರ ಸರ್ಕಾರ ಕೂಡ 5000 ಕೋಟಿ ಹಣ ನೀಡಬೇಕು ಎಂದು ನಿರ್ಣಯ ಮಾಡಿದ್ದೇವೆ. ಖಾಲಿ ಇರುವ 17439 ಹುದ್ದೆಗಳನ್ನು ಹಂತ ಹಂತವಾಗಿ ಭರ್ತಿ ಮಾಡಲು ತೀರ್ಮಾನ ಮಾಡಿದ್ದೇವೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದ್ದಾರೆ.

ಪ್ರವಾಸೋದ್ಯಮಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದ್ದು, ಕಲ್ಯಾಣ ಕರ್ನಾಟಕ ಸಂಪೂರ್ಣ ಆರೋಗ್ಯ ಅಭಿವೃದ್ಧಿ ಯೋಜನೆ ಜಾರಿಗೆ ಅನುಮೋದನೆ ನೀಡಲಾಗಿದೆ. ಇದರ ಅಡಿಯಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ 45 ಹೊಸ ಆರೋಗ್ಯ ಕೇಂದ್ರಗಳು ಸ್ಥಾಪನೆಯಾಗಲಿವೆ. 31 ಸಮುದಾಯ ಆರೋಗ್ಯ ಕೇಂದ್ರಗಳ ಮೇಲ್ದರ್ಜೆಗೆ ಏರಲಿವೆ. 9 ತಾಲೂಕು ಆಸ್ಪತ್ರೆಗಳನ್ನು ಉಪ ವಿಭಾಗೀಯ ಆಸ್ಪತ್ರೆಗಳಾಗಿ ಮೇಲ್ದರ್ಜೆಗೇರಿಸಲಾಗುವುದು. ಎರಡು ತಾಲೂಕು ಆಸ್ಪತ್ರೆಗಳನ್ನು ಜಿಲ್ಲಾ ಆಸ್ಪತ್ರೆಗಳನ್ನಾಗಿ ಮೇಲ್ದರ್ಜೆಗೇರಿಸುವ ನಿರ್ಧಾರ ಮಾಡಲಾಗಿದೆ. ಇನ್ನು ಕೊಪ್ಪಳದಲ್ಲಿ ನೂತನ ನ್ಯಾಯಾಲಯ ಸಂಕೀರ್ಣ ನಿರ್ಮಾಣ ಕಾಮಗಾರಿಗೆ 56 ಕೋಟಿ ರೂ. ಅನುದಾನ ನೀಡಲು ಒಪ್ಪಿಗೆ ನೀಡಲಾಗಿದೆ.

ಭಾರತಕ್ಕೆ 5ನೇ ಬಾರಿಗೆ ಏಷ್ಯನ್ ಹಾಕಿ ಚಾಂಪಿಯನ್ಸ್ ಕಿರೀಟ

ಮೋಕಿ(ಚೀನಾ): ಚೀನಾದಲ್ಲಿ ನಡೆದ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಫೈನಲ್ ಪಂದ್ಯದಲ್ಲಿ ಆತಿಥೇಯ ಚೀನಾ ತಂಡವನ್ನು 1–0 ಗೋಲುಗಳಿಂದ ಮಣಿಸಿದ ಹರ್ಮನ್‌ಪ್ರೀತ್ ಸಿಂಗ್ ನಾಯಕತ್ವದ ಭಾರತ ಹಾಕಿ ತಂಡ ದಾಖಲೆಯ 5ನೇ ಬಾರಿಗೆ ಏಷ್ಯನ್ ಚಾಂಪಿಯನ್ಸ್ ಕಿರೀಟವನ್ನು ಮುಡಿಗೇರಿಸಿಕೊಂಡಿದೆ.

ತೀವ್ರ ರೋಚಕತೆಯಿಂದ ಕೂಡಿದ ಈ ಪಂದ್ಯದಲ್ಲಿ ಉಭಯ ತಂಡಗಳಿಂದ ಸಮಬಲದ ಹೋರಾಟ ಕಂಡುಬಂತು. ಹೀಗಾಗಿಯೇ ಮೊದಲ ಮೂರು ಕ್ವಾರ್ಟರ್‌ಗಳಲ್ಲಿ ಯಾವ ತಂಡಕ್ಕೂ ಗೋಲು ದಾಖಲಿಸಲು ಸಾಧ್ಯವಾಗಲಿಲ್ಲ. ಆದರೆ ನಾಲ್ಕನೇ ಕ್ವಾರ್ಟರ್‌ನಲ್ಲಿ ಗೋಲು ದಾಖಲಿಸುವಲ್ಲಿ ಯಶಸ್ವಿಯಾದ ಭಾರತ ತನ್ನ ಚಾಂಪಿಯನ್ ಪಟ್ಟವನ್ನು ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಯಿತು.



ಟೂರ್ನಿಯ ಮೊದಲ ಪಂದ್ಯದಲ್ಲಿ ಇದೇ ಚೀನಾವನ್ನು 3–0 ಗೋಲುಗಳಿಂದ ಸೋಲಿಸಿದ್ದ ಭಾರತ ತಂಡ, ಫೈನಲ್ ಸೇರಿದಂತೆ ಸತತ 7 ಪಂದ್ಯಗಳನ್ನು ಗೆದ್ದು ಪ್ರಶಸ್ತಿಯನ್ನು ವಶಪಡಿಸಿಕೊಂಡಿದೆ. ಟೀಂ ಇಂಡಿಯಾ ಈ ಟೂರ್ನಿಯಲ್ಲಿ ಒಂದೇ ಒಂದು ಪಂದ್ಯವನ್ನು ಸೋತಿಲ್ಲ. ಡ್ರಾ ಮಾಡಿಕೊಂಡಿಲ್ಲ. ಆದರೆ, ಇಂದು ನಡೆದ ಫೈನಲ್ ಪಂದ್ಯದಲ್ಲಿ ಟೀಂ ಇಂಡಿಯಾ ಗೆಲ್ಲಲು ತೀವ್ರ ಹೋರಾಟ ನಡೆಸಬೇಕಾಯಿತು. ಇಡೀ ಟೂರ್ನಿಯಲ್ಲಿ ಮೊದಲ ಬಾರಿಗೆ ಭಾರತ ತಂಡ ಆರಂಭದಲ್ಲಿ ಗೋಲುಗಳಿಸಲು ವಿಫಲವಾಯಿತು. ಅಲ್ಲದೆ ಎದುರಾಳಿ ತಂಡದ ಗೋಲ್‌ಪೋಸ್ಟ್ ಅನ್ನು ಭೇದಿಸಲು ಕೊನೆಯ 10 ನಿಮಿಷಗಳವರೆಗೆ ಕಾಯಬೇಕಾಯಿತು.

ತೀವ್ರ ಪೈಪೋಟಿ ನೀಡಿದ ಚೀನಾ: ವಾಸ್ತವವಾಗಿ ಟೀಂ ಇಂಡಿಯಾವನ್ನು ಮೊದಲಿನಿಂದಲೂ ಪ್ರಶಸ್ತಿಗಾಗಿ ಸ್ಪರ್ಧಿ ಎಂದು ಪರಿಗಣಿಸಲಾಗಿತ್ತು. ಇದಕ್ಕೆ ಪೂರಕವಾಗಿ ಲೀಗ್ ಹಂತ ಮತ್ತು ಸೆಮಿಫೈನಲ್‌ನಲ್ಲಿ ತಂಡವು ತೋರಿದ ಪ್ರದರ್ಶನವನ್ನು ಪರಿಗಣಿಸಿದರೆ, ಫೈನಲ್‌ನಲ್ಲೂ ಸುಲಭ ಜಯವನ್ನು ನಿರೀಕ್ಷಿಸಲಾಗಿತ್ತು. ಆದರೆ, ಇದಕ್ಕೆ ಅವಕಾಶ ನೀಡದ ಚೀನಾ ಈ ಟೂರ್ನಿಯ ಪಂದ್ಯಗಳಲ್ಲಿ ನಿರೀಕ್ಷೆಗಿಂತ ಉತ್ತಮ ಪ್ರದರ್ಶನ ನೀಡಿತು. ಸೆಮಿಫೈನಲ್‌ನಲ್ಲಿ ಪೆನಾಲ್ಟಿ ಶೂಟೌಟ್‌ನಲ್ಲಿ 2–0 ಗೋಲುಗಳಿಂದ ಪಾಕಿಸ್ತಾನವನ್ನು ಮಣಿಸಿದ್ದ ಚೀನಾ, ಫೈನಲ್‌ನಲ್ಲಿಯೂ ಟೀಂ ಇಂಡಿಯಾಕ್ಕೆ ಕಠಿಣ ಹೋರಾಟ ನೀಡಿತು. ಹೀಗಾಗಿಯೇ ಪಂದ್ಯದ 50 ನಿಮಿಷಗಳ ಕಾಲ ಭಾರತಕ್ಕೆ ಯಾವುದೇ ಗೋಲು ಗಳಿಸಲು ಅವಕಾಶ ನೀಡಲಿಲ್ಲ.

ಈ ಪಂದ್ಯವೂ ಪೆನಾಲ್ಟಿ ಶೂಟೌಟ್‌ನತ್ತ ಸಾಗುತ್ತಿರುವಂತೆ ತೋರಿತು. ಆದರೆ 51 ನೇ ನಿಮಿಷದಲ್ಲಿ 'ವಾಲ್ ಆಫ್ ಚೀನಾ' ಅಂತಿಮವಾಗಿ ಕುಸಿಯಿತು. ಅಭಿಷೇಕ್ ನೀಡಿದ ಅತ್ಯುತ್ತಮ ಪಾಸ್ ಅನ್ನು ಜುಗ್ರಾಜ್ ಗೋಲಾಗಿ ಪರಿವರ್ತಿಸುವಲ್ಲಿ ಯಶಸ್ವಿಯಾದರು. ಪಂದ್ಯದ ಕೊನೆಯ 10 ನಿಮಿಷಗಳಲ್ಲಿ 1–0 ಮುನ್ನಡೆ ಸಾಧಿಸಿದ ಭಾರತ, ಕೊನೆಯವರೆಗೂ ಎದುರಾಳಿ ತಂಡಕ್ಕೆ ಗೋಲು ಬಾರಿಸುವ ಅವಕಾಶ ನೀಡಲಿಲ್ಲ. ಅಂತಿಮವಾಗಿ ಭಾರತ ಐದನೇ ಬಾರಿ ಈ ಪ್ರಶಸ್ತಿಯನ್ನು ಗೆದ್ದುಕೊಳ್ಳುವಲ್ಲಿ ಯಶಸ್ವಿಯಾಯಿತು.

ಐದನೇ ಬಾರಿಗೆ ಚಾಂಪಿಯನ್: ಇದು ಏಷ್ಯನ್ ಚಾಂಪಿಯನ್ಸ್ ಟ್ರೋಫಿಯಲ್ಲಿ ಭಾರತಕ್ಕೆ ಸಿಕ್ಕಿರುವ ಐದನೇ ಪ್ರಶಸ್ತಿಯಾಗಿದೆ. 2011 ರಲ್ಲಿ ಆರಂಭವಾದ ಈ ಪಂದ್ಯಾವಳಿಯಲ್ಲಿ ಟೀಂ ಇಂಡಿಯಾ ಮೊದಲ ಆವೃತ್ತಿಯಲ್ಲೇ ಚಾಂಪಿಯನ್ ಆಯಿತು. ಇದಾದ ಬಳಿಕ 2016ರಲ್ಲಿಯೂ ಭಾರತ ಪ್ರಶಸ್ತಿಯನ್ನು ವಶಪಡಿಸಿಕೊಂಡಿತ್ತು 2018 ರಲ್ಲಿ ಭಾರತ ಮತ್ತು ಪಾಕಿಸ್ತಾನವನ್ನು ಜಂಟಿ ವಿಜೇತರು ಎಂದು ಘೋಷಿಸಲಾಯಿತು. ನಂತರ 2023 ರಲ್ಲಿ ಟೀಂ ಇಂಡಿಯಾ ನಾಲ್ಕನೇ ಬಾರಿ ಪ್ರಶಸ್ತಿಯನ್ನು ಗೆದ್ದುಕೊಂಡಿತು. ಇದೀಗ ಟೀಂ ಇಂಡಿಯಾ ಸತತ ಎರಡನೇ ಮತ್ತು ಒಟ್ಟು ಐದನೇ ಬಾರಿ ಏಷ್ಯನ್ ಚಾಂಪಿಯನ್ ಆಗಿದೆ. ಈ ಮೂಲಕ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದಿದ್ದ ಟೀಂ ಇಂಡಿಯಾ ತನ್ನ ಯಶಸ್ಸನ್ನು ಮುಂದುವರಿಸಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visweswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ
ಬುಧವಾರ 18 ಸೆಪ್ಟೆಂಬರ್ 2024

ವಿವಿಧ ತಳಿಯ ಶ್ವಾನ ಪ್ರದರ್ಶನ

ಮನೆಯಲ್ಲಿ ಶ್ವಾನಗಳಿದ್ದರೆ ಓರ್ವ ಕಾವಲುಗಾರನಿದ್ದಂತೆ: ಶಾಸಕ ಶ್ರೀವತ್ಸ



ಮೈಸೂರಿನ ಸಿದ್ಧಾರ್ಥ ಲೇಔಟ್‌ನಲ್ಲಿರುವ ವೈಶಾಲಿ ಕಾನ್ವೆಂಟ್ ಮೈದಾನದಲ್ಲಿ ವಿವಿಧ ತಳಿಯ ಶ್ವಾನ ಪ್ರದರ್ಶನ ಗಮನ ಸೆಳೆಯಿತು.

ಮೈಸೂರು, ಸೆ. 17– ಮೈಸೂರಿನ ಸಿದ್ಧಾರ್ಥ ಲೇಔಟ್‌ನಲ್ಲಿರುವ ವೈಶಾಲಿ ಕಾನ್ವೆಂಟ್ ಮೈದಾನದಲ್ಲಿ ಮಲೆ ಮಹದೇಶ್ವರ ಸಂಸ್ಥೆ ಹಾಗೂ ಇನ್ನರ್‌ವ್ಹೀಲ್ ಗೋಲ್ಡ್ ಸಂಸ್ಥೆಯ ಸಹಯೋಗದೊಂದಿಗೆ ವಿವಿಧ ತಳಿಯ ಶ್ವಾನ ಪ್ರದರ್ಶನದಲ್ಲಿ 10 ತಳಿಯ 30 ಶ್ವಾನ ಪಾಲ್ಗೊಂಡು ಗಮನ ಸೆಳೆದವು.

ರಾಟ್ ವೀಲರ್ ಶ್ವಾನಕ್ಕೆ ಪ್ರಥಮ ಬಹುಮಾನ ದೊರೆಯಿತು. ಹಸ್ಕಿ ತಳಿಗೆ ದ್ವಿತೀಯ ಬಹುಮಾನ, ಪಿಟ್ ಬುಲ್ ತೃತೀಯ ಬಹುಮಾನ ಲಭಿಸಿತು. ಈ ಶ್ವಾನಗಳ ಮಾಲೀಕರಿಗೆ ಶಾಸಕ ಟಿ.ಎಸ್.ಶ್ರೀವತ್ಸ ಬಹುಮಾನ ವಿತರಿಸಿದರು. ಇತರೆ ಶ್ವಾನಗಳ ಮಾಲೀಕರಿಗೆ ಪ್ರಶಂಸನಾ ಪತ್ರ ನೀಡಲಾಯಿತು. ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಶಾಸಕ ಟಿ.ಎಸ್.ಶ್ರೀವತ್ಸ ನಿಯತ್ತಿನ ಪ್ರಾಣಿಯೊಂದಿದ್ದರೆ ಅದು ಶ್ವಾನ. ಮನೆಯಲ್ಲಿ ಶ್ವಾನಗಳಿದ್ದರೆ ಓರ್ವ ಕಾವಲುಗಾರನಿದ್ದಂತೆ.ನಗರದ ಹಲವು ಭಾಗದಲ್ಲಿ ಒಂಟಿ ಮನೆಗಳು ಹೆಚ್ಚಾಗಿರುವುದರಿಂದ ಶ್ವಾನಗಳ ಅವಶ್ಯಕತೆಯಿದೆ. ಶ್ವಾನ ಹಾಗೂ ಮಾನವನ ನಡುವೆ ಅವಿನಾಭಾವ ಸಂಬಂಧ ಇರುವುದರಿಂದಲೇ ಜನರು ಶ್ವಾನ ಸಾಕುವುದು ರೂಢಿಯಾಗಿ ಬಂದಿದೆ ಎಂದು ಹೇಳಿದರು.

ಕಾಂಗ್ರೆಸ್ ಮುಖಂಡ ಜಿ.ಶ್ರೀನಾಥ್ ಬಾಬು, ನಟಿ ಸ್ಮಿತಾ, ಮಲೆ ಮಹದೇಶ್ವರ ಸಂಸ್ಥೆಯ ಅಧ್ಯಕ್ಷ ಮಹಾನ್ ಅಚ್ಚು, ರವೀಂದ್ರ, ಪ್ರತಿಭಾ, ಆಲೋಕ್ ಜೈನ್, ಇನ್ನರ್‌ವ್ಹೀಲ್ ಕ್ಲಬ್ ಗೋಲ್ಡ್ ಅಧ್ಯಕ್ಷರಾದ ಪ್ರೇಮಾ ರವಿ, ಉಪಾಧ್ಯಕ್ಷರಾದ ಪ್ರತಿಭಾ, ಕಾರ್ಯದರ್ಶಿ ಅಂಶು ಅಗರವಾಲ್, ಶೀಲ, ಅಂಜಲಿ, ಚೇತನ್, ಜಿ ರಾಘವೇಂದ್ರ, ಆರ್‌ಜೆ ಅವಿನಾಶ್, ಹಾಗೂ ಇನ್ನಿತರರು ಹಾಜರಿದ್ದರು.

ಜಾತಿನಿಂದನೆ: ಮುನಿರತ್ನರ ಶಾಸಕ ಸ್ಥಾನದಿಂದ ವಜಾಗೊಳಿಸಲು ಆಗ್ರಹಿಸಿ ಮೈಸೂರಲ್ಲಿ ಪ್ರತಿಭಟನೆ

ಮೈಸೂರು, ಸೆ.17(ಜಿಎ)– ದಲಿತರ ಬಗ್ಗೆ ಅವಹೇಳನ, ಜಾತಿ ನಿಂದನೆ ಮಾಡಿ ದೌರ್ಜನ್ಯವೆಸಗಿರುವ ಮುನಿರತ್ನ ಅವರ ಶಾಸಕ ಸ್ಥಾನ ರದ್ದು ಮಾಡಿ, ಕಠಿಣ ಕಾನೂನು ಕ್ರಮ ಜರುಗಿಸುವಂತೆ ಒತ್ತಾಯಿಸಿ ಕರ್ನಾಟಕ ಪ್ರದೇಶ ದಲಿತ ಸಂಘರ್ಷ ಸಮಿತಿಯಿಂದ ಪುರಭವನ ಮುಂಭಾಗದ ಅಂಬೇಡ್ಕರ್ ಪ್ರತಿಮೆ ಬಳಿ ಪ್ರತಿಭಟನೆ ನಡೆಸಲಾಯಿತು.

ಸ್ವಾತಂತ್ರ್ಯ ಬಂದು 77 ವರ್ಷಗಳು ಕಳೆಯುತ್ತಿದ್ದರೂ ದೇಶದ ಪ್ರಜಾಪ್ರತಿನಿಧಿಗಳು ನಡೆದುಕೊಳ್ಳುವ ರೀತಿ ಇಡೀ ನಾಗರಿಕ ಸಮಾಜ ತಲೆ ತಗ್ಗಿಸುವಂತೆ ಮಾಡುತ್ತಿದೆ. ಇತ್ತೀಚೆಗೆ ನಾ ಮುಂದು ತಾ ಮುಂದು ಎಂದು ಅನಾಚಾರ ಮಾಡುವಲ್ಲಿ ಜನಪ್ರತಿನಿಧಿಗಳು ಮುಂದಾಗಿದ್ದು ಬೇಲಿಯೇ ಎದ್ದು ಹೊಲ ಮೇಯ್ದಂತಾಗುತ್ತಿದೆ. ಇದರಿಂದ ಸಮಾಜದಲ್ಲಿ ಭಯದ ವಾತಾವರಣ ಸೃಷ್ಟಿಯಾಗುತ್ತಿದೆ ಎಂದು ಕಿಡಿಕಾರಿದರು.



ಪುರಭವನ ಮುಂಭಾಗದ ಅಂಬೇಡ್ಕರ್ ಪ್ರತಿಮೆ ಬಳಿ ಕರ್ನಾಟಕ ಪ್ರದೇಶ ದಲಿತ ಸಂಘರ್ಷ ಸಮಿತಿಯಿಂದ ಮುನಿರತ್ನ ಅವರ ಶಾಸಕ ಸ್ಥಾನ ರದ್ದು ಮಾಡಿ, ಕಠಿಣ ಕಾನೂನು ಕ್ರಮ ಜರುಗಿಸುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಸಲಾಯಿತು.

ಕೋಮುವಾದಿ ಪಕ್ಷಗಳಿಂದ ಆಯ್ಕೆಯಾಗಿರುವವರು ದೇಶದ ಯಾವುದೇ ಕಾನೂನು ಕಟ್ಟಳೆಗಳಿಗೆ ಬೆಲೆ ನೀಡುತ್ತಿಲ್ಲ. ತಾವು ನಡೆದದ್ದೇ ದಾರಿ ಎಂಬ ಅಹಂಕಾರದಲ್ಲಿ ಮೆರೆಯುತ್ತಿದ್ದಾರೆ. ಇದಕ್ಕೆ ಪುಷ್ಟಿ ನೀಡುವಂತೆ ಶಾಸಕ ಮುನಿರತ್ನ ತನ್ನ ದುಡ್ಡು ಮತ್ತು ಅಧಿಕಾರದ ಅಹಂಕಾರದಲ್ಲಿ ದಲಿತ ಗುತ್ತಿಗೆದಾರರನ್ನು ಬಹಳ ನಿಕೃಷ್ಟವಾಗಿ ನಡೆಸಿಕೊಂಡು ಜಾತಿ ಹೆಸರಿಡಿದು ಬಾಯಿಗೆ ಬಂದಂತೆ ಮಾತನಾಡಿ, ಕೊಲೆ ಬೆದರಿಕೆ ಹಾಕಿದ್ದಾರೆ ಇದು ಖಂಡನೀಯ ಎಂದರು.

ಸ್ವಾಭಿಮಾನಿ ದಲಿತ ಸಮುದಾಯದ ಬಗ್ಗೆ ಹಗುರವಾಗಿ ಮಾತನಾಡಿ ಅಸಂವಿಧಾನಾತ್ಮಕವಾಗಿ ವರ್ತಿಸಿರುವ ಮುನಿರತ್ನ ಶಾಸಕ ಸ್ಥಾನದಲ್ಲಿ ಮುಂದುವರೆಯಲು ಯಾವುದೇ ನೈತಿಕತೆ ಇಲ್ಲವಾದ್ದರಿಂದ ಈತನನ್ನು ಶಾಸಕ ಸ್ಥಾನದಿಂದ ವಜಾಗೊಳಿಸಬೇಕು. ಜತೆಗೆ ಕಾನೂನು ಕ್ರಮ ಬಿಗಿಗೊಳಿಸಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಮುಖಂಡರಾದ ಹರಿಹರ ಆನಂದಸ್ವಾಮಿ, ಅಹಿಂದ ಜವರಪ್ಪ, ದೇವಗಳ್ಳಿ ಸೋಮಶೇಖರ್, ಅರ್ಜುನಹಳ್ಳಿ ಶಾಂತರಾಜು, ಬೆಲವತ್ತ ರಾಮಚಂದ್ರ, ಪ್ರಸನ್ನ ತಳೂರು, ಬಂಗವಾಡಿ ನಾರಾಯಣಪ್ಪ, ಶ್ಯಾದನಹಳ್ಳಿ ನಾರಾಯಣ, ಬೊಕ್ಕಹಳ್ಳಿ ಲಿಂಗಯ್ಯ, ಸಣ್ಣಸ್ವಾಮಿ ಮತ್ತಿತರರು ಪಾಲ್ಗೊಂಡಿದ್ದರು.

ಮುಡಾದಿಂದ ನಿವೇಶನ ಮಂಜೂರಾತಿ; ಶಿವರಾಮು ಆರೋಪ ಆಧಾರರಹಿತ

ಪುಸ್ತಕ ಪ್ರಾಧಿಕಾರದ ಮಾಜಿ ಅಧ್ಯಕ್ಷ ನಂದೀಶ್ ಹಂಚೆ ಕಾನೂನು ಕ್ರಮದ ಎಚ್ಚರಿಕೆ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಪುಸ್ತಕ ಪ್ರಾಧಿಕಾರದ ಮಾಜಿ ಅಧ್ಯಕ್ಷ ನಂದೀಶ್ ಹಂಚೆ ಮಾತನಾಡಿದರು.

ಮೈಸೂರು, ಸೆ.17(ಜಿಎ)–ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮು ಅವರು ತಮ್ಮ ಮೇಲೆ ನಿರಂತರವಾಗಿ ಆಧಾರರಹಿತ ಆರೋಪ ಮಾಡುತ್ತಿದ್ದು, ಅವರ ವಿರುದ್ಧ ಕಾನೂನು ಕ್ರಮಕ್ಕೆ ಮುಂದಾಗುವುದಾಗಿ ಕರ್ನಾಟಕ ಪುಸ್ತಕ ಪ್ರಾಧಿಕಾರದ ಮಾಜಿ ಅಧ್ಯಕ್ಷ ನಂದೀಶ್ ಹಂಚೆ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಿವೇಶನವೊಂದಕ್ಕೆ ಸಂಬಂಧಿಸಿದಂತೆ ಕೆ.ಎಸ್.ಶಿವರಾಮು ವೃಥಾ ಆರೋಪ ಮಾಡಿ ತಮ್ಮ ತೇಜೋವಧೆಗೆ ಮುಂದಾಗಿದ್ದಾರೆ. ಮುಡಾ ಯಾವುದೇ ಭೂಮಿ ಸ್ವಾಧೀನಪಡಿಸಿಕೊಳ್ಳದಿದ್ದರೂ ತಮಗೆ ಅಕ್ರಮವಾಗಿ ನಿವೇಶನ ನೀಡಿದೆ. ಇದು ಕಾನೂನುಬಾಹಿರ ಎಂದು ಕೆ.ಎಸ್. ಶಿವರಾಮು ಆರೋಪಿಸಿದ್ದಾರೆ. ಇದು ಆಧಾರರಹಿತ ಆರೋಪ ಎಂದರು.

ತಾವು 50:50 ಅನುಪಾತದಡಿಯಲ್ಲಿ ಯಾವುದೇ ನಿವೇಶನ ಪಡೆದಿಲ್ಲ. ಬಸವಲಿಂಗಪ್ಪ ಎಂಬುವರಿಗೆ ನಾಚನಹಳ್ಳಿ ಕೊಪ್ಪಲೂರು ಮೂರನೇ ಹಂತ ಸಿ ವಲಯ ಬಡಾವಣೆಯಲ್ಲಿ 15x24 ನಿವೇಶನ ಮಂಜೂರಾಗಿದ್ದು, ಅವರಿಂದ ನಾನು ಖರೀದಿ ಮಾಡಿದ್ದೆ. ನಂತರ ಈ ನಿವೇಶನಕ್ಕೆ ಸಂಬಂಧಿಸಿದಂತೆ ಜಾಗದ ವ್ಯಾಜ್ಯವು ನ್ಯಾಯಾಲಯದಲ್ಲಿ ಇರುವುದರಿಂದ ಮುಡಾ ಸದರಿ ನಿವೇಶನ ಮಂಜೂರಾತಿಯನ್ನು ರದ್ದುಪಡಿಸಿತ್ತು.

ಈ ಪ್ರಕರಣವಾದ ನಂತರ ಇದಕ್ಕೆ ಬದಲಾಗಿ ಮುಡಾದಿಂದ ಬದಲಿ ನಿವೇಶನ ನೀಡಲಾಗಿದೆ. ಆದರೆ, ನಾನು ಯಾವುದೇ ಬದಲಿ ನಿವೇಶನ ನೀಡುವಂತೆ ಅರ್ಜಿ ಸಲ್ಲಿಸಿರಲಿಲ್ಲ. ಮುಡಾವೇ ಹಂಚ್ಯಾ ಸಾತಗಳ್ಳಿ ಬಿ ವಲಯದಲ್ಲಿ ಬದಲಿ ನಿವೇಶನ ನೀಡಿದೆ. ಇದನ್ನು ತಿಳಿದುಕೊಳ್ಳದ ಶಿವರಾಮು ಇಲ್ಲಸಲ್ಲದ, ಆಧಾರರಹಿತ ಆರೋಪಗಳನ್ನು ಮಾಡುತ್ತಿದ್ದಾರೆ. ಇದು ಸತ್ಯಕ್ಕೆ ದೂರವಾದುದು. ಅವರು 50:50ರ ಅನುಪಾತದ ಅಡಿಯಲ್ಲಿ ತಾವು ನಿವೇಶನ ಪಡೆದಿರುವುದಾಗಿ ಹೇಳುತ್ತಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್‌ನ ನಗರಾಧ್ಯಕ್ಷರಾಗಿರುವ ಅವರು ಮುಡಾ, ಕಂದಾಯ, ತೆರಿಗೆ ಸೇರಿದಂತೆ ಇತರ ವಿಚಾರಗಳ ಬಗ್ಗೆ ಅರಿತುಕೊಂಡು ಮಾತನಾಡಬೇಕು ಎಂದು ನಂದೀಶ್ ಹಂಚೆ ತಾಕೀತು ಮಾಡಿದರು.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಹೆಸರು ಪ್ರಸ್ತಾಪಿಸುವ ಯೋಗ್ಯತೆ ಇವರಿಗೆ ಇಲ್ಲ. ಹಿಂದೆಯೂ ಈ ನಿವೇಶನ ಸಂಬಂಧ ಆರೋಪ ಮಾಡಿದ್ದರು. ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಚಂದ್ರಶೇಖರ್ ಮೂಲಕ ಕರೆ ಮಾಡಿ ತಾವು ಪ್ರಶ್ನಿಸಿದಾಗ ಮತ್ತೆ ಈ ರೀತಿ ತಪ್ಪು ಮಾಡುವುದಿಲ್ಲ ಎಂದು ಹೇಳಿ ಪದೇ ಪದೆ ಇದೇ ರೀತಿ ಇಲ್ಲಸಲ್ಲದ ಆರೋಪ ಮಾಡಿ ಚಾರಿತ್ರ್ಯ ವಧೆ ಮಾಡುತ್ತಿದ್ದಾರೆ. ಹಾಗಾಗಿ ವಕೀಲರ ಸಲಹೆ ಪಡೆದುಕೊಂಡು ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದಾಗಿ ನಂದೀಶ್ ಹಂಚೆ ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಗ್ರಾಮಾಂತರ ಜಿಲ್ಲಾಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ, ಮಾರ್ಬಳ್ಳಿ ಮೂರ್ತಿ, ರಾಜ್‌ಕುಮಾರ್, ನಾಗರಾಜ್ ಉಪಸ್ಥಿತರಿದ್ದರು.

ಸೆ.20, ದೇಶದ 20 ಲಕ್ಷ ವಿಶ್ವಕರ್ಮ ಸಮುದಾಯದವರಿಗೆ ಹಣಕಾಸು ನೆರವು

ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಘೋಷಣೆ



ಬೆಂಗಳೂರು, ಸೆ.17(ಕೆಎಂಶಿ)–ವಿಶ್ವಕರ್ಮ ಯೋಜನೆಯಡಿ ಈ ತಿಂಗಳ 20ರಂದು ದೇಶದ 20 ಲಕ್ಷ ವಿಶ್ವಕರ್ಮ ಸಮುದಾಯದವರಿಗೆ ಹಣಕಾಸಿನ ಸೌಲಭ್ಯ ಒದಗಿಸಲಾಗುತ್ತದೆ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ತಿಳಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರ ಜನ್ಮದಿನವಾದ ಇಂದು ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಕಲೆ ಮತ್ತು ಸಾಂಸ್ಕೃತಿಕ ಪ್ರಕೋಷ್ಠ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮೋದಿ ಮತ್ತು ವಿಶ್ವಕರ್ಮ ಜಯಂತಿ ಸಂದರ್ಭದಲ್ಲಿ ಆರೋಗ್ಯ ಶಿಬಿರ, ರಕ್ತದಾನ ಶಿಬಿರ, ಸ್ವಚ್ಛತಾ ಅಭಿಯಾನ, ಚಿತ್ರಕಲಾ ಪ್ರದರ್ಶನಗಳನ್ನು ಏರ್ಪಡಿಸಲಾಗುತ್ತಿದೆ ಎಂದರು. ಗುಜರಾತ್ ಮುಖ್ಯಮಂತ್ರಿ ಮತ್ತು ದೇಶದ ಪ್ರಧಾನಿಯಾಗಿ 25 ವರ್ಷಗಳಿಂದ ಮೋದಿ ಅವರು, ಬಡವರಿಗಾಗಿ ಸೇವೆ ಮಾಡಿದ್ದಾರೆ, ಮಹಿಳೆಯರ ಘನತೆ ಹೆಚ್ಚಿಸಲು ಶೌಚಾಲಯ ನಿರ್ಮಾಣ, ಅಡುಗೆ ಅನಿಲ ಉಚಿತ ಸಂಪರ್ಕ, ಪರಿಶಿಷ್ಟ ಸಮುದಾಯ, ಹಿಂದುಳಿದ ವರ್ಗ ಮತ್ತು ಯುವ ಜನರಿಗಾಗಿ ಅನೇಕ ಯೋಜನೆಗಳನ್ನು ಜಾರಿಗೊಳಿಸಿದ್ದಾರೆ. ದೇಶದಲ್ಲಿ ಇರುವುದು ರೈತರು, ಮಹಿಳೆಯರು, ಯುವಜನರು ಮತ್ತು ಬಡವರು ಎಂಬ ನಾಲ್ಕು ಜಾತಿಗಳು ಮಾತ್ರ ಎಂಬುದು ಪ್ರಧಾನಿ ಅವರ ಪ್ರತಿಪಾದನೆಯಾಗಿದ್ದು, ದೇಶದ ಅಭಿವೃದ್ಧಿಗೆ ನಿರಂತರ ಶ್ರಮಿಸುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ವಿಧಾನಪರಿಷತ್ ಸದಸ್ಯ ಸಿ.ಟಿ. ರವಿ ಮಾತನಾಡಿ, ಬಡವರನ್ನು ವ್ಯವಸ್ಥೆಯ ಜೊತೆ ಜೋಡಿಸಿದ ಕೀರ್ತಿ ಪ್ರಧಾನಿ ನರೇಂದ್ರ ಮೋದಿ ಅವರದು, ದೇಶ ಮೊದಲು ಎಂಬ ತತ್ವದೊಂದಿಗೆ ನಿರಂತರವಾಗಿ ಕೆಲಸ ಮಾಡಿದವರು ಎಂದರು.

ಸೆ.23, ಜಿಲ್ಲಾ ಮಟ್ಟದ ಜನಸ್ಪಂದನ

ಮೈಸೂರು,ಸೆ.17–ಜಿಲ್ಲಾ ಮಟ್ಟದ ಜನಸ್ಪಂದನ ಕಾರ್ಯಕ್ರಮ ಸೆ.23ಕ್ಕೆ ಜರುಗಲಿದ್ದು, ಬೆಳಗ್ಗೆ 11 ಗಂಟೆಗೆ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ ಮಹದೇವಪ್ಪ ಅಧ್ಯಕ್ಷತೆಯಲ್ಲಿ ಸಭೆ ಜರುಗಲಿದ್ದು, ಜಿಲ್ಲೆಯ ಶಾಸಕರು, ಜನಪ್ರತಿನಿಧಿಗಳು ಭಾಗವಹಿಸುವರು. ಜನಸ್ಪಂದನ ಸಭೆಗೆ ಜಿಲ್ಲೆಯ ಸಾರ್ವಜನಿಕರು ತಮ್ಮ ಅಹವಾಲುಗಳನ್ನು ಸಲ್ಲಿಸಿ, ಪರಿಹಾರ ಪಡೆದುಕೊಳ್ಳಬಹುದಾಗಿದೆ ಎಂದು ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು–ಕೊಡಗು ರೈಲ್ವೆ ಅಭಿವೃದ್ಧಿಗೆ ಕ್ರಮ ವಹಿಸಿ

ಕೇಂದ್ರ ರೈಲ್ವೆ ಸಚಿವರಿಗೆ ಸಂಸದರಿಂದ ಮನವಿ



ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರನ್ನು ಸಂಸದ ಯದುವೀರ ಒಡೆಯರ್ ಭೇಟಿ ಮಾಡಿದ ಸಂದರ್ಭ.

ಮೈಸೂರು,ಸೆ.17(ಪಿಎಂ)– ಇತ್ತೀಚೆಗೆ ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರನ್ನು ಭೇಟಿ ಮಾಡಿದ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಮೈಸೂರು–ಕೊಡಗು ರೈಲ್ವೆ ಅಭಿವೃದ್ಧಿಗೆ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ್ದಾರೆ.

ವಂದೇ ಭಾರತ್ ರೈಲು ವಿಸ್ತರಣೆ ಮೂಲಕ ತಿರುಪತಿಯಿಂದ ಬೆಂಗಳೂರಿಗೆ ಮತ್ತು ಮುಂದೆ ಮೈಸೂರಿಗೆ ಸಂಪರ್ಕಿಸಬಹುದು. ಇದರಿಂದ ಮಂಡ್ಯ, ಹಾಸನ, ಚಾಮರಾಜನಗರ ಮತ್ತು ಕೊಡಗಿನಂತಹ ಸುತ್ತಮುತ್ತಲಿನ ಪ್ರದೇಶಗಳ ಪ್ರಯಾಣಿಕರಿಗೆ ಅನುಕೂಲ ಆಗಲಿದೆ ಎಂದು ಸಚಿವರಲ್ಲಿ ಸಂಸದರು ಕೋರಿದ್ದಾರೆ.

ಜೊತೆಗೆ ಮೈಸೂರು ರೈಲ್ವೆ ನಿಲ್ದಾಣವನ್ನು ಮೇಲ್ದರ್ಜೆಗೇರಿಸುವ ಪ್ರಕ್ರಿಯೆ ತ್ವರಿತಗೊಳಿಸಬೇಕು. ಅಲ್ಲದೆ, ಮಹಾರಾಜ ಸಲೂನ್ ಕೋಚ್ ಮೂಲಕ ಪಾರಂಪರಿಕ ಪ್ರವಾಸೋದ್ಯಮಕ್ಕೆ ಉತ್ತೇಜಿಸಬೇಕೆಂದು ಸಚಿವರಲ್ಲಿ ಕೋರಿದ್ದಾರೆ ಎಂದು ಸಂಸದರ ಪ್ರಕಟಣೆ ತಿಳಿಸಿದೆ.

ಜವಾಹರ ನವೋದಯ ವಿದ್ಯಾಲಯದಲ್ಲಿ 6ನೇ ತರಗತಿ ಪ್ರವೇಶಾತಿ ಆರಂಭ

ಮೈಸೂರು,ಸೆ.17–ಜವಾಹರ ನವೋದಯ ವಿದ್ಯಾಲಯದಲ್ಲಿ 2025–26ನೇ ಶೈಕ್ಷಣಿಕ ಸಾಲಿನ 6ನೇ ತರಗತಿ ಪ್ರವೇಶಾತಿಗಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಆಯ್ಕೆ ಬಯಸುವ ಅಭ್ಯರ್ಥಿಗಳು 2024–25 ನೇ ಸಾಲಿನಲ್ಲಿ 5ನೇ ತರಗತಿಯಲ್ಲಿ ಸರ್ಕಾರಿ, ಅನುದಾನಿತ, ಸರ್ಕಾರಿ ಅನುಮತಿ, ಮಾನ್ಯತೆ ಪಡೆದಿರುವ ಮೈಸೂರು ಜಿಲ್ಲೆಯ ಶಾಲೆಯಲ್ಲಿ ಅಧ್ಯಯನ ಮಾಡುತ್ತಿರಬೇಕು. ಅಭ್ಯರ್ಥಿಗಳು ಮೈಸೂರು ಜಿಲ್ಲೆಯ ನಿವಾಸಿಯಾಗಿದ್ದು, 01–05–2013ರಿಂದ 31–07–2017 ರೊಳಗೆ ಜನಿಸಿರಬೇಕು. ಅರ್ಜಿ ಸಲ್ಲಿಸಲು ಸೆ.23 ಕೊನೆಯ ದಿನಾಂಕವಾಗಿದ್ದು, 18–01–2025 ರಂದು ಪರೀಕ್ಷೆ ನಡೆಯಲಿದೆ. ಹೆಚ್ಚಿನ ಮಾಹಿತಿಗಾಗಿ www.navodaya.gov.in ವೆಬ್‌ಸೈಟ್ ಅಥವಾ ಸಹಾಯವಾಣಿ ಸಂಖ್ಯೆ: 9448413479 ಅನ್ನು ಸಂಪರ್ಕಿಸಬಹುದು ಎಂದು ಜವಾಹರ ನವೋದಯ ವಿದ್ಯಾಲಯದ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ವಿಶ್ವಕರ್ಮ ಸಂಘದಿಂದ ವಿಶ್ವಕರ್ಮ ಜಯಂತಿ

ಮೈಸೂರು, ಸೆ. 17–ಮೈಸೂರು ಜಿಲ್ಲಾ ವಿಶ್ವಕರ್ಮ ಸಂಘ, ಶ್ರೀ ವಿಶ್ವಕರ್ಮ ಪತ್ತಿನ ಸಹಕಾರ ಬ್ಯಾಂಕ್ ಹಾಗೂ ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ವತಿಯಿಂದ ಚಾಮರಾಜಪುರಂನಲ್ಲಿ ವಿಶ್ವಕರ್ಮ ಜಯಂತಿಯನ್ನು ಭಗವಾನ್ ಶ್ರೀ ವಿಶ್ವಕರ್ಮರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವುದರ ಮೂಲಕ ಸರಳವಾಗಿ ಆಚರಿಸಲಾಯಿತು.

ಈ ವೇಳೆ ಶ್ರೀ ವಿಶ್ವಕರ್ಮ ಪತ್ತಿನ ಸಹಕಾರ ಬ್ಯಾಂಕ್‌ನ ಅಧ್ಯಕ್ಷ ಜಯರಾಮಚಾರ್ ಮಾತನಾಡಿ, ವಿಶ್ವಕರ್ಮ ಜಯಂತಿ ಆಚರಣೆ ಮಾಡುವಂತೆ ಆದೇಶ ಮಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ರಾಜ್ಯಾಧ್ಯಕ್ಷ ಹಾಗೂ ಮಾಜಿ ವಿಧಾನಪರಿಷತ್ ಸದಸ್ಯ ಕೆ.ಪಿ. ನಂಜುಂಡಿ ವಿಶ್ವಕರ್ಮ, ಸ್ವಾಮೀಜಿಗಳಿಗೆ ಅಭಿನಂದನೆ ಸಲ್ಲಿಸುವುದಾಗಿ ತಿಳಿಸಿದರು.



ಮೈಸೂರಿನ ಚಾಮರಾಜಪುರಂನಲ್ಲಿ ಮಂಗಳವಾರ ವಿಶ್ವಕರ್ಮ ಜಯಂತಿಯನ್ನು ಸರಳವಾಗಿ ಆಚರಿಸಲಾಯಿತು.

ಮೈಸೂರು ಜಿಲ್ಲಾ ವಿಶ್ವಕರ್ಮ ಸಂಘದ ಜಿಲ್ಲಾಧ್ಯಕ್ಷ ರಿಷಿ ವಿಶ್ವಕರ್ಮ ಮಾತನಾಡಿ, ವಿಶ್ವಕರ್ಮ ಜಯಂತಿಯನ್ನು ದೇಶಾದ್ಯಂತ ಹಬ್ಬದ ರೀತಿಯಲ್ಲಿ ಆಚರಣೆ ಮಾಡುತ್ತಿದ್ದು, ಉತ್ತರ ಭಾರತದಲ್ಲೂ ಜಯಂತಿಯಂದು ರಜೆ ಘೋಷಣೆ ಮಾಡಿದ್ದಾರೆ. ಆದ್ದರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ವಿಶ್ವಕರ್ಮ ಜಯಂತಿಯಂದು ರಜಾ ದಿನವನ್ನಾಗಿ ಘೋಷಣೆ ಮಾಡಿ, ಕರ್ನಾಟಕ ರಾಜ್ಯ ವಿಶ್ವಕರ್ಮ ಅಭಿವೃದ್ಧಿ ನಿಗಮ ಮಂಡಳಿಗೆ ವಿಶ್ವಕರ್ಮ ಜನಾಂಗದವರನ್ನೇ ಅಧ್ಯಕ್ಷರನ್ನಾಗಿ ಮಾಡಬೇಕು. ಸಮುದಾಯ ಭವನ ನಿರ್ಮಾಣ ಮಾಡಲು ಮೈಸೂರಿನಲ್ಲಿ ಒಂದು ಎಕರೆ ಭೂಮಿಯನ್ನು ಮಂಜೂರು ಮಾಡಿ, 5 ಕೋಟಿ ಅನುದಾನ ಬಿಡುಗಡೆ ಮಾಡಬೇಕೆಂದು ಮನವಿ ಮಾಡಿದರು.

ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ನಗರ ಅಧ್ಯಕ್ಷ ಸಿದ್ದಾಚಾರ್, ಅಭಿವೃದ್ಧಿ ನಿಗಮದ ಮಾಜಿ ನಿರ್ದೇಶಕ ಸಿಂಧುಹಳ್ಳಿ ಲೋಕೇಶ್, ಅರಕೇಶ್ವರಚಾರ್, ಕಾಳಿಕಾಂಬ ದೇವಸ್ಥಾನ ಕಾರ್ಯದರ್ಶಿ ಈಶ್ವರಚಾರ್, ಮಂಜುನಾಥ್ ಸೋಮಶೇಖರ್, ವಿನಾಯಕ ಕಣಗಾಲ್, ಎಸ್.ಎನ್. ರಾಜೇಶ್, ರಾಕೇಶ್, ರಂಗನಾಥ್, ಸುಚೇಂದ್ರ, ಚಕ್ರಪಾಣಿ ಇನ್ನಿತರರು ಭಾಗವಹಿಸಿದ್ದರು.

ಜೆಪಿ ನಗರ ಆಜು ಬಾಜು ಶಾಸಕ ಶ್ರೀವತ್ಸ ಪಾದಯಾತ್ರೆ

● ಯುಜಿಡಿ, ಖಾಲಿ ಜಾಗದಲ್ಲಿ ಗಿಡ ಗಂಟಿ; ಅತಿಕ್ರಮಣದ ಬಗ್ಗೆ ನಿವಾಸಿಗಳಿಂದ ದೂರು ● ಹಲವು ಸಮಸ್ಯೆ ಪರಿಹರಿಸಲು ಶಾಸಕರಿಂದ ಅಧಿಕಾರಿಗಳಿಗೆ ತಾಕೀತು ● ಅತಿಕ್ರಮಣ ಸಂಬಂಧ ಅಧಿಕಾರಿಗಳಿಗೆ ಮಾಹಿತಿ ಪಡೆದು ನಿರ್ಧಾರದ ಭರವಸೆ

ಮೈಸೂರು, ಸೆ.17(ಎಸ್‌ಪಿಎನ್)– ಅಪಾರ್ಟ್‌ಮೆಂಟ್‌ನ ಯುಜಿಡಿ ಲೈನ್ ಮತ್ತೊಂದು ರಸ್ತೆಯಲ್ಲಿನ ಯುಜಿಡಿ ಲೈನ್‌ಗೆ ಸಂಪರ್ಕ.., ಖಾಲಿ ನಿವೇಶನಗಳಲ್ಲಿ ಬೆಳೆದಿರುವ ಗಿಡ–ಗಂಟಿಗಳನ್ನು ತೆರವುಗೊಳಿಸಿ ಕ್ರಿಮಿ–ಕೀಟಗಳಿಂದ ಪಾರು ಮಾಡಿ, ರಾಜಕಾಲುವೆ ಅಕ್ಕ–ಪಕ್ಕ ಬಫರ್ ಜೋನ್ ಬಿಡದೆ ಮನೆಗಳ ನಿರ್ಮಾಣ..., ವಾರಕ್ಕೆ ಎರಡು ದಿನ ಮಾತ್ರ ಕಸ ಸಂಗ್ರಹಣೆ... ಇದು ಶಾಸಕ ಟಿ.ಎಸ್.ಶ್ರೀವತ್ಸ ಓಂಕಾರ ಬಡಾವಣೆಯಲ್ಲಿ ಪಾದಯಾತ್ರೆ ವೇಳೆ ನಿವಾಸಿಗಳಿಂದ ಕೇಳಿ ಬಂದ ಸಮಸ್ಯೆಗಳ ಸರಮಾಲೆ.

ಜೆ.ಪಿ.ನಗರಕ್ಕೆ ಹೊಂದಿಕೊಂಡಂತಿರುವ ಓಂಕಾರ ಬಡಾವಣೆಯ ನಿವಾಸಿಗಳು ಶಾಸಕ ಟಿ.ಎಸ್.ಶ್ರೀವತ್ಸ ಪಾದಯಾತ್ರೆ ವೇಳೆ ಸಮಸ್ಯೆಗಳ ಸರಮಾಲೆಯನ್ನೇ ತೆರೆದಿಟ್ಟರು. ಇದಕ್ಕೂ ಮೊದಲು ಜೆ.ಪಿ.ನಗರದ ಅಕ್ಕ ಮಹಾದೇವಿ ರಸ್ತೆಗೆ ಹೊಂದಿಕೊಂಡಂತಿರುವ ರಿಂಗ್ ರಸ್ತೆಯಿಂದ ಪಾದಯಾತ್ರೆ ಶುರುಮಾಡಿದ ಶಾಸಕರಿಗೆ, ರಸ್ತೆಯಲ್ಲಿ ಬಿದ್ದಿದ್ದ ಕಸದ ರಾಶಿಯ ದರ್ಶನವಾಯಿತು. ಈ ವೇಳೆ ನಗರಪಾಲಿಕೆ ಆರೋಗ್ಯ ಶಾಖೆಯ ಸಿಬ್ಬಂದಿಗೆ ದೂರವಾಣಿ ತರಾಟೆಗೆ ತೆಗೆದುಕೊಂಡರು.

ರಸ್ತೆ ಜಾಗವನ್ನೇ ಅತಿಕ್ರಮಿಸಿದರು: ಈ ವೇಳೆ ರಿಂಗ್ ರಸ್ತೆಯಲ್ಲಿರುವ ಬಾರ್ ಅಂಡ್ ರೆಸ್ಟೋರೆಂಟ್‌ನವರು ರಸ್ತೆಯ ಜಾಗವನ್ನೇ ಅತಿಕ್ರಮಿಸಿ ಶೆಡ್‌ಗಳನ್ನು ನಿರ್ಮಿಸಿದ್ದಾರೆ. ಇದರಿಂದ ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗುತ್ತಿದೆ. ಇದರ ಬಗ್ಗೆ ಮುಡಾ ಆಯುಕ್ತರ ಗಮನಕ್ಕೆ ತಂದು ತಕ್ಷಣ ತೆರವುಗೊಳಿಸಿ ಮಾಲೀಕರಿಗೆ, ಕಾರಣ ಕೇಳಿ ನೋಟಿಸ್ ನೀಡುವಂತೆ ಸೂಚನೆ ನೀಡಿದರು.

ಯುಜಿಡಿ ಸಮಸ್ಯೆ ಬಗೆಹರಿಸಿ: ಮತ್ತೊಂದು ರಸ್ತೆಯಲ್ಲಿ ಪ್ರಭಾವಿ ರಾಜಕಾರಣಿಯೊಬ್ಬರು ವಾಸಿಸುವ ಅಪಾರ್ಟ್‌ಮೆಂಟ್‌ನ ಯುಜಿಡಿ ಲೈನ್ ಸಂಪರ್ಕವನ್ನು ಎದುರುಗಡೆ ರಸ್ತೆಗೆ ಬಿಡದೆ ಹಿಂಭಾಗದ ರಸ್ತೆಯ ಪೈಪ್ ಲೈನ್‌ಗೆ ಸಂಪರ್ಕ ಕಲ್ಪಿಸಿರುವುದು ಸಾಕಷ್ಟು ಅಡೆತಡೆಗೆ ಕಾರಣವಾಗಿದೆ ಎಂದು ನಿವಾಸಿಗಳು ಶಾಸಕರ ಗಮನಕ್ಕೆ ತಂದರು. ಈ ಅಪಾರ್ಟ್‌ಮೆಂಟ್‌ನ ಕಟ್ಟಡ ಮೋರಿಗೆ ಹೊಂದಿಕೊಂಡಂತೆ ನಿರ್ಮಾಣ ಮಾಡಲಾಗಿದೆ. ಬಫರ್ ಜೋನ್ ಬಿಡದೆ ಕಟ್ಟಡ ನಿರ್ಮಾಣ ಮಾಡಿರುವುದು ಕಾನೂನು ಬಾಹಿರ. ಇಲ್ಲಿ ರೆವಿನ್ಯೂ ಬಡಾವಣೆ ಇದ್ದಾಗ ಮುಡಾ ಅಧಿಕಾರಿಗಳು ಪರಿಶೀಲಿಸದೆ ಇಲ್ಲಿನ ನೀಲನಕ್ಷೆಗೆ ಅನುಮೋದನೆ ನೀಡಿರುವುದು ಇಷ್ಟೆಲ್ಲಾ ಅವಾಂತರಕ್ಕೆ ಕಾರಣ ಎಂದು ಆರೋಪಿಸಿದರು.



ಜೆ.ಪಿ.ನಗರಕ್ಕೆ ಹೊಂದಿಕೊಂಡಂತಿರುವ ಓಂಕಾರ ಬಡಾವಣೆಯ ನಿವಾಸಿಗಳಿಗೆ ಶಾಸಕ ಟಿ.ಎಸ್.ಶ್ರೀವತ್ಸ ಪಾದಯಾತ್ರೆ ನಡೆಸಿದರು.

ಈ ಸಮಸ್ಯೆಯನ್ನು ನಗರಪಾಲಿಕೆ, ಮುಡಾ ಅಧಿಕಾರಿಗಳೊಂದಿಗೆ ಚರ್ಚಿಸಿ ಅಪಾರ್ಟ್‌ಮೆಂಟ್ ನಿರ್ಮಾಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿ ವರದಿ ನೀಡುವಂತೆ ಸೂಚಿಸಿದರು. ಇದೀಗ ಮತ್ತೊಂದು ಅಪಾರ್ಟ್‌ಮೆಂಟ್‌ನವರು ಅದೇ ರೀತಿ ಯುಜಿಡಿ ಸಂಪರ್ಕ ಕಲ್ಪಿಸಲು ಮುಂದಾಗಿದ್ದು, ನಾವು ಗಲಾಟೆ ಮಾಡಿದ ಮೇಲೆ ಈ ಯೋಚನೆ ಕೈಬಿಟ್ಟಿದ್ದಾರೆ. ಕೂಡಲೇ ಇದರ ಬಗ್ಗೆ ಗಮನಹರಿಸಬೇಕು ಎಂದು ಒತ್ತಾಯಿಸಿದರು.

ಹಾವುಗಳಿಂದ ಪ್ರಾಣ ಉಳಿಸಿ: ಬಡಾವಣೆಯಲ್ಲಿನ ಖಾಲಿ ನಿವೇಶನಗಳಲ್ಲಿ ಬೆಳೆದಿರುವ ಗಿಡ–ಗಂಟಿಗಳನ್ನು ಸ್ವಚ್ಛ ಮಾಡಿಸಬೇಕು. ಬಿಸಿಲು ಹೆಚ್ಚಾದ್ದಂತೆ ಹಾವುಗಳು ರಸ್ತೆಯಲ್ಲಿ ಹರಿದಾಡುತ್ತವೆ. ಹಾಗಾಗಿ ಈ ಸಮಸ್ಯೆ ಬಗ್ಗೆ ಪಾಲಿಕೆಗೆ ದೂರು ನೀಡಿದರೂ ಪ್ರಯೋಜನವಾಗಿಲ್ಲ ಎಂದಾಗ, ಪಾಲಿಕೆ ವತಿಯಿಂದ ಒಮ್ಮೆ ಕ್ಲೀನ್ ಮಾಡಿಸಲು ಅಧಿಕಾರಿಗಳ ಜತೆ ಚರ್ಚಿಸುತ್ತೇನೆ ಎಂದು ನಿವಾಸಿಗಳಿಗೆ ಭರವಸೆ ನೀಡಿದರು.

ಪೌರಕಾರ್ಮಿಕರನ್ನು ನೇಮಿಸಿ: ಬೀದಿ ಕಸವನ್ನು ಸ್ವಚ್ಛಗೊಳಿಸಲು ಪೌರಕಾರ್ಮಿಕರು ಬರುವುದಿಲ್ಲ. ತಾವು ಬರುತ್ತೀರಾ ಎನ್ನುವ ಕಾರಣಕ್ಕಾಗಿ ಇವತ್ತು ಒಂದಿಬ್ಬರು ಬಂದು ಕಸ ಸಂಗ್ರಹಿಸುತ್ತಿದ್ದಾರೆ. ನಾವು ನಾಲ್ಕೈದು ತಿಂಗಳಿಗೊಮ್ಮೆ ಪೌರಕಾರ್ಮಿಕರನ್ನು ನೋಡುತ್ತಿದ್ದೇವೆ. ಕಸ ಸಂಗ್ರಹಣೆಗೆ ವಾರದಲ್ಲಿ ಎರಡು ದಿನ ಮಾತ್ರ ಟಿಪ್ಪರ್ ಬರುತ್ತಿರುವುದರಿಂದ ಮನೆಗಳಲ್ಲೇ ಕಸ ಕೊಳೆಯುತ್ತಿದೆ. ಇದರಿಂದಾಗಿ ಕೆಲ ನಿವಾಸಿಗಳು ರಸ್ತೆಯಲ್ಲೇ ಸುರಿಯಬೇಕಿದೆ ಎಂದು ನಿವಾಸಿ ಚಂದ್ರಶೇಖರ್ ಹೇಳಿದರು. ವಿದ್ಯುತ್ ಟ್ರಾನ್ಸ್ ಫಾರ್ಮರ್‌ಗೆ ಬೇಲಿ ಬೆಳೆದಿರುವ ಜತೆಗೆ ಮೋರಿ ಅಂಚಿನಲ್ಲಿದ್ದು, ನೆಲಕ್ಕೆ ಒರಗದೆ. ಈ ಕಂಬವನ್ನು ಬದಲಿಸಬೇಕು ಎಂದು ಮನವಿ ಮಾಡಿದರು. ಇದಕ್ಕೆ ಶಾಸಕರು ಸಮಸ್ಯೆ ಬಗೆಹರಿಸುವುದಾಗಿ ಭರವಸೆ ನೀಡಿದರು. ನಗರಪಾಲಿಕೆ ಮಾಜಿ ಸದಸ್ಯೆ ಶಾಂತಮ್ಮ, ಬಿಜೆಪಿ ಕೆ.ಆರ್.ಕ್ಷೇತ್ರದ ಅಧ್ಯಕ್ಷ ಗೋಪಾಲರಾಜೇ ಅರಸ್, ಲಕ್ಷ್ಮೀಅರಸು, ವಡಿವೇಲು, ಎನ್.ಪ್ರದೀಪ್ ಕುಮಾರ್. ಜಯರಾಂ. ಕಿಶೋರ್, ಕೀರ್ತಿ, ಶಶಿ, ರಾಘವೇಂದ್ರ, ದಿನೇಶ್, ದೀಪಕ್ ಮತ್ತಿತರರು.

ಮೈಸೂರು ಮಿತ್ರ

ನಾಗಮಂಗಲ ಗಲಭೆಯಲ್ಲಿ ಒಟ್ಟು 55 ಮಂದಿ ಬಂಧನ, 4.5 ಕೋಟಿ ನಷ್ಟ

ಸಿಸಿ ಟಿವಿ ಆಧರಿಸಿ ಕ್ರಮ, ಅಮಾಯಕರಿಗೆ ತೊಂದರೆ ಕೊಡಲ್ಲ:ಎಸ್ಪಿ



ಮಂಡ್ಯ,ಸೆ.17–ನಾಗಮಂಗಲ ಕೋಮು ಗಲಭೆ ಪ್ರಕರಣಕ್ಕೆ ಸಂಬಂಧಿಸಿದಂತೆ ಈವರೆಗೆ ಒಟ್ಟು 24 ಪ್ರಕರಣ ದಾಖಲಾಗಿದ್ದು, 55 ಆರೋಪಿಗಳ ಬಂಧನ ಮಾಡಲಾಗಿದೆ. ಎಲ್ಲಾ ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ನೀಡಲಾಗಿದೆ. ಜೊತೆಗೆ ಘಟನೆಗೆ ಸಂಬಂ ಧಿಸಿದಂತೆ ಎಫ್‌ಐಆರ್ ಮಾಹಿತಿ ಪ್ರಕಾರ 4.5 ಕೋಟಿ ನಷ್ಟವಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದರು.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸೆ.11 ರಂದು ನಾಗಮಂಗಲ ಪಟ್ಟಣದಲ್ಲಿ ಘಟನೆ ನಡೆದಿದೆ. ಪಟ್ಟಣದಲ್ಲಿ ಹೆಚ್ಚಿನ ಬಂದೋ–ಬಸ್ತ್ ಮಾಡಲಾಗಿದ್ದು, ನಾಗಮಂಗಲ ಸಹಜ ಸ್ಥಿತಿಗೆ ಬರುತ್ತಿದೆ. ಅಂಗಡಿ ಮುಂಗಟ್ಟು ತೆರೆದು ಕಾರ್ಯ ನಿರ್ವಹಿಸುತ್ತಿದ್ದಾರೆ. ಘಟನೆಯಿಂದ ಕೆಲವು ಗ್ರಾಮದ ಯುವಕರು ಊರು ಬಿಟ್ಟಿದ್ದಾರೆ. ಅಮಾಯಕರಿಗೆ ತೊಂದರೆ ಕೊಡಲ್ಲ.



ಸೆ.11ರಂದು ಹೊತ್ತಿ ಉರಿದ ನಾಗಮಂಗಲ ಪಟ್ಟಣದ ದೃಶ್ಯ

ಪ್ರಕರಣದಲ್ಲಿ ಪ್ರಮುಖ ಪಾತ್ರ ವಹಿಸಿ ಭಾಗಿಯಾದವರನ್ನು ಮಾತ್ರ ಬಂಧಿಸಿದ್ದೇವೆ ಎಂದು ಸ್ಪಷ್ಟಪಡಿಸಿದರು.

ಆರೋಪಿಗಳ ಪತ್ತೆಗೆ ನಮ್ಮ ತಂಡಗಳು ಕೆಲಸ ಮಾಡಲಾಗುತ್ತಿದೆ. ಸಿಸಿಟಿವಿ ದೃಶ್ಯ ಕಲೆಕ್ಟ್ ಮಾಡಲಾಗಿದೆ. ಪ್ರಕರಣದಲ್ಲಿ 100ಕ್ಕೂ ಹೆಚ್ಚು ಜನರನ್ನು ಗುರ್ತಿಸಲಾಗಿದೆ. ಸದ್ಯ ನಾಗಮಂಗಲ ಪಟ್ಟಣ ಶಾಂತವಾಗಿದೆ. ಸಹಜ ಸ್ಥಿತಿಯಲ್ಲಿ ಜನರು ಮರಳಿದ್ದಾರೆ. ಅಮಾಯಕರಿಗೆ ಏನೂ ಮಾಡಲ್ಲ, ಅವರು ಪಟ್ಟಣಕ್ಕೆ ಬರಬಹುದು ಎಂದು ಹೇಳಿದರು.

ಘಟನೆ ಹಿನ್ನೆಲೆ ಸಾಮಾಜಿಕ ಜಾಲತಾಣದ ಮೇಲೆ ನಿಗಾ ವಹಿಸಲಾಗಿದೆ. ಅವರ ಮೇಲೆ ಕ್ರಮ ಕೈಗೊಳ್ಳಲು ತಂಡ ರಚನೆ. ಬೇರೆ ಬೇರೆ ಜಿಲ್ಲೆಯಲ್ಲಿ ನಡೆದ ವಿಡಿಯೋ ಬಿಟ್ಟು ನಾಗಮಂಗಲ ಪ್ರಕರಣ ಅಂತ ಪೋಸ್ಟ್ ಹಾಕಿದ್ದಾರೆ. ಅಂತವರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ. ಪೊಲೀಸ್ ಇಲಾಖೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದ್ದೇವೆ. ಮುಂದಿನ ದಿನಗಳಲ್ಲಿ ಶಾಂತಿಯುತ ಜೀವನ ನಡೆಸಲು ಅನುವು ಮಾಡಿಕೊಡಲಾಗುವುದು. 24 ಪ್ರಕರಣದಲ್ಲಿ ಮೊದಲು ಸುಮೋಟೊ ಕೇಸ್, ಪೊಲೀಸ್ ಅಧಿಕಾರಿಗಳ ಕರ್ತವ್ಯಕ್ಕೆ ಅಡ್ಡಿ, ಅಕ್ರಮ ಗುಂಪುಗಾರಿಕೆ, ಅಂಗಡಿ ಮುಂಗಟ್ಟಿಗೆ ಬೆಂಕಿ, ಬೈಕ್‌ಗೆ ಬೆಂಕಿ, ಕಾನೂನು ಸುವ್ಯವಸ್ಥೆಗೆ ತೊಂದರೆಯಾಗಿರುವ ಬಗ್ಗೆ ದೂರು ದಾಖಲಾಗಿದೆ ಎಂದು ವಿವರಿಸಿದರು.

ಕಾನೂನು ಪ್ರಕಾರ ಪ್ರಕರಣ ದಾಖಲಿಸಿ 55 ಆರೋಪಿಗಳ ಬಂಧನವಾಗಿದ್ದು, ಅಂಗಡಿ ಮುಂಗಟ್ಟು ಹಾನಿ ಬಗ್ಗೆ ದೂರು ಬಂದ ಹಿನ್ನೆಲೆ ಪ್ರಕರಣ ದಾಖಲಾಗಿದೆ. ಪ್ರಕರಣದ ಬಗ್ಗೆ ಸಿಸಿಟಿವಿ ವಿಡಿಯೋ ಪರಿಶೀಲನೆ ನಡೆಸಿ, ಅಂತವರ ಮೇಲೆ ಕ್ರಮ ಕೈಗೊಳ್ಳಲಾಗಿದೆ ಎಂದರು.

ಪ್ರಕರಣದಲ್ಲಿ ಬಾಂಗ್ಲಾದೇಶದವರ ಭಾಗಿ ವಿಚಾರದ ಬಗ್ಗೆ ಮಾತನಾಡಿ, ಘಟನೆಯಲ್ಲಿ ಅಕ್ರಮವಾಗಿ ಬಾಂಗ್ಲಾದೇಶದವರಿದ್ದರೆ ಪರಿಶೀಲನೆ ಮಾಡುತ್ತೇವೆ. ನಮ್ಮ ಮಾಹಿತಿ ಪ್ರಕಾರ ಪ್ರಕರಣದ ಯಾರೂ ಇಲ್ಲ. ಅಕ್ರಮ ಚಟುವಟಿಕೆ ಇದ್ದರೆ ಗೊತ್ತಾಗುತ್ತಿತ್ತು. ಈ ವ್ಯಾಪ್ತಿಯಲ್ಲಿ ಅಕ್ರಮ ಚಟುವಟಿಕೆ ನಡೆಯುತ್ತಿಲ್ಲ. ಹಾನಿ ಬಗ್ಗೆ ಜಿಲ್ಲಾಡಳಿತ ತಂಡ ರಚಿಸಿ ಮಾಹಿತಿ ಕಲೆ ಹಾಕಲಾಗುತ್ತದೆ ಎಂದರು.

ಬಳಕೆಗೆ ಬಾರದ ರೀತಿಯಲ್ಲಿ ಕಟ್ಟಡಗಳು ಹಾನಿಯಾಗಿದ್ದು, ಜಿಲ್ಲಾಧಿಕಾರಿ ವರದಿಯನ್ನು ಸರ್ಕಾರಕ್ಕೆ ಕಳಿಸುತ್ತಾರೆ. ಮಾಹಿತಿ ಪ್ರಕಾರ 4.5ಕೋಟಿ ಹಾನಿಯಾಗಿದ್ದು, ಸಿಸಿಟಿವಿ ವಿಡಿಯೋಗಳನ್ನು ಪರಿಶೀಲನೆ ನಡೆಸಲಾಗುತ್ತಿದೆ. ನಾಗಮಂಗಲ ಪಟ್ಟಣದಲ್ಲಿ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದ್ದೇವೆ ಎಂದು ಹೇಳಿದರು.

> ನಾಗಮಂಗಲ ಕೋಮುಗಲಭೆ ಪ್ರಕರಣದಲ್ಲಿ ಕೇರಳ ನಂಟು, ಪಿಎಫ್‌ಐ ಕೈವಾಡವಿದೆ ಎಂಬ ಆರೋಪ ಸರಿಯಲ್ಲ. ನಾಗಮಂಗಲ ಪ್ರಕರಣದಲ್ಲಿ 55 ಆರೋಪಿಗಳನ್ನು ಬಂಧಿಸಿದ್ದೇವೆ. ಅದರಲ್ಲಿ ಇಬ್ಬರು ಆರೋಪಿಗಳ ಸ್ವಂತ ವಿಳಾಸ ಕೇರಳವಾಗಿದ್ದು, ನಾಗಮಂಗಲದ ಬೇಕರಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಕಳೆದ 18 ವರ್ಷದಿಂದ ನಾಗಮಂಗಲದಲ್ಲಿ ವಾಸವಿದ್ದು, ಇತ್ತೀಚೆಗೆ ಬಂದವರಲ್ಲ, ಅವರ ಫ್ಯಾಮಿಲಿ ಕೇರಳದಲ್ಲಿದ್ದಾರೆ. ಪರಿಶೀಲನೆ ವೇಳೆ ಪಿಎಫ್‌ಐ ಲಿಂಕ್ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಈ ಬಗ್ಗೆ ಹೆಚ್ಚಿನ ತನಿಖೆ ಮಾಡುತ್ತಿದ್ದೇವೆ. ಸಾಕಷ್ಟು ಮಾಹಿತಿ ಕಲೆ ಹಾಕಿ ತನಿಖೆ ನಡೆಸಲಾಗುತ್ತಿದೆ.
> **ಮಲ್ಲಿಕಾರ್ಜುನ ಬಾಲದಂಡಿ,** ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ವಿಶ್ವಕರ್ಮ ಗುರುಗಳ ಸಾಧನೆ, ಕೊಡುಗೆ ಅಪಾರ: ರವಿಕುಮಾರ್



ವಿಶ್ವಕರ್ಮ ಜಯಂತಿಯನ್ನು ಉದ್ಘಾಟಿಸುತ್ತಿರುವ ಶಾಸಕ ರವಿಕುಮಾರ್ ಮತ್ತು ಇತರರು.

ಮಂಡ್ಯ,ಸೆ.17– ವಿಶ್ವಕರ್ಮ ಗುರುಗಳು ವಾಸ್ತು ಕಲೆಯನ್ನು ಪ್ರಪಂಚಕ್ಕೆ ಪರಿಚಯಿಸಿದ ಮೊದಲ ಇಂಜಿನಿಯರ್ ಆಗಿದ್ದು, ಇವರ ಸಾಧನೆ ಹಾಗೂ ಕೊಡುಗೆ ಅಪಾರ ಎಂದು ಶಾಸಕ ಪಿ.ರವಿಕುಮಾರ್ ತಿಳಿಸಿದರು.

ಮಂಗಳವಾರ ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಮಂಡ್ಯ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆ ಇವರ ಸಂಯುಕ್ತಾಶ್ರಯದಲ್ಲಿ ನಡೆದ 2024–25ನೇ ಸಾಲಿನ ವಿಶ್ವಕರ್ಮ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ, ವಿಶ್ವಕರ್ಮ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಮಾತನಾಡಿದ ಅವರು, ವಿಶ್ವಕರ್ಮ ಸಮಾಜವು ಬಹಳ ದೊಡ್ಡ ಸಮಾಜವಾಗಿದೆ. ಜಗತ್ತಿನ ಸೃಷ್ಟಿಗೆ ಬ್ರಹ್ಮ ಕಾರಣವಾದರೆ, ಜಗತ್ತು ಹೇಗಿರಬೇಕು ಎಂದು ರೂಪಿಸಿದ ಶಿಲ್ಪಿ ವಿಶ್ವಕರ್ಮ. ಹಿಂದೂ ಸಂಪ್ರದಾಯದಲ್ಲಿ ದೇವತೆಗಳಿಗೆ ಸ್ವರ್ಗಲೋಕದಲ್ಲಿ ಅರಮನೆ ನಿರ್ಮಿಸಿದವರು ವಿಶ್ವಕರ್ಮ. ಜೊತೆಗೆ ದೇವರ ಆಯುಧಗಳನ್ನು ನಿರ್ಮಾಣ ಮಾಡಿದವರು ವಿಶ್ವ ಕರ್ಮ ಗುರುಗಳೇ ಎಂದು ತಿಳಿಸಿದರು.

ನಮ್ಮ ಸರ್ಕಾರವು ಸಣ್ಣ ಸಮುದಾಯಗಳ ಏಳಿಗೆಗಾಗಿ ಶ್ರಮಿಸುತ್ತಿದೆ. ಇಂತಹ ಜಯಂತಿಗಳನ್ನು ಆಚರಿಸುವ ಮೂಲಕ ಎಲ್ಲಾ ಸಮುದಾಯದವರ ಕೊಡುಗೆಗಳನ್ನು ಸಮಾಜಕ್ಕೆ ತಿಳಿಸಬಹುದು ಎಂದು ಹೇಳಿದರು.

ಜಿಲ್ಲಾಧಿಕಾರಿ ಡಾ.ಕುಮಾರ ಮಾತನಾಡಿ, ವಿಶ್ವಕರ್ಮ ಜಯಂತಿಯು ಕೇವಲ ಒಂದು ಸಮುದಾಯಕ್ಕೆ ಸೀಮಿತವಾಗಿಲ್ಲ. ಇಡೀ ವಿಶ್ವಕ್ಕೆ ಗುರುವಾದ, ದೇವಲೋಕ, ಸ್ವರ್ಗಲೋಕವನ್ನು ಹಾಗೂ ದೇವತೆಗಳಿಗೆ ವಾಹನಗಳನ್ನು ನಿರ್ಮಾಣ ಮಾಡಿ ಸೃಷ್ಟಿಕರ್ತ ಬ್ರಹ್ಮನಿಗೆ ಸಕಲ ಸೌಲಭ್ಯಗಳನ್ನು ಒದಗಿಸಿದ ನುರಿತ ಗುರು ವಿಶ್ವಕರ್ಮ. ಅವರ ಪ್ರಾಮುಖ್ಯತೆ ಹಾಗೂ ಮಹತ್ವವನ್ನು ಎಲ್ಲರೂ ಅರಿಯಬೇಕು ಎಂದು ತಿಳಿಸಿದರು.

ವೇದ ಬ್ರಹ್ಮಶ್ರೀ ಕೆ.ರಾಘವೇಂದ್ರ ಸ್ತಪತಿ ಉಪನ್ಯಾಸ ನೀಡಿ, ವಿಶ್ವಕರ್ಮನ ಜಯಂತಿಯನ್ನು ಪ್ರತಿ ವರ್ಷ ಕನ್ಯಾ ಸಂಕ್ರಾಂತಿಯಂದು ಆಚರಿಸಲಾಗುವುದು. ಇಡೀ ಭೂಮಂಡಲವನ್ನು ನಿರ್ಮಿಸಿದ ಈತನನ್ನು ವಾಸ್ತು ಶಾಸ್ತ್ರದ ಪಿತಾಮಹ ಎಂದು ಪರಿಗಣಿಸಲಾಗಿದೆ. ಹೀಗಾಗಿ ಪ್ರತಿ ವರ್ಷ ಒಂದು ದಿನ ಆತನಿಗೆ ಪೂಜೆ ಸಲ್ಲಿಸಲಾಗುತ್ತದೆ. ಇದೇ ಸೆ.17ರಂದು ವಿಶ್ವಕರ್ಮ ಜಯಂತಿ ಆಚರಿಸಲಾಗುತ್ತಿದೆ ಎಂದು ತಿಳಿಸಿದರು.

ಶಿವಪುರ ಸ್ಮಾರಕ ಪುನರುಜ್ಜೀವನಕ್ಕೆ 2 ಕೋಟಿ ರೂ. ಬಿಡುಗಡೆಗೆ ಸಿಎಂ ಆದೇಶ


ನಿರ್ವಹಣೆ ಇಲ್ಲದೆ ಮದ್ದೂರಿನ ಧ್ವಜ ಸತ್ಯಾಗ್ರಹ ಸ್ಮಾರಕ ಭವನ ಹಾಳಾಗಿರುವ ಬಗ್ಗೆ ಸಿಎಂ ಗಮನ ಸೆಳೆದಿದ್ದ ದಿನೇಶ್‌ಗೂಳಿಗೌಡ



ದಿನೇಶ ಗೂಳಿಗೌಡ

ಮಂಡ್ಯ,ಸೆ.17– ಮಂಡ್ಯ ಜಿಲ್ಲೆಯ ಮದ್ದೂರಿನ ಶಿವಪುರದ ಧ್ವಜ ಸತ್ಯಾಗ್ರಹ ಸ್ಮಾರಕ ಸೌಧ ಪುನರುಜ್ಜೀವನ ಮಾಡಲು 2 ಕೋಟಿ ರೂ. ಅನುದಾನ ಬಿಡುಗಡೆ ಮಾಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆರ್ಥಿಕ ಇಲಾಖೆ ಮುಖ್ಯ ಕಾರ್ಯದರ್ಶಿಗೆ ಆದೇಶಿಸಿದ್ದಾರೆ. ತಾವು ಸಲ್ಲಿಸಿದ ಮನವಿಗೆ ಸಿಎಂ ಸ್ಪಂದಿಸಿ, ಸ್ಮಾರಕದ ನವೀಕರಣಕ್ಕೆ ಕ್ರಮವಹಿಸಿದ್ದು, ಸಿದ್ದರಾಮಯ್ಯನವರು ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಅಭಿನಂದನೆಗಳು ಎಂದು ಮಂಡ್ಯ, ಸ್ಥಳೀಯ ಸಂಸ್ಥೆಗಳ ಕ್ಷೇತ್ರದ ವಿಧಾನಪರಿಷತ್ ಶಾಸಕ ದಿನೇಶ ಗೂಳಿಗೌಡ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ

1937ರಲ್ಲಿ ಶಿವಪುರದಲ್ಲಿ ಹೋರಾಟಗಾರರಾದ ಎನ್.ವೀರಣ್ಣಗೌಡ, ಕೊಪ್ಪದ ಜೋಗಿಗೌಡ, ಸಾಹುಕಾರ ಚೆನ್ನಯ್ಯ ನೇತೃತ್ವದಲ್ಲಿ ನಡೆದಿದ್ದ ಹೋರಾಟದ ನೆನಪಿಗೆ ಅಲ್ಲಿ ಸೌಧ ನಿರ್ಮಾಣ ಮಾಡಲಾಗಿತ್ತು. ಆದರೆ, ಸೌಧ ನಿರ್ವಹಣೆ ಇಲ್ಲದೇ ಹಾಳು ಬಿದ್ದಿದೆ. ಸ್ಮಾರಕದ ಒಳಗಡೆ ಇರುವ ಚಿತ್ರಪಟಗಳು ಹಾಳಾಗಿವೆ. ಉದ್ಯಾನವನ ನಿರ್ವಹಣೆ ಇಲ್ಲದೇ ಸೊರಗಿದೆ. ಸಂಗೀತ ಕಾರಂಜಿ ನೃತ್ಯ ನಿಲ್ಲಿಸಿ ತುಕ್ಕು ಹಿಡಿದಿದೆ. ಸ್ಮಾರಕ ಭವನದ ಒಳಗೆ ಧೂಳು ತುಂಬಿಕೊಂಡಿದೆ. ಭವನದ ಬಾಗಿಲು ಸದಾ ಹಾಕಿರುವುದರಿಂದ ಪ್ರವಾಸಿಗರಿಗೆ ವಿದ್ಯಾರ್ಥಿಗಳಿಗೆ ಸಮಸ್ಯೆಯಾಗಿದೆ ಎಂದು ದಿನೇಶ ಗೂಳಿಗೌಡ ಅವರು ಸಮಸ್ಯೆಯನ್ನು ವಿವರಿಸಿ



ಸಿಎಂ ಅವರಿಗೆ ಸೆ.9 ರಂದು ಪತ್ರ ಬರೆದಿದ್ದರು.

ಪತ್ರದಲ್ಲೇನಿತ್ತು: ಮದ್ದೂರು ತಾಲೂಕಿನ ಶಿವಪುರದ ಧ್ವಜ ಸತ್ಯಾಗ್ರಹ ಸ್ಮಾರಕ ಸೌಧವು ಮಂಡ್ಯ ಜಿಲ್ಲೆಯ ಹೆಮ್ಮೆಯಾಗಿದೆ. ಮೈಸೂರು, ಬೆಂಗಳೂರು, ರಾಷ್ಟ್ರೀಯ ಹೆದ್ದಾರಿಯ ನಡುವೆ ಇರುವ ಸ್ಮಾರಕವು ಸ್ವಾತಂತ್ರ್ಯ ಹೋರಾಟದ ಹೆಗ್ಗುರುತಾಗಿದೆ. ಆದರೆ, ಭವನ ಇಂದು ಹಾಳು ಕೊಂಪೆಯಾಗಿದೆ.

ಹಾಗಾಗಿ ಸ್ಮಾರಕ ರಕ್ಷಣೆಗೆ ಕ್ರಮ ವಹಿಸಬೇಕು. ಕಟ್ಟಡ ದುರಸ್ತಿ ಮಾಡಿ, ಹರಿದ ಚಿತ್ರಪಟಗಳನ್ನು ಬದಲಿಸಬೇಕು. ಸ್ಮಾರಕ ಭವನ ನಿರ್ವಹಣೆಗೆ ಸಿಬ್ಬಂದಿ, ರಾತ್ರಿ ಕಾವಲುಗಾರರನ್ನು ನೇಮಿಸಬೇಕು. ಕಾಯಮಾಗಿ ಬಾಗಿಲು ತೆರೆದು ಪ್ರವಾಸಿಗರ, ವಿದ್ಯಾರ್ಥಿಗಳ ವೀಕ್ಷಣೆಗೆ ಅವಕಾಶ ಮಾಡಿಕೊಡಬೇಕು. ಸ್ಮಾರಕದ ಉದ್ಯಾನವನ, ಸಂಗೀತ ಕಾರಂಜಿ ಪುನರುಜ್ಜೀವನ ಮಾಡಬೇಕು. ಇದಕ್ಕೆಲ್ಲ 2 ಕೋಟಿ ರೂ. ನೀಡುವಂತೆ ದಿನೇಶ ಗೂಳಿಗೌಡ ಅವರು ಸಿಎಂಗೆ ಮನವಿ ಮಾಡಿದ್ದರು.

ಸ್ಮಾರಕದ ಅಪೂರ್ವ ಇತಿಹಾಸ: ದಿನೇಶ ಗೂಳಿಗೌಡ ಅವರು ಬರೆದ ಪತ್ರದಲ್ಲಿ ಸ್ಮಾರಕದ ಇತಿಹಾಸ, ಅದರ ಮಹತ್ವವನ್ನು ಮನಮುಟ್ಟುವಂತೆ ವಿವರಿಸಿದ್ದಾರೆ. ಸ್ವಾತಂತ್ರ್ಯ ಪೂರ್ವ ಹೋರಾಟದಲ್ಲಿ ಶಿವಪುರ ಧ್ವಜ ಸತ್ಯಾಗ್ರಹದ ಪಾತ್ರ ಅವಿಸ್ಮರಣೀಯ. ಇತಿಹಾಸದ ಪುಟಗಳಲ್ಲಿ ಇದು ಅಜರಾಮರವಾಗಿದೆ ಇಂಥ ಒಂದು ಸತ್ಯಾಗ್ರಹ ಮಂಡ್ಯ ಜಿಲ್ಲೆಯ ಮದ್ದೂರು ತಾಲೂಕಿನಲ್ಲಾಗಿದೆ ಎಂಬುದು ಹೆಮ್ಮೆ ತರುವ ವಿಷಯವಾಗಿದೆ. ಅದು 1937ರ ಸಮಯ ಆಗಿನ ಬ್ರಿಟಿಷ್ ಸರ್ಕಾರವು ಮ್ಯಾಜಿಸ್ಟ್ರೇಟ್ ಅನುಮತಿಯಿಲ್ಲದೆ ಸಭೆ ಮೆರವಣಿಗೆಗಳು ನಡೆಸಬಾರದೆಂದು ಫರ್ಮಾನು ಹೊರಡಿಸಿತು. ಇದು ಮೈಸೂರು ಸಂಸ್ಥಾನದ ಜನರ ಆಕ್ರೋಶಕ್ಕೆ ಕಾರಣವಾಯಿತು.

ಸ್ವಾತಂತ್ರ್ಯ ಹೋರಾಟಕ್ಕೆ ಮತ್ತಷ್ಟು ಕಿಚ್ಚು ನೀಡಿದ ಬ್ರಿಟಿಷ್ ಸರ್ಕಾರದ ನಡೆಯಿಂದ 1938ರ ಶಿವಪುರದ ಧ್ವಜ ಸತ್ಯಾಗ್ರಹಕ್ಕೆ ನಾಂದಿ ಹಾಡಿತು. ಅಂದರೆ, ಸರ್ಕಾರದ ನೀತಿಯಿಂದ ಸಂಸ್ಥಾನದ ಜನತೆ ಕೆರಳಿ ಪ್ರತಿಬಂಧಕಾಜ್ಞೆ ಮುರಿದು ಸಂಸ್ಥಾನದ ಎಲ್ಲೆಡೆ ತ್ರಿವರ್ಣ ಧ್ವಜವನ್ನು ಹಾರಿಸಿ ಸ್ವಾತಂತ್ರ್ಯ ದಿವಸವನ್ನು ಆಚರಿಸಲು ಮುಂದಾದರು. 1938ರಲ್ಲಿ ಅಸ್ತಿತ್ವಕ್ಕೆ ಬಂದ ಮೈಸೂರು ಕಾಂಗ್ರೆಸ್ ಮೊದಲ ಅಧಿವೇಶನವನ್ನು ಮಂಡ್ಯ ಜಿಲ್ಲೆಯ ಮದ್ದೂರು ತಾಲೂಕಿನ ಶಿವಪುರ ಗ್ರಾಮದಲ್ಲಿ ಮಾಡಲು ನಿರ್ಧರಿಸಿತು.

ಏ.11ರಂದು ಟಿ.ಸಿದ್ಧಲಿಂಗಯ್ಯ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆದಿದ್ದಲ್ಲದೆ, ಸ್ವಾತಂತ್ರ್ಯದ ಸಂಕೇತವಾದ ತ್ರಿವರ್ಣ ಧ್ವಜವನ್ನು ಸಹ ಹಾರಿಸಲಾಯಿತು. ಇದು ಬ್ರಿಟಿಷ್ ಸರ್ಕಾರದ ಕೆಂಗಣ್ಣಿಗೂ ಗುರಿಯಾಯಿತು. ಕೆ.ಸಿ.ರೆಡ್ಡಿ, ಕೆ.ಟಿ.ಭಾಷ್ಯಂ ಅವರಂತಹ ನೂರಾರು ಮಹನೀಯರು ಪಾಲ್ಗೊಂಡಿದ್ದರು ಎಂದು ಅವರು ಹೇಳಿದ್ದಾರೆ.

ಒಂದನೇ ಪುಟದಿಂದ

ಕಾಂಗ್ರೆಸ್ ವರಿಷ್ಠರು ಗರಂ

ಸರ್ಕಾರ ಗಣೇಶನನ್ನೇ ಬಂಧಿಸುವ ಸ್ಥಿತಿಗೆ ತಲುಪಿದೆ. ಇವರಿಗೆ ನೀವು ಅಧಿಕಾರ ನೀಡಿದರೆ, ಇಲ್ಲಿಯೂ ಅದೇ ಪರಿಸ್ಥಿತಿ ಬರುತ್ತದೆ ಎಂದು ಮೋದಿ ಅವರು ಭಾಷಣ ಮಾಡುತ್ತಿರುವುದು ಕಾಂಗ್ರೆಸ್‌ಗೆ ಹಿನ್ನಡೆ ಉಂಟು ಮಾಡಿದೆ.

ಕರ್ನಾಟಕದಲ್ಲಿನ ಹದಗೆಟ್ಟ ಕಾನೂನು ಸುವ್ಯವಸ್ಥೆಯನ್ನೇ ಮೋದಿ ಅಸ್ತ್ರವನ್ನಾಗಿ ಮಾಡಿಕೊಂಡು ಟೀಕೆ ಮಾಡುತ್ತಿದ್ದಾರೆ. ಇದು ನಿಮ್ಮ ಅರಿವಿಗೆ ಬಂದಿಲ್ಲವೇ ಎಂದು ಪತ್ರದಲ್ಲಿ ಎಐಸಿಸಿ ಪ್ರಶ್ನಿಸಿದೆ.

ನಾಗಮಂಗಲ ಘಟನೆ ಹಾಗೂ ಗಣೇಶ ಮೂರ್ತಿ ಬಂಧನದ ಸುದ್ದಿ ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ ಅವರನ್ನೂ ಕೆರಳಿಸಿದೆಯಂತೆ, ಅವರ ಸಲಹೆ ಮೇರೆಗೆ ಎಐಸಿಸಿ ಪ್ರಧಾನ ಕಾರ್ಯದರ್ಶಿಗಳು ಕೆಪಿಸಿಸಿಯಿಂದ ವಿವರಣೆ ಬಯಸಿದ್ದಾರೆ. ಕಾನೂನು ಸುವ್ಯವಸ್ಥೆ ಹದಗೆಟ್ಟಿರುವುದರಿಂದ ಸರ್ಕಾರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿ ಅಭಿವೃದ್ಧಿ ಕುಂಠಿತಗೊಂಡಿದೆ ಎಂಬ ಮಾತುಗಳೂ ಕೇಳಿ ಬರುತ್ತಿವೆ. ಈ ಎಲ್ಲದಕ್ಕೂ ವಿವರಣೆ ನೀಡಿ ಎಂದಿದೆ. ಕೆಪಿಸಿಸಿ ಅಧ್ಯಕ್ಷ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿದೇಶ ಪ್ರವಾಸದಿಂದ ಹಿಂತಿರುಗುತ್ತಿದ್ದಂತೆ ಎಐಸಿಸಿ ಪತ್ರ ಅವರ ಕೈಸೇರಿದೆ. ಕಲಬುರಗಿಯ ಸಂಪುಟ ಸಭೆ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಗೃಹ ಸಚಿವ ಡಾ. ಜಿ.ಪರಮೇಶ್ವರ್ ಅವರೊಂದಿಗೆ ಸಮಾಲೋಚಿಸಿ ಎಐಸಿಸಿಗೆ ಕೆಪಿಸಿಸಿ ಉತ್ತರ ಬರೆಯಲಿದೆ ಎಂದು ಮೂಲಗಳು ತಿಳಿಸಿವೆ.

ಪರಪ್ಪನ ಅಗ್ರಹಾರಕ್ಕೆ ಸ್ಥಳಾಂತರ

ಶಾಸಕ ಮುನಿರತ್ನ ಪರ ಹಿರಿಯ ವಕೀಲ ಅಶೋಕ್ ಹಾರನಹಳ್ಳಿ ಅವರು ವಾದ ಮಂಡಿಸಿದರು. ಪ್ರಕರಣದ ವಿಚಾರಣೆ ನಡೆಸಿದ ಕೋರ್ಟ್, ಮುನಿರತ್ನಗೆ ನ್ಯಾಯಾಂಗ ಬಂಧನ ವಿಧಿಸಿದೆ. ವಿಚಾರಣೆಯನ್ನು ನಾಳೆಗೆ ಮುಂದೂಡಿದೆ. ತಿರುಪತಿಗೆ ಹೋಗುವಾಗ ಮುನಿರತ್ನ ಅವರನ್ನು ಬಂಧಿಸಿದ್ದಾರೆ. ವಿಚಾರಣೆಗೆ ನೋಟಿಸ್ ಕೂಡ ಕೊಟ್ಟಿಲ್ಲ. ಸುಪ್ರಿಂ ಕೋರ್ಟ್ ಆದೇಶದ ಪ್ರಕಾರ ನೋಟಿಸ್ ಕೊಡಬೇಕು. ತರಾತುರಿಯಲ್ಲಿ ಎಫ್‌ಐಆರ್ ದಾಖಲಿಸಿ ಬಂಧನ ಮಾಡಿದ್ದಾರೆ. 41 ಎ ನೋಟಿಸ್ ನೀಡಬೇಕು. ಇದೊಂದು ರಾಜಕೀಯ ಪ್ರೇರಿತ ಕೇಸ್ ಎಂದು ವಾದಿಸಿದರು. ಈ ಸಂಬಂಧ ನಾಳೆ ಆಕ್ಷೇಪಣೆ ಸಲ್ಲಿಕೆ ಮಾಡಲಿದ್ದು, ಜಾಮೀನು ಅರ್ಜಿ ವಿಚಾರಣೆ ನಡೆಯಲಿದೆ.

12 ದರೋಡೆ ಪ್ರಕರಣ

ಚಿನ್ನಾಭರಣವನ್ನು ವಶಪಡಿಸಿಕೊಂಡಿದ್ದರು. ಇತ್ತೀಚಿನವರೆಗೂ ಆಗಾಗ ಸಣ್ಣಪುಟ್ಟ ಪ್ರಕರಣಗಳು ನಡೆದರೂ ಅವು ಪೊಲೀಸ್ ಠಾಣೆಗಳಲ್ಲಿ ವರದಿ ಆಗಿರಲಿಲ್ಲ ಆದರೆ, ಸೆಪ್ಟೆಂಬರ್ 12ರಂದು ಮಧ್ಯರಾತ್ರಿ 1 ಗಂಟೆ ವೇಳೆಗೆ ಮದುವೆ ಆರತಕ್ಷತೆ ಮುಗಿಸಿ ಕೊಂಡು ಬೆಂಗಳೂರಿಂದ ಬರುತ್ತಿದ್ದ ಮೈಸೂರಿನ ಕುಟುಂಬದವರಿದ್ದ ಕಾರಿನ ಬಲಬದಿಯ ಹಿಂದಿನ ಬಾಗಿಲ ಗಾಜು ಒಡೆದು ದೋಚುವ ಯತ್ನ ನಡೆಸಿದ್ದಾರೆ.

> **ದರೋಡೆ, ಸುಲಿಗೆಕೋರರ ಮೇಲೆ ನಿಗಾ: ಎಎಸ್ಪಿ**
> ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್‌ವೇಯಲ್ಲಿ ವಾಹನ ತಡೆದು ದರೋಡೆ ಮಾಡುವವರ ಮೇಲೆ ನಿಗಾ ಇಟ್ಟಿದ್ದೇವೆ ಎಂದು ಮಂಡ್ಯ ಜಿಲ್ಲಾ ಅಡಿಷನಲ್ ಎಸ್ಪಿ ಎಸ್.ಜಿ. ಗಂಗಾಧರಸ್ವಾಮಿ ತಿಳಿಸಿದ್ದಾರೆ. ಮಂಡ್ಯ ಜಿಲ್ಲಾ ಸರಹದ್ದಿನಲ್ಲಿ ಆಯಾ ವ್ಯಾಪ್ತಿಯ ಠಾಣಾ ಪೊಲೀಸರು ಆಗಿಂದಾಗ್ಗೆ ಗಸ್ತು ಕಾರ್ಯಾಚರಣೆ ನಡೆಸಿ ಖದೀಮರ ಕೃತ್ಯಗಳಿಗೆ ಕಡಿವಾಣ ಹಾಕುತ್ತಿದ್ದಾರೆ. ಹೈವೇ ಪೆಟ್ರೋಲಿಂಗ್ ಸಿಬ್ಬಂದಿಯೂ ನಿರಂತರವಾಗಿ ಗಸ್ತಿನಲ್ಲಿರುವ ಜೊತೆಗೆ ಅಲ್ಲಲ್ಲಿ ಕ್ಯಾಮರಾ ಕಣ್ಗಾವಲಿದೆ. ಈಗ ಹೆದ್ದಾರಿಯಲ್ಲಿ ದೀಪಗಳೂ ಕಾರ್ಯನಿರ್ವಹಿಸುತ್ತಿರುವುದರಿಂದ ಇತ್ತೀಚೆಗೆ ಅಪರಾಧ ಕೃತ್ಯಗಳು ಕಡಿಮೆಯಾಗಿವೆ ಎಂದು ತಿಳಿಸಿದ್ದಾರೆ. ಸೆಪ್ಟೆಂಬರ್ 12ರಂದು ಮಧ್ಯರಾತ್ರಿ ಮೈಸೂರು ಕುಟುಂಬದವರ ಕಾರಿನ ಕಿಟಕಿ ಗಾಜು ಒಡೆದು ದರೋಡೆಗೆ ಯತ್ನಿಸಲಾಗಿದೆ ಎನ್ನಲಾದ ಘಟನೆ ಬಗ್ಗೆ ನಮಗೆ ವರದಿಯಾಗಿಲ್ಲ. ಮಾಹಿತಿ ನೀಡಿದಲ್ಲಿ ನಾವು ಅಗತ್ಯ ಕ್ರಮ ಕೈಗೊಳ್ಳುತ್ತೇವೆ ಎಂದು ಗಂಗಾಧರಸ್ವಾಮಿ ತಿಳಿಸಿದ್ದಾರೆ.

ದಂಪತಿ, ಮಗು ಸ್ಥಳದಲ್ಲೇ ಸಾವು

ಸಮೇತ 200 ಮೀಟರ್‌ಗೂ ಹೆಚ್ಚು ದೂರ ಎಳೆದುಕೊಂಡು ಹೋಗಿದೆ. ಈ ವೇಳೆ ಪತ್ನಿ ಮತ್ತು ಪುತ್ರ ಸ್ಥಳದಲ್ಲೇ ಸಾವನಪ್ಪಿದ್ದಾರೆ. ಟಿಪ್ಪರ್ ಚಾಲಕ ಮದ್ಯ ಸೇವಿಸಿ ಅತೀ ವೇಗದಿಂದ ಚಾಲನೆ ಮಾಡಿದ್ದರಿಂದ ಈ ದುರಂತ ಸಂಭವಿಸಿ, ಮೂವರ ಸಾವಿಗೆ ಕಾರಣವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸ್ಥಳಕ್ಕೆ ಸರ್ಕಲ್ ಇನ್ಸ್‌ಪೆಕ್ಟರ್ ಪರಶಿವಮೂರ್ತಿ ಮತ್ತು ಪಟ್ಟಣ ಠಾಣೆ ಪೊಲೀಸರು ಭೇಟಿ ನೀಡಿ, ಪರಿಶೀಲಿಸಿ ಟಿಪ್ಪರ್ ಚಾಲಕ ಗೋವಿಂದನನ್ನು ಬಂಧಿಸಿದ್ದಾರೆ. ಈ ಸಂಬಂಧ ಪಟ್ಟಣ ಠಾಣೆ ಪೊಲೀಸರು ಪ್ರಕರಣ ದಾಖಿಸಿಕೊಂಡಿದ್ದಾರೆ. ಮೃತ ದೇಹವನ್ನು ಪಟ್ಟಣದ ಸರ್ಕಾರಿ ಆಸ್ಪತ್ರೆ ಶವಾಗಾರದಲ್ಲಿ ಇರಿಸಲಾಗಿದ್ದು, ವಾರಸುದಾರರಿಗೆ ಮಾಹಿತಿ ನೀಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಡಿಸಿ ಶೋಕಾಸ್ ನೋಟಿಸ್

ಕೆ.ಎಸ್.ಶಿವರಾಂ ಹೇಳಿಕೆ ಆಧಾರದಲ್ಲಿ ಸೆ.15ರಂದು 'ಮೈಸೂರು ಮಿತ್ರ'ದಲ್ಲಿ 'ಮುಡಾ ಬ್ರಹ್ಮಾಂಡ ಭ್ರಷ್ಟಾಚಾರದ ಬೆನ್ನ ಹಿಂದೆಯೇ ಮೈಸೂರು ಪಾಲಿಕೆಯಲ್ಲೂ ನೂರಾರು ಕೋಟಿಯ 10 ಎಕರೆ ಭೂಮಿ ಕಬಳಿಕೆ ಯತ್ನ' ಶೀರ್ಷಿಕೆಯಡಿ ವರದಿ ಪ್ರಕಟಿಸಲಾಗಿದೆ. ಕಾಳಿದಾಸ ರಸ್ತೆಯಲ್ಲಿರುವ ಕುವೆಂಪು ಟ್ರಸ್ಟ್‌ಗೆ ಹೊಂದಿಕೊಂಡಂತೆ ಹಿನಕಲ್ ಗ್ರಾಮ ಸರ್ವೆ ನಂ.155ರಲ್ಲಿರುವ 10 ಎಕರೆ ನಿವೇಶನದ ಮೌಲ್ಯ ನೂರಾರು ಕೋಟಿ ಎಂದು ಅಂದಾಜಿಸಲಾಗಿದೆ.

ಮಹಾನಗರ ಪಾಲಿಕೆ ಕಚೇರಿಯ ದಾಖಲೆಗಳಲ್ಲಿ ಉಲ್ಲೇಖವಿಲ್ಲದಿದ್ದರೂ ಮೈಸೂರಿನ ನಾಚನಹಳ್ಳಿ ಪಾಳ್ಯ ನಿವಾಸಿಗಳಾದ ತುಳಸಮ್ಮ ಹಾಗೂ ಅವರ ಕುಟುಂಬಸ್ಥರು ಜು.3ರಂದು ಆ ಜಮೀನನ್ನು ಪೌತಿ ಖಾತೆ ಮಾಡಿಕೊಡಬೇಕೆಂದು ಅರ್ಜಿ ಸಲ್ಲಿಸಿರುತ್ತಾರೆ. ಮರುದಿನವೇ ನಗರ ಪಾಲಿಕೆ ಅಧಿಕಾರಿಗಳು ಇ–ಸ್ವತ್ತು ಖಾತೆ ನೋಂದಾಯಿಸಲು ಸಾರ್ವಜನಿಕರಿಂದ ಆಕ್ಷೇಪಣೆಗಳಿದ್ದರೆ ಸಲ್ಲಿಸುವಂತೆ ಸಾರ್ವಜನಿಕ ಪ್ರಕಟಣೆ ಹೊರಡಿಸಿ, ಒಂದೇ ತಿಂಗಳಲ್ಲಿ ಇ–ಆಸ್ತಿ ಖಾತೆ ನಮೂನೆಗೆ ಪ್ರಕ್ರಿಯೆ ನಡೆಸಲಾಗಿದೆ. ಸದರಿ ಆಸ್ತಿಗೆ ಸಂಬಂಧಿಸಿದಂತೆ 1963 ಆ.23ರಂದು ತಹಶೀಲ್ದಾರರಿಂದ ಗ್ರ್ಯಾಂಟ್ ಪಡೆದಿದ್ದು, 1966ರ ಆ.20ರಂದು ಭೂ ಪರಿವರ್ತನೆ ಮಾಡಲಾಗಿದೆ. 1988 ಜೂ.24ರಂದು ನಗರಪಾಲಿಕೆಯಿಂದ ಉತ್ತರ ಪತ್ರ ನೀಡಲಾಗಿದೆ. ಆದರೆ ಇದಕ್ಕೆ ಸಂಬಂಧಿಸಿದ ಯಾವುದೇ ಮಾಹಿತಿ ನಗರ ಪಾಲಿಕೆಯಲ್ಲಿ ಇಲ್ಲ. ಆದರೂ ಸಾರ್ವಜನಿಕ ಪ್ರಕಟಣೆಗೆ ತಕರಾರು ಬರದ ಹಿನ್ನೆಲೆಯಲ್ಲಿ ಸದರಿ 10 ಎಕರೆ ಜಮೀನನನ್ನು ನಾಚನಹಳ್ಳಿ ಪಾಳ್ಯದ ತುಳಸಮ್ಮ ಹಾಗೂ ಅವರ ಕುಟುಂಬದವರಾದ ಜಯಲಕ್ಷ್ಮಿ, ಭಾಗ್ಯಮ್ಮ ಆರ್.ಗಣೇಶ್, ಆರ್.ಮಹದೇವ, ಆರ್.ದಿನೇಶ್, ಪದ್ಮ, ಸುರೇಶ್ ಸೇರಿದಂತೆ ಎಂಟು ಮಂದಿ ಹೆಸರಿಗೆ ಜಂಟಿ ಖಾತೆ ಮಾಡಲು ಕಳೆದ ಆಗಸ್ಟ್ 6ರಂದು ಪಾಲಿಕೆ ಅಧಿಕಾರಿಗಳು ಜಂಟಿ ಖಾತೆ ಮಾಡಿಕೊಟ್ಟಿರುತ್ತಾರೆ. ತುಳಸಮ್ಮ ಕುಟುಂಬಕ್ಕೆ ಅಕ್ರಮವಾಗಿ ಖಾತೆ ಮಾಡಿಕೊಡಲಾಗಿದೆ ಎಂದು ಕುರುಬರಹಳ್ಳಿ ಜಯಕುಮಾರ್ ಎಂಬುವವರು ಆಕ್ಷೇಪಿಸಿ, ಖಾತೆ ರದ್ದುಪಡಿಸಲು ಕೋರಿ ಸೆ.5ರಂದು ಮಹಾನಗರ ಪಾಲಿಕೆಗೆ ಅರ್ಜಿ ಸಲ್ಲಿಸಿದ್ದು, ಮರುದಿನ(ಸೆ.6)ವೇ ಖಾತೆ ರದ್ದಿಗೆ ಅಧಿಕಾರಿಗಳು ನಿರ್ಧರಿಸಿದ್ದಾರೆ.

ತುಳಸಮ್ಮ ಕುಟುಂಬ ಪೌತಿ ಖಾತೆ ವರ್ಗಾವಣೆಗೆ ಸಲ್ಲಿಸಿದ್ದ ದಾಖಲಾತಿಗಳಲ್ಲಿ ಜಿ.ರಾಮಯ್ಯ ಬಿನ್ ಗಿರಿಸ್ವಾಮಿ ಎಂಬುವವರಿಗೆ 1963ರ ಆಗಸ್ಟ್ 26ರಂದು ಹಿನಕಲ್ ಸರ್ವೆ ನಂಬರ್ 155ರಲ್ಲಿ 10 ಎಕರೆ ವಿಸ್ತೀರ್ಣದ ಜಾಗಕ್ಕೆ ಫಾರಂ–01 ಗ್ರ್ಯಾಂಟ್ ಸರ್ಟಿಫಿಕೇಟ್ ನೀಡಿದ್ದು, 1966ರ ಆಗಸ್ಟ್ 26ರಂದು ಭೂ ಪರಿವರ್ತನೆ ಮಾಡಲಾಗಿದೆ ಎಂದಿದೆ. ಆದರೆ ಈ ದಾಖಲಾತಿಗಳ ನೈಜತೆ ಬಗ್ಗೆ ಸಂಬಂಧಪಟ್ಟ ಇಲಾಖೆ/ಪ್ರಾಧಿಕಾರಗಳಿಂದ ಪರಿಶೀಲನೆ ನಡೆಸುವವರೆಗೂ ಖಾತೆಗಳನ್ನು ರದ್ದು ಪಡಿಸಲು ನಿರ್ಧರಿಸಲಾಗಿದೆ ಎಂದು ಕಾರಣ ನೀಡಲಾಗಿದೆ.

ಆದರೆ ಖಾತೆ ಮಾಡುವ ಮುನ್ನ ಪರಿಶೀಲನೆ ನಡೆಸದಿರುವುದರ ಹಿಂದೆ ಅಕ್ರಮ ನಡೆದಿರಬಹುದೆಂಬ ಸಂಶಯವಿದೆ ಎಂದಿರುವ ಎಸ್.ಶಿವರಾಂ, ಕಾನೂನು ಬಾಹಿರವಾಗಿ ಖಾತೆ ಮಾಡಿದ ಹಾಗೂ ಅದೇ ಖಾತೆಗಳನ್ನು ಕೇವಲ ಒಂದೇ ದಿನದಲ್ಲಿ ರದ್ದುಪಡಿಸಲು ತೀರ್ಮಾನ ಕೈಗೊಂಡ ಅಧಿಕಾರಿಗಳು ಹಾಗೂ ಸಿಬ್ಬಂದಿ ವಿರುದ್ಧ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಲೋಕಾಯುಕ್ತಕ್ಕೆ ದೂರು ಸಲ್ಲಿಸಲಾಗುವುದು ಎಂದು ಪಾಲಿಕೆ ಆಯುಕ್ತರಿಗೆ ಮನವಿ ಸಲ್ಲಿಸಿ, ಅದರ ಪ್ರತಿಯನ್ನು ಕಂದಾಯ ಸಚಿವರು, ಪ್ರಾದೇಶಿಕ ಆಯುಕ್ತರು, ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿರುವುದಾಗಿ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಈ ಪತ್ರಿಕಾ ಪ್ರಕಟಣೆಗೆ ಸಂಬಂಧಿಸಿದಂತೆ ದಾಖಲಾತಿಗಳನ್ನು ಪರಿಶೀಲಿಸದೇ ಖಾತೆ ಮಾಡಿರುವುದಕ್ಕೆ ಸಂಬಂಧಿಸಿದಂತೆ ನೋಟೀಸ್ ತಲುಪಿದ ಮೂರು ದಿನಗಳಲ್ಲಿ ಸೂಕ್ತ ಲಿಖಿತ ಸಮಜಾಯಿಷಿ ಸಲ್ಲಿಸುವುದು, ತಪ್ಪಿದ್ದಲ್ಲಿ ನಿಯಮಾನುಸಾರ ಕ್ರಮ ವಹಿಸಲಾಗುವುದು ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ ನೋಟಿಸ್‌ನಲ್ಲಿ ತಿಳಿಸಿದ್ದಾರೆ.


ನ್ಯಾಯಾಂಗ ಬಂಧನ ವಿಸ್ತರಣೆ

ಕಸ್ಟಡಿ ಅಂತ್ಯವಾದ ಹಿನ್ನಲೆಯಲ್ಲಿ ವಿವಿಧ ಕಾರಾಗೃಹಗಳಲ್ಲಿರುವ ಎಲ್ಲಾ ಆರೋಪಿಗಳನ್ನು ತಾವು ಇರುವ ಜೈಲಿನಿಂದಲೇ ವಿಡಿಯೋ ಕಾನ್ಫರೆನ್ಸ್ ಮೂಲಕ 24ನೇ ಎಸಿಎಂಎಂ ನ್ಯಾಯಾಲಯದ ನ್ಯಾಯಾಧೀಶರ ಮುಂದೆ ವಿಚಾರಣೆಗೆ ಹಾಜರುಪಡಿಸಲಾಯಿತು. ದರ್ಶನ್ ಪರ ವಾದ ಮಂಡಿಸಿದ ವಕೀಲರು, ಬೆನ್ನು ನೋವು ಇದೆ ಎಂದು ಹೇಳಿದರೂ ಚೇರ್ ಕೊಡುತ್ತಿಲ್ಲ. ಗೆಳೆಯರು, ಕುಟುಂಬಸ್ಥರ ಭೇಟಿಗೆ ಅವಕಾಶ ನೀಡುತ್ತಿಲ್ಲ ಎಂದು ನ್ಯಾಯಾಲಯದ ಗಮನಕ್ಕೆ ತಂದರು. ಈ ವೇಳೆ ನ್ಯಾಯಾಲಯಕ್ಕೆ ತಾಂತ್ರಿಕ ಸಾಕ್ಷ್ಯ ಜೊತೆಗೆ ಕೇಂದ್ರ ವಿಧಿ ವಿಜ್ಞಾನ ಪ್ರಯೋಗಾಲಯದ ಪರೀಕ್ಷಾ (ಸಿಎಫ್‌ಎಸ್‌ಎಲ್) ವರದಿ ಸಲ್ಲಿಸಿದ ತನಿಖಾಧಿಕಾರಿಗಳು, ಕೆಲ ಸಾಕ್ಷ್ಯಗಳ ಸಂಗ್ರಹ ಆಗಬೇಕಾಗಿದೆ. ಪ್ರಕರಣದ 10ನೇ ಆರೋಪಿ ವಿನಯ್ ಮೊಬೈಲ್ ಅನ್ನು ಮತ್ತೆ ಎಫ್‌ಎಸ್‌ಎಲ್ ಪರೀಕ್ಷೆಗೆ ಕಳುಹಿಸಬೇಕಾಗಿದೆ ಎಂದು ಮನವಿ ಮಾಡಿದರು. ಪೊಲೀಸರ ಮನವಿಗೆ ಒಪ್ಪಿಗೆ ಸೂಚಿಸಿದ ನ್ಯಾಯಾಲಯ ಆರೋಪಿಗಳ ನ್ಯಾಯಾಂಗ ಬಂಧನ ಅವಧಿಯನ್ನು ಸೆಪ್ಟೆಂಬರ್ 30 ರವರೆಗೂ ಮುಂದೂಡಿ, ಆದೇಶ ಹೊರಡಿಸಿದರು.

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ

ಆನೆ–ಮಾನವರ ನಡುವಿನ ಸಂಘರ್ಷ ತಡೆಗೆ ಪರಿಹಾರ ಕ್ರಮ ಕೈಗೊಳ್ಳಿ

ಕೇಂದ್ರ ಅರಣ್ಯ ಸಚಿವ ಭೂಪೇಂದ್ರ ಯಾದವ್‌ಗೆ ಸಂಸದ ಯದುವೀರ ಒಡೆಯರ್ ಮನವಿ



ಇತ್ತೀಚೆಗೆ ಕೇಂದ್ರ ಸಚಿವ ಭೂಪೇಂದ್ರ ಯಾದವ್ ಅವರಿಗೆ ಸಂಸದ ಯದುವೀರ ಒಡೆಯರ್ ಮನವಿ ಸಲ್ಲಿಸಿದರು.

ಮೈಸೂರು,ಸೆ.17(ಪಿಎಂ)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಆನೆ ಮತ್ತು ಮಾನವರ ನಡುವಿನ ಸಂಘರ್ಷ ತಡೆಗೆ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕೆಂದು ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವ ಭೂಪೇಂದ್ರ ಯಾದವ್ ಅವರಿಗೆ ಕ್ಷೇತ್ರದ ಸಂಸದರ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮನವಿ ಸಲ್ಲಿಸಿದ್ದಾರೆ.

ಇತ್ತೀಚೆಗೆ ಕೇಂದ್ರ ಸಚಿವರನ್ನು ಭೇಟಿ ಮಾಡಿದ ಯದುವೀರ ಒಡೆಯರ್, ಅವರಿಗೆ ಮನವಿ ಸಲ್ಲಿಸಿದರು. ನನ್ನ ಕ್ಷೇತ್ರ ವ್ಯಾಪ್ತಿಯಲ್ಲಿ, ಅದರಲ್ಲೂ ಕೊಡಗು ಜಿಲ್ಲೆಯಲ್ಲಿ ಆನೆ ಮತ್ತು ಮಾನವ ಸಂಘರ್ಷ ನಿರಂತರ ಸಮಸ್ಯೆಯಾಗಿದೆ. ಪರಿಣಾಮ ತೀವ್ರ ಗಾಯ ಹಾಗೂ ಸಾವು ಸಂಭವಿಸುತ್ತಿವೆ. ಅಲ್ಲದೆ, ಕಾಫಿ ಎಸ್ಟೇಟ್‌ಗಳು ಹಾಗೂ ಕೃಷಿ ಭೂಮಿಗಳ ಮೂಲಕ ಆನೆಗಳು ಸಂಚಾರ ಮಾಡುತ್ತಿದ್ದು, ಇದರಿಂದ ಬೆಳೆ ನಷ್ಟ ಉಂಟಾಗುತ್ತಿದೆ.

ಹಾಗಾಗಿ ಆನೆಗಳ ಸಂಚಾರವನ್ನು ಮೀಸಲು ಅರಣ್ಯ ಪ್ರದೇಶಗಳಿಗೆ ಸೀಮಿತಗೊಳಿಸುವುದು ಅಗತ್ಯವಾಗಿದೆ. ಇದಕ್ಕಾಗಿ ರೈಲ್ವೆ ಬ್ಯಾರಿಕೇಡಿಂಗ್ ಬೇಲಿ ನಿರ್ಮಾಣ ಸೂಕ್ತವಾಗಿದ್ದು, ಇದು ಪರಿಣಾಮಕಾರಿ ಎಂದು ಸಾಬೀತು ಸಹ ಆಗಿದೆ. ನನ್ನ ಕ್ಷೇತ್ರ ವ್ಯಾಪ್ತಿಯಲ್ಲಿ ಅರಣ್ಯ ಗಡಿಗಳು 400 ಕಿ.ಮೀ.ಗೂ ಅಧಿಕವಿದ್ದು, ಸುಮಾರು 280 ಕಿ.ಮೀ. ಅರಣ್ಯ ಗಡಿಗೆ ತಕ್ಷಣದ ಬ್ಯಾರಿಕೇಡ್ ಬೇಲಿ ನಿರ್ಮಾಣ ಅಗತ್ಯವಾಗಿದೆ. ಪ್ರತಿ ಕಿ.ಮೀ.ಗೆ ಬ್ಯಾರಿಕೇಡಿಂಗ್ ನಿರ್ಮಾಣಕ್ಕೆ 1.3 ಕೋಟಿಯಿಂದ 1.5 ಕೋಟಿ ರೂ. ಎಂದು ಅಂದಾಜಿಸಲಾಗಿದೆ. ಇದಕ್ಕಾಗಿ ಕ್ಷೇತ್ರ ವ್ಯಾಪ್ತಿಗೆ ಸುಮಾರು 350ರಿಂದ 400 ಕೋಟಿ ರೂ. ವೆಚ್ಚವಾಗಲಿದೆ. ಈ ಸಂಬಂಧ ಕ್ರಮ ವಹಿಸಬೇಕೆಂದು ಸಂಸದರು ಮನವಿಯಲ್ಲಿ ಕೋರಿದ್ದಾರೆ.

ಅಭಿಷೇಕ್ ಅಂಬರೀಶ್ ಪತ್ನಿ ಅವಿವಾ ಸೀಮಂತ ಶಾಸ್ತ್ರ



ಬೆಂಗಳೂರು, ಸೆ.17– ದಿವಂಗತ ರೆಬಲ್‌ಸ್ಟಾರ್ ಅಂಬರೀಶ್ ಮನೆಗೆ ಹೊಸ ಅತಿಥಿ ಶೀಘ್ರವೇ ಆಗಮಿಸಲಿದ್ದಾರೆ. ಮಂಡ್ಯದ ಮರಿಗೌಡ ಅಭಿಷೇಕ್ ಅಂಬರೀಶ್ ಶೀಘ್ರದಲ್ಲೇ ತಂದೆಯಾಗಲಿದ್ದಾರೆ. ಇತ್ತೀಚೆಗೆ ಅವರ ಪತ್ನಿ ಅವಿವಾ ಬಿದ್ದಪ್ಪ ಅವರ ಸೀಮಂತ ಶಾಸ್ತ್ರವನ್ನು ನೆರವೇರಿಸಲಾಗಿದೆ.

2023ರ ಜೂನ್ 5ರಂದು ಅಭಿ–ಅವಿವಾ ಮದುವೆ ಅದ್ದೂರಿಯಾಗಿ ನಡೆದಿತ್ತು. ಮಂಡ್ಯದ ಮರಿ ಗೌಡ ಜನಪ್ರಿಯತೆ ಅಭಿಷೇಕ್ ಅಂಬರೀಶ್ ಅವರು ತಮ್ಮ ಬಹುಕಾಲದ ಗೆಳತಿ, ಫ್ಯಾಷನ್ ಡಿಸೈನರ್ ಅವಿವಾ ಬಿದ್ದಪ್ಪ ಅವರೊಂದಿಗೆ ದಾಂಪತ್ಯ ಜೀವನ ಆರಂಭಿಸಿದ್ದರು. ಕುಟುಂಬಸ್ಥರು, ಆಪ್ತರ, ಚಿತ್ರರಂಗದ ಗಣ್ಯರ ಸಮ್ಮುಖದಲ್ಲಿ ಪ್ರೀತಿಸಿದ ಜೋಡಿ ದಾಂಪತ್ಯ ಜೀವನ ಆರಂಭಿಸಿದರು. ಈ ಪ್ರೇಮಪಕ್ಷಿಗಳೂ ಶೀಘ್ರದಲ್ಲೇ ತಂದೆ ತಾಯಿ ಆಗಲಿದ್ದಾರೆ. ಎರಡು ದಿನಗಳ ಹಿಂದೆ ಜೆಪಿ ನಗರದಲ್ಲಿರುವ ನಿವಾಸದಲ್ಲಿ ಅಭಿಷೇಕ್ ಅಂಬರೀಶ್ ಪತ್ನಿ ಅವಿವಾ ಬಿದ್ದಪ್ಪ ಅವರ ಸೀಮಂತ ಶಾಸ್ತ್ರ ಜರುಗಿತು. ಅವಿವಾ ಅವರೀಗ ಏಳು ತಿಂಗಳ ಗರ್ಭಿಣಿ. ಫೋಟೋಗಳನ್ನು ತಮ್ಮ ಅಧಿಕೃತ ಸೋಷಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದ್ದು, ಅಭಿಮಾನಿಗಳಿಂದ ಮೆಚ್ಚುಗೆ ವ್ಯಕ್ತವಾಗಿದೆ. ದರ್ಶನ್ ಅನುಪಸ್ಥಿತಿಯಲ್ಲಿ ಸರಳವಾಗಿ ಸೀಮಂತ ನಡೆಯಿತು. ನಟ ದರ್ಶನ್ ಮತ್ತು ಅಂಬಿ ಕುಟುಂಬ ಆತ್ಮೀಯ ಸ್ನೇಹಿತರಾಗಿ ಗುರುತಿಸಿಕೊಂಡಿದೆ. ಪರಸ್ಪರರು ಪ್ರತೀ ಪ್ರಮುಖ ಕಾರ್ಯಕ್ರಮಗಳಲ್ಲಿ ಕಾಣಿಸಿಕೊಳ್ಳುತ್ತಾರೆ. ಅಂಬಿ ನಿಧನದ ನಂತರವೂ ದರ್ಶನ್ ಅವರು ಸುಮಲತಾ ಅಂಬರೀಶ್ ಮತ್ತು ಅಭಿಷೇಕ್ ಅಂಬರೀಶ್ ಅವರಿಗೆ ಪ್ರತಿ ವಿಷಯದಲ್ಲೂ ಜೊತೆಯಾಗಿ ಬೆಂಬಲ ಕೊಡುತ್ತಲೇ ಬಂದಿದ್ದಾರೆ.

ನಿಮ್ಮದು ಶ್ಯಾಡೊ ಬಿಜೆಪಿ ಸರ್ಕಾರವೇ...

ಸಿಎಂ ಸಿದ್ದರಾಮಯ್ಯರಿಗೆ ಎಂಎಲ್‌ಸಿ ವಿಶ್ವನಾಥ್ ಪ್ರಶ್ನೆ



ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಮಂಗಳವಾರ ಜಲದರ್ಶಿನಿ ಅತಿಥಿಗೃಹದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು, ಸೆ.17(ಬಿಎಲ್‌ಯು)– ಬಿಜೆಪಿ ಸರ್ಕಾರದ ಅವಧಿಯಲ್ಲಿ ಅನುಮೋದನೆಗೊಂಡ ತೀರ್ಮಾನಗಳಿಗೆ ಒಪ್ಪಿಗೆ ನೀಡುತ್ತಿರುವ ನಿಮ್ಮ ಸರ್ಕಾರ ಶ್ಯಾಡೊ ಬಿಜೆಪಿನಾ ಎಂದು ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಪ್ರಶ್ನಿಸಿದ್ದಾರೆ.

ನಗರದ ಜಲದರ್ಶಿನಿ ಅತಿಥಿ ಗೃಹದಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಂದಾಲ್ ಕಂಪನಿಗೆ 3,600 ಎಕರೆ ಭೂಮಿ ನೀಡಲು ಅಂದಿನ ಮುಖ್ಯಮಂತ್ರಿ ಯಡಿಯೂರಪ್ಪ ಸರ್ಕಾರ ಅನುಮೋದನೆ ನೀಡಿತ್ತು. ಬಿಜೆಪಿ ಸರ್ಕಾರದ ಈ ತೀರ್ಮಾನವನ್ನು ನಾನು ವಿರೋಧಿಸಿದ್ದೆ.

ಆದರೆ, ಈಗ ಆ ಭೂಮಿಯನ್ನು ಜಿಂದಾಲ್ ಕಂಪನಿಗೆ ನೀಡಲು ಸಿದ್ದರಾಮಯ್ಯ ಸರ್ಕಾರ ಅನುಮತಿ ನೀಡಿದೆ. ಇದನ್ನು ಪ್ರಶ್ನಿಸಿದರೆ ಯಡಿಯೂರಪ್ಪ ಸರ್ಕಾರದಲ್ಲಿ ಅನುಮೋದನೆ ನೀಡಿದ ಕಾರಣ ನಾವು ಒಪ್ಪಿಗೆ ಸೂಚಿಸಿದ್ದೇವೆ ಎಂದು ಸ್ಪಷ್ಟಪಡಿಸುತ್ತಾರೆ. ಹಾಗಾದರೆ ನಿಮ್ಮ ಸರ್ಕಾರ ಶ್ಯಾಡೊ ಬಿಜೆಪಿಯೇ ಎಂದು ಪ್ರಶ್ನಿಸಿದರು.

ನಾನು ಅಹಿಂದ ಪರವೆಂದು ಸಿದ್ದರಾಮಯ್ಯ ಭಾಷಣ ಮಾಡುತ್ತಾರೆ. ಸಂಗೊಳ್ಳಿ ರಾಯಣ್ಣನ ಬಗ್ಗೆ ಮಾತನಾಡುತ್ತಾರೆ. ಸಂಗೊಳ್ಳಿ ರಾಯಣ್ಣನಿಗೆ ಇದ್ದ ಧೈರ್ಯ ಸಿದ್ದರಾಮಯ್ಯನಿಗೆ ಇದ್ದಿದ್ದರೆ ಇಷ್ಟೊತ್ತಿಗೆ ಕಾಂತರಾಜು ವರದಿ ಬಿಡುಗಡೆ ಮಾಡುತ್ತಿದ್ದರು. ನಾಡಿನ ದುಃಖದ ಧ್ವನಿಯಾಗುವ ಬದಲು ಸಿದ್ದರಾಮಯ್ಯ ಭ್ರಷ್ಟರ ಧ್ವನಿಯಾಗಿದ್ದಾರೆ ಎಂದು ಆರೋಪಿಸಿದರು.

[illegible]: ಜಾತಿಯನ್ನು ನಿಂದಿಸಿರುವ ಶಾಸಕ ಮುನಿರತ್ನ ಅವರನ್ನು ಜೈಲಿನಲ್ಲಿ ಇರಿಸಬೇಕು. ಸಿ.ಟಿ.ರವಿ, ಡಾ.ಅಶ್ವತ್ಥ ನಾರಾಯಣ್ ಸೇರಿದಂತೆ ಇತರರು ಜಾತಿ ನಿಂದಕ ಮುನಿರತ್ನರನ್ನು ಅದು ಯಾವ ರೀತಿ ಸಮರ್ಥನೆ ಮಾಡಿಕೊಳ್ಳುತ್ತಿದ್ದಾರೋ ತಿಳಿಯದು ಎಂದರು.

ನಾಗಮಂಗಲದಲ್ಲಿ ಗಣಪತಿ ಮೆರವಣಿಗೆಯ ಮೇಲೆ ಕಲ್ಲು ತೂರಾಟ ನಡೆದಿದೆ. ಸಚಿವ ಚಲುವರಾಯಸ್ವಾಮಿ ಶಾಂತಿ ಸಭೆ ನಡೆಸಬೇಕಿತ್ತು. ಆದರೆ ಅತನಿಗೆ ಸೂಕ್ಷ್ಮತೆಯ ಅರಿವಿಲ್ಲ. ಈ ಕಾರಣದಿಂದ ಗಲಾಟೆಗೆ ಕಾರಣವಾಯಿತು ಎಂದು ವಿಶ್ವನಾಥ್ ಆಪಾದಿಸಿದರು.

ಬೆಲ್ದರ್ ಇತಿಹಾಸ ಓದಲಿ: ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸ್ ಲಿಂಗಾಯಿತರಿಗೆ ಅನ್ಯಾಯ ಮಾಡಿದರು ಎಂದು ಶಾಸಕ ಅರವಿಂದ ಬೆಲ್ಲದ್ ಆರೋಪಿಸಿದ್ದಾರೆ. ಆದರೆ ಧ್ವನಿ ಇಲ್ಲದ ಜನರ ಪರವಾಗಿ ಮೈಸೂರು ಮಹಾರಾಜರು ಹಾಗೂ ದೇವರಾಜ ಅರಸ್ ರೂಪಿಸಿದ ಯೋಜನೆಗಳ ಬಗ್ಗೆ ಅರವಿಂದ ಬೆಲ್ಲದ್‌ಗೆ ಮಾಹಿತಿ ಇಲ್ಲ. ಮೊದಲು ಅವರು ಇತಿಹಾಸ ಓದಿ ತಿಳಿದುಕೊಳ್ಳಲಿ. ಅದು ಬಿಟ್ಟು ಆಧಾರರಹಿತ ಆರೋಪ ಮಾಡಬಾರದು ಎಂದು ಸಲಹೆ ನೀಡಿದರು.

ವಾಲಿಬಾಲ್ ಪಂದ್ಯಾವಳಿ: ರೋಟರಿ ಪಶ್ಚಿಮ ಶಾಲೆಗೆ ಪ್ರಥಮ ಸ್ಥಾನ



ಮೈಸೂರು ದಕ್ಷಿಣ ವಲಯ–1ರ ಹಿರಿಯ ಪ್ರಾಥಮಿಕ ಶಾಲಾ ವಿಭಾಗದ ಬಾಲಕಿಯರ ವಾಲಿಬಾಲ್ ಪಂದ್ಯಾವಳಿಯಲ್ಲಿ ಮೈಸೂರಿನ ಸರಸ್ವತಿಪುರಂನ ರೋಟರಿ ಪಶ್ಚಿಮ ಶಾಲೆಯ ಕ್ರೀಡಾಪಟುಗಳು ಪ್ರಥಮ ಸ್ಥಾನ ಪಡೆದಿದ್ದಾರೆ.

ಸೆ.19, 21ರಂದು ಜನಸಂಪರ್ಕ ಸಭೆ

ಮೈಸೂರು, ಸೆ.17–ಚಾ.ವಿ.ಸ.ನಿ.ನಿ.ಯ ವಿ.ವಿ.ಮೊಹಲ್ಲಾ ವಿಭಾಗದ ಅಧೀಕ್ಷಕ ಇಂಜಿನಿಯರ್(ವಿ)/ಕಾರ್ಯನಿರ್ವಾಹಕ ಇಂಜಿನಿಯರ್ ಅಧ್ಯಕ್ಷತೆಯಲ್ಲಿ ಸೆ.19 ಮತ್ತು 21ರಂದು ಗ್ರಾಹಕರ ಕುಂದು–ಕೊರತೆಗಳ ಬಗ್ಗೆ 2ನೇ ತ್ರೈಮಾಸಿಕ ಜನಸಂಪರ್ಕ ಸಭೆಯನ್ನು ಏರ್ಪಡಿಸಲಾಗಿದೆ. ಸೆ.19ರಂದು ಬೆಳಗ್ಗೆ 11 ಗಂಟೆಗೆ ಹೂಟಗಳ್ಳಿ ಉಪ ವಿಭಾಗ ಕಚೇರಿಯಲ್ಲಿ, ಮಧ್ಯಾಹ್ನ 3.30 ಗಂಟೆಗೆ ವಿ.ವಿ.ಮೊಹಲ್ಲಾದ ಉಪವಿಭಾಗ ಕಚೇರಿಯಲ್ಲಿ ಹಾಗೂ ಸೆ.21ರಂದು ಬೆಳಗ್ಗೆ 11 ಗಂಟೆಗೆ ಕುವೆಂಪುನಗರ ಉಪವಿಭಾಗ ಕಚೇರಿಯಲ್ಲಿ, ಮಧ್ಯಾಹ್ನ 3.30 ಗಂಟೆಗೆ ಆರ್.ಕೆನಗರದ ಉಪವಿಭಾಗ ಕಚೇರಿಯಲ್ಲಿ ಜನಸಂಪರ್ಕ ಸಭೆಯನ್ನು ಏರ್ಪಡಿಸಲಾಗಿದೆ. ಈ ವ್ಯಾಪ್ತಿಯ ವಿದ್ಯುತ್ ಗ್ರಾಹಕರು ಸಭೆಯಲ್ಲಿ ಭಾಗವಹಿಸಿ, ವಿದ್ಯುತ್ ಸಮಸ್ಯೆ ಬಗ್ಗೆ ಏನಾದರೂ ದೂರುಗಳಿದ್ದಲ್ಲಿ, ಅರ್ಜಿ ನೀಡುವುದರ ಮುಖಾಂತರ ಬಗೆಹರಿಸಿಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ.

ಚಿತ್ರಕಲಾ, ತ್ಯಾಜ್ಯದಿಂದ ತಯಾರಿಸಿದ ಕಲಾಕೃತಿ ಪ್ರದರ್ಶನ ಸ್ಪರ್ಧೆ



ಮೈಸೂರು, ಸೆ.17–ಮೈಸೂರು ಮಹಾನಗರಪಾಲಿಕೆಯ ವತಿಯಿಂದ ಸ್ವಚ್ಛತೆಯಲ್ಲಿ ಪ್ರಾಮುಖ್ಯತೆ ಹಾಗೂ ಸಾರ್ವಜನಿಕರ ಸಹಭಾಗಿತ್ವವನ್ನು ಪ್ರೋತ್ಸಾಹಿಸುವ ಸಲುವಾಗಿ ಶಾಲಾ ಮಕ್ಕಳಲ್ಲಿ ಮನೆ ಮನೆ ತ್ಯಾಜ್ಯ ವಿಂಗಡಣೆ, ಸಂಗ್ರಹಣೆ ಪ್ರಾಮುಖ್ಯತೆ ಕುರಿತು ಅರಿವು ಮೂಡಿಸಲು ಸೆ.21ರಂದು ಬೆಳಗ್ಗೆ 8 ಗಂಟೆಯಿಂದ 10 ಗಂಟೆಯವರೆಗೆ ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿರುವ ಮಹಾನಗರಪಾಲಿಕೆಯ ಮುಖ್ಯ ಕಚೇರಿಯಲ್ಲಿ ಚಿತ್ರಕಲಾ ಮತ್ತು ತ್ಯಾಜ್ಯದಿಂದ ತಯಾರಿಸಿದ ಕಲಾಕೃತಿ ಪ್ರದರ್ಶನ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ಮೈಸೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಶಾಲಾ ಮಕ್ಕಳು(ಸರ್ಕಾರಿ ಹಾಗೂ ಖಾಸಗಿ) ಸ್ಪರ್ಧೆಯಲ್ಲಿ ಭಾಗವಹಿಸಬಹುದಾಗಿದ್ದು, ಆಸಕ್ತರು https://forms.gle/6D3FLagXYKzXupEX9 ಲಿಂಕ್ ಮೂಲಕ ನೋಂದಾಯಿಸಿಕೊಳ್ಳಬಹುದಾಗಿದೆ. ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಪ್ರಥಮ ಬಹುಮಾನವಾಗಿ ರೂ. 3000, ದ್ವಿತೀಯ ಬಹುಮಾನವಾಗಿ ರೂ.2000 ಹಾಗೂ ತೃತೀಯ ಬಹುಮಾನವಾಗಿ ರೂ. 1000 ಗಳನ್ನು ನೀಡಲಾಗುವುದು.

ಚಿತ್ರಕಲಾ ಸ್ಪರ್ಧೆಗೆ ಅವಶ್ಯವಿರುವ ಡ್ರಾಯಿಂಗ್ ಹಾಳೆಯನ್ನು ಪಾಲಿಕೆ ವತಿಯಿಂದ ನೀಡಲಾಗುತ್ತಿದ್ದು, ಉಳಿದ ಸಾಮಗ್ರಿಗಳನ್ನು ಸ್ಪರ್ಧಿಗಳೇ ತರಬೇಕಾಗಿರುತ್ತದೆ ಎಂದು ಮೈಸೂರು ಮಹಾನಗರ ಪಾಲಿಕೆಯ ಪಾಲಿಕೆ ಆರೋಗ್ಯಾಧಿಕಾರಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದಲಿತರನ್ನು ಒಕ್ಕಲೆಬ್ಬಿಸಿ ಮನೆ ನಿರ್ಮಾಣ ಆರೋಪ

ಸಾಬೀತಾದರೆ ಸಿದ್ದರಾಮಯ್ಯ ರಾಜೀನಾಮೆ; ಇಲ್ಲವೆಂದರೆ ನೀವು ನೀಡುತ್ತೀರಾ...

ಹೆಚ್.ಡಿ.ಕುಮಾರಸ್ವಾಮಿಗೆ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಬಹಿರಂಗ ಸವಾಲು

ಮೈಸೂರು, ಸೆ.17(ಬಿಎಲ್‌ಯು)– ದಲಿತರನ್ನು ಒಕ್ಕಲೆಬ್ಬಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮನೆ ನಿರ್ಮಿಸಿದ್ದರೆಂಬ ಆರೋಪ ಸಾಬೀತು ಮಾಡಿದರೆ ನಾವು ಸಿದ್ದರಾಮಯ್ಯ ಅವರಿಂದ ರಾಜೀನಾಮೆ ಕೊಡಿಸುತ್ತೇವೆ. ಇಲ್ಲವೆಂದರೆ ಸಚಿವ ಸ್ಥಾನಕ್ಕೆ ನೀವು ರಾಜೀನಾಮೆ ನೀಡುತ್ತೀರಾ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿಗೆ ಬಹಿರಂಗ ಸವಾಲು ಹಾಕಿದ್ದಾರೆ.

ದಲಿತರನ್ನು ಒಕ್ಕಲೆಬ್ಬಿಸಿ ಸಿದ್ದರಾಮಯ್ಯ ಮನೆ ನಿರ್ಮಾಣ ಮಾಡಿದ್ದಾರೆಂದು ಆರೋಪಿಸಲಾಗಿರುವ ಮೈಸೂರಿನ ವಿಜಯನಗರದ ಮನೆಯ ಬಳಿಯೇ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಪಂಥಾಹ್ವಾನವನ್ನು ಕುಮಾರಸ್ವಾಮಿ ಸ್ವೀಕರಿಸಬೇಕು, ಇಲ್ಲವೆಂದರೆ ಅವರು ಹೇಳುತ್ತಿರುವುದು ಸುಳ್ಳು ಎಂದು ದೃಢಪಡುತ್ತದೆ ಎಂದರು.



ಮುಖ್ಯಮಂತ್ರಿ ಸಿದ್ದರಾಮಯ್ಯ ಮನೆ ನಿರ್ಮಾಣ ಮಾಡಿದ್ದಾರೆಂದು ಆರೋಪಿಸಲಾಗಿರುವ ಮೈಸೂರಿನ ವಿಜಯನಗರದ ಮನೆಯ ಬಳಿಯೇ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಕಾಂಗ್ರೆಸ್ ಮುಖಂಡ ರಾಕೇಶ್ ಪಾಪಣ್ಣ ಅವರ ತಾತ ಪುಟ್ಟೇಗೌಡ ಇಬ್ಬರು ಮಕ್ಕಳಾದ ಸಾಕಮ್ಮ ಹಾಗೂ ಚಿಕ್ಕತಮ್ಮಯ್ಯರಿಗೆ ತಲಾ 30 ಗುಂಟೆ ಜಮೀನು ನೀಡಿದ್ದರು. ಪೋಡಿಯಾಗಿ ಹೊಸ ಸರ್ವೆ ನಂಬರ್ ಬರುತ್ತದೆ. ತಮಗೆ ಸೇರಿದ 30 ಗುಂಟೆ ಜಮೀನಿನಲ್ಲಿ ಸಾಕಮ್ಮ 10 ಗುಂಟೆಯನ್ನು ಸಿದ್ದರಾಮಯ್ಯರಿಗೆ ನೀಡಿದ್ದರು. 120X80 ಅಳತೆ ಜಾಗದಲ್ಲಿ ಸಿದ್ದರಾಮಯ್ಯ ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್‌ನಲ್ಲಿ ಸಾಲ ಪಡೆದು ಮನೆ ನಿರ್ಮಿಸಿದ್ದರು ಎಂದು ಲಕ್ಷ್ಮಣ್ ಹೇಳಿದರು. ಆದರೆ ಸಾಲ ತೀರಿಸಲು ಸಾಧ್ಯವಾಗದ ಕಾರಣ 1998ರಲ್ಲಿ ಸಿದ್ದರಾಮಯ್ಯ ಖೋಡೆ ಕುಟುಂಬಕ್ಕೆ ಈ ಜಾಗವನ್ನು 98 ಲಕ್ಷ ರೂಪಾಯಿಗೆ ಮಾರಾಟ ಮಾಡಿದ್ದರು ಎಂದರು.

ಸಾಕಮ್ಮ ಸಹೋದರ ಚಿಕ್ಕತಮ್ಮಯ್ಯ ಭೂಮಿಯನ್ನು ಮುಡಾ ನೋಟಿಫೈ ಮಾಡಿತ್ತೆ ಹೊರತು ಸಾಕಮ್ಮ ಅವರಿಗೆ ಸೇರಿದ ಭೂಮಿಯನ್ನಲ್ಲ. ಸಾಕಮ್ಮ ಅವರಿಗೆ ಸೇರಿದ ಭೂಮಿಯನ್ನು ಖರೀದಿಸಿ ಸಿದ್ದರಾಮಯ್ಯ ಅಂದು ಮನೆ ನಿರ್ಮಾಣ ಮಾಡಿದ್ದರೆ ಹೊರತು ದಲಿತರ ಭೂಮಿಯನ್ನಲ್ಲ ಎಂದು ಲಕ್ಷ್ಮಣ್ ಸ್ಪಷ್ಟಪಡಿಸಿದರು.

ಈ ಪ್ರಕರಣದ ಬಗ್ಗೆ ಆರ್‌ಟಿಐ ಕಾರ್ಯಕರ್ತ ಗಂಗರಾಜು ಮೈಸೂರಿನ ಸಿವಿಲ್ ಕೋರ್ಟ್‌ನಲ್ಲಿ ದಾವೆ ಹೂಡಿದ್ದರು. ಆದರೆ ಮೈಸೂರು ಕೋರ್ಟ್‌ನಲ್ಲಿ ಸಿದ್ದರಾಮಯ್ಯ ವಿರುದ್ಧ ತೀರ್ಪು ಬಂದಿತು. ತರುವಾಯ ಈ ಬಗ್ಗೆ ವಿಚಾರಣೆ ಮಾಡಿದ ಹೈಕೋರ್ಟ್ ಗಂಗರಾಜು ಆರೋಪ ನಿರಾಧಾರವೆಂದು ಪ್ರಕರಣವನ್ನು ವಜಾ ಮಾಡಿತು. ಇದನ್ನು ಪ್ರಶ್ನಿಸಿ ಗಂಗರಾಜು ಸುಪ್ರೀಂಕೋರ್ಟ್ ಮೆಟ್ಟಿಲೇರಿದರು. ಸುಪ್ರೀಂಕೋರ್ಟ್‌ನಲ್ಲಿ ಕೂಡ ಸಿದ್ದರಾಮಯ್ಯ ಪರವಾಗಿ ತೀರ್ಪು ಬಂತು ಎಂದು ಲಕ್ಷ್ಮಣ್ ಹೇಳಿದರು.

ಈಗ ಈ ಮನೆ ಖೋಡೆ ಕುಟುಂಬದ ಮಾಲೀಕತ್ವದಲ್ಲಿದೆ. ಈ ಮನೆಗೂ ಸಿದ್ದರಾಮಯ್ಯರಿಗೂ ಯಾವುದೇ ಸಂಬಂಧ ಇಲ್ಲ. ಅಲ್ಲದೆ ಈ ಮನೆಯ ಜಾಗವನ್ನು ಅಂದು ಸಿದ್ದರಾಮಯ್ಯ ದಲಿತರಿಂದ ಖರೀದಿ ಮಾಡಿಲ್ಲ. ವಾಸ್ತವತೆ ಹೀಗಿದ್ದರೂ ಕುಮಾರಸ್ವಾಮಿ ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ ಎಂದು ಹೇಳಿದರು.

ಈ ಜಾಗವನ್ನು ದಲಿತರಿಂದ ಖರೀದಿಸಲಾಗಿದೆ ಎಂದು ಕುಮಾರಸ್ವಾಮಿ ಸಾಬೀತು ಮಾಡಿದರೆ ನಾವು ಸಿದ್ದರಾಮಯ್ಯ ಅವರಿಂದ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಡಿಸುತ್ತೇವೆ. ಇಲ್ಲವೆಂದರೆ ಕುಮಾರಸ್ವಾಮಿ ಕೇಂದ್ರ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುವರೆ ಎಂದು ಲಕ್ಷ್ಮಣ್ ಸವಾಲು ಹಾಕಿದರು.

ಪಂಚಾಯತ್ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಕಾಂಗ್ರೆಸ್ ಮುಖಂಡರಾದ ರಾಕೇಶ್ ಪಾಪಣ್ಣ, ಬಸಪ್ಪ, ಮಹೇಶ್ ಹಾಗೂ ಇತರರು ಈ ವೇಳೆ ಹಾಜರಿದ್ದರು.

ಪ್ರಧಾನಿ ನರೇಂದ್ರ ಮೋದಿ ಹುಟ್ಟುಹಬ್ಬ: ಮಹಿಳೆಯರಿಗೆ ಸೀರೆ ವಿತರಣೆ



ಪ್ರಧಾನಿ ನರೇಂದ್ರ ಮೋದಿ ಅವರ ಹುಟ್ಟುಹಬ್ಬದ ಅಂಗವಾಗಿ ಮಂಗಳವಾರ ಪ್ರತಾಪ್ ಸಿಂಹ ಅಭಿಮಾನಿ ಬಳಗದ ವತಿಯಿಂದ ಮೈಸೂರಿನ ಚಿಕ್ಕ ಗಡಿಯಾರ ವೃತ್ತದಲ್ಲಿ ಹಣ್ಣು ಮತ್ತು ತರಕಾರಿ ಮಾರಾಟ ಮಾಡುವ ಮಹಿಳೆಯರಿಗೆ ಉಚಿತವಾಗಿ ಸೀರೆ ಮತ್ತು ಸಿಹಿ ವಿತರಿಸಲಾಯಿತು. ಈ ಸಂದರ್ಭದಲ್ಲಿ ಮಾಜಿ ಸಂಸದ ಪ್ರತಾಪ್ ಸಿಂಹ, ಮೈಸೂರು ನಗರಪಾಲಿಕೆ ಮಾಜಿ ಸದಸ್ಯ ಸತೀಶ್, ಬಿಜೆಪಿ ಮುಖಂಡರಾದ ರಾ.ಪರಮೇಶ್‌ಗೌಡ, ಶ್ರವಣ್ ಮಾಲಿ, ಉಮೇಶ್, ನಂಜಪ್ಪ, ಬ್ರಹ್ಮಚಾರ್, ಸುರೇಂದ್ರ, ನಾಗೇಶ್ ಯಾದವ್, ಶ್ರೀನಿವಾಸ್, ಲಕ್ಷ್ಮಿ, ಪಿಂಕಿ, ಕಿರಣ್, ಶ್ರೀಲಕ್ಷ್ಮಿ, ವರ್ತಕರಾದ ಕಾಂತಿಲಾಲ್ ಮಾಲಿ, ವರ್ದಾರಾಂ ಮಾಲಿ, ರಾಮೇಶ್ವರ್, ಬಬುತಾ ರಾಮ್ ಮುಂತಾದವರು ಭಾಗವಹಿಸಿದ್ದರು.

ವಾಟ್ಸಾಪ್ ಗ್ರೂಪ್‌ನಲ್ಲಿ ಮಹಿಳೆ ಬಗ್ಗೆ ಅಸಭ್ಯ ಸಂದೇಶ; ವ್ಯಕ್ತಿ ಬಂಧನ

ಮೈಸೂರು, ಸೆ.17– ಸಮುದಾಯದವರ ವಾಟ್ಸಾಪ್ ಗ್ರೂಪ್‌ನಲ್ಲಿ ಮಹಿಳೆಯೊಬ್ಬರ ಬಗ್ಗೆ ಅಸಭ್ಯ ಸಂದೇಶಗಳನ್ನು ಹಂಚಿಕೊಳ್ಳುತ್ತಿದ್ದ ವ್ಯಕ್ತಿಯನ್ನು ಮೈಸೂರಿನ ಕೃಷ್ಣರಾಜ ಠಾಣೆ ಪೊಲೀಸರು ಬಂಧಿಸಿದ್ದಾರೆ. ರಮೇಶ್‌ಕುಮಾರ್ ಮಾಲಿ ಬಂಧಿತ. ಸಮುದಾಯದ ವಾಟ್ಸಾಪ್ ಗ್ರೂಪ್ ಸೃಜಿಸಿದ್ದ ಈತ, ವರ್ಮಾರಾಮ್ ಮಾಲಿ ಹಾಗೂ ಅವರ ಪತ್ನಿಯ ಮೊಬೈಲ್ ನಂಬರ್ ಅನ್ನೂ ಸೇರ್ಪಡೆ ಮಾಡಿದ್ದ. ಕೆಲ ದಿನಗಳ ಬಳಿಕ ಈ ದಂಪತಿ ವಾಟ್ಸಾಪ್ ಗ್ರೂಪ್‌ನಿಂದ ಹೊರಬಂದಿದ್ದರು. ಬಳಿಕ ರಮೇಶ್ ಕುಮಾರ್ ಮಾಲಿ, ಮೆಸೇಜ್ ಹಾಗೂ ಕರೆ ಮಾಡಿ ಕಿರುಕುಳ ನೀಡುತ್ತಿದ್ದ. ಅಲ್ಲದೆ ಸಮುದಾಯದ ಗ್ರೂಪ್‌ನಲ್ಲೂ ವರ್ಮಾರಾಮ್ ಪತ್ನಿಯ ಬಗ್ಗೆ ಅಸಭ್ಯವಾಗಿ ಸಂದೇಶ ಹಂಚಿಕೊಳ್ಳುತ್ತಿದ್ದ. ಈ ಬಗ್ಗೆ ಆ ಗ್ರೂಪ್‌ನಲ್ಲಿದ್ದ ಸಂಬಂಧಿಕರೊಬ್ಬರಿಂದ ಮಾಹಿತಿ ತಿಳಿದ ವರ್ಮಾರಾಮ್, ಕರೆ ಮಾಡಿ ಪ್ರಶ್ನಿಸಿದಾಗಲೂ ಅವಾಚ್ಯವಾಗಿ ನಿಂದಿಸಿ, ಕೊಲೆ ಬೆದರಿಕೆ ಹಾಕಿದ್ದ.

ಈ ಬಗ್ಗೆ ವರ್ಮಾರಾಮ್ ನೀಡಿದ ದೂರಿನನ್ವಯ ಪ್ರಕರಣ ದಾಖಲಿಸಿಕೊಂಡ ಪೊಲೀಸರು, ಸೋಮವಾರ ಆರೋಪಿ ರಮೇಶ್ ಕುಮಾರ್ ಮಾಲಿಯನ್ನು ಬಂಧಿಸಿ, ಜೈಲಿಗೆ ಕಳುಹಿಸಿದ್ದಾರೆ. ಈತ ರೌಡಿ ಶೀಟರ್ ಎಂದು ತಿಳಿದುಬಂದಿದೆ.

ಮುಕ್ತ ವಿವಿ ಸಹ ಪ್ರಾಧ್ಯಾಪಕ ಹುದ್ದೆಗಳ ಸಂದರ್ಶನ ಮುಂದೂಡಿಕೆ

ಮೈಸೂರು,ಸೆ.17(ಪಿಎಂ)– ಮುಕ್ತ ವಿವಿಯ ಸಹ ಪ್ರಾಧ್ಯಾಪಕ ಹುದ್ದೆಗಳ ನೇರ ನೇಮಕಾತಿಯ ಸಂದರ್ಶನವನ್ನು ತಾತ್ಕಾಲಿಕವಾಗಿ ಮುಂದೂಡಲಾಗಿದೆ. ಮುಕ್ತ ವಿವಿಯಲ್ಲಿ ಖಾಲಿ ಇದ್ದ ಪ್ರಾಧ್ಯಾಪಕ ಹಾಗೂ ಸಹ ಪ್ರಾಧ್ಯಾಪಕ ಹುದ್ದೆಗಳ ನೇರ ನೇಮಕಾತಿಗೆ ಸಂಬಂಧಿಸಿದಂತೆ ಆ.16ರಂದು ಅಧಿಸೂಚನೆ ಹೊರಡಿಸಲಾಗಿತ್ತು. ಈ ಸಂಬಂಧ ಹೈದರಾಬಾದ್ ಕರ್ನಾಟಕ 371 (ಜೆ)ಗೆ ಮೀಸಲಿರಿಸಿದ ಸಹ ಪ್ರಾಧ್ಯಾಪಕ ಶಿಕ್ಷಣಶಾಸ್ತ್ರ, ಭೌತಶಾಸ್ತ್ರ ಮತ್ತು ಗಣಿತಶಾಸ್ತ್ರ ವಿಷಯಗಳಿಗೆ ಅರ್ಹ ಅಭ್ಯರ್ಥಿ ಆಯ್ಕೆ ಸಂಬಂಧ ಸೆ.18ರಂದು ಸಂದರ್ಶನ ಏರ್ಪಡಿಸಲಾಗಿತ್ತು. ಹೈಕೋರ್ಟ್‌ನ ಸೆ.17ರ ಮಧ್ಯಂತರ ಆದೇಶದನ್ವಯ ಸಹ ಪ್ರಾಧ್ಯಾಪಕ ಶಿಕ್ಷಣಶಾಸ್ತ್ರ, ಭೌತಶಾಸ್ತ್ರ ಮತ್ತು ಗಣಿತಶಾಸ್ತ್ರ ವಿಷಯಗಳ ಸಂದರ್ಶನವನ್ನು ತಾತ್ಕಾಲಿಕವಾಗಿ ಮುಂದೂಡಲಾಗಿದೆ ಎಂದು ವಿವಿಯ ಕುಲಸಚಿವರು ಸುತ್ತೋಲೆಯಲ್ಲಿ ಅಧೀನ ಅಧಿಕಾರಿಗಳಿಗೆ ತಿಳಿಸಿದ್ದಾರೆ.

ಸ್ವಯಂಪ್ರೇರಿತ ರಕ್ತದಾನ ಮೂಲಕ ಪ್ರಧಾನಿ ನರೇಂದ್ರ ಮೋದಿ ಜನ್ಮದಿನಾಚರಣೆ



ಜೀವಧಾರ ರಕ್ತ ನಿಧಿ ಕೇಂದ್ರದ ಆವರಣದಲ್ಲಿ ಜೀವಧಾರ ರಕ್ತ ನಿಧಿ ಕೇಂದ್ರ ಹಾಗೂ ಬಿಜೆಪಿ ವೈದ್ಯಕೀಯ ಪ್ರಕೋಷ್ಠ ಮತ್ತು ನರೇಂದ್ರ ಮೋದಿ ಅಭಿಮಾನಿ ಬಳಗದ ವತಿಯಿಂದ ಸ್ವಯಂಪ್ರೇರಿತ ರಕ್ತದಾನ ಶಿಬಿರ ನಡೆಯಿತು.



ಬಿಜೆಪಿ ಮೈಸೂರು ನಗರ ಜಿಲ್ಲಾ ಯುವ ಮೋರ್ಚಾ, ಚಾಮುಂಡೇಶ್ವರಿ ಗ್ರಾಮಾಂತರ ಯುವ ಮೋರ್ಚಾ ವತಿಯಿಂದ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ 74ನೇ ವರ್ಷದ ಜನುಮದಿನವನ್ನು ದಾಸನಕೊಪ್ಪಲಿನ ಶ್ರೀ ವಿದ್ಯಾ ಗಣಪತಿ ದೇವಸ್ಥಾನದ ಆವರಣದಲ್ಲಿ ರಕ್ತದಾನದ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಯಿತು. ಬಿಜೆಪಿ ಮೈಸೂರು ನಗರ ಅಧ್ಯಕ್ಷ ಎಲ್.ನಾಗೇಂದ್ರ, ಮುಖಂಡ ಕವೀಶ್ ಗೌಡ, ಪ್ರಧಾನ ಕಾರ್ಯದರ್ಶಿ ಬಿ.ಎಂ.ರಘು, ಕ್ಷೇತ್ರದ ಅಧ್ಯಕ್ಷ ವೈ.ಟಿ.ರವಿ, ಪ್ರಧಾನ ಕಾರ್ಯದರ್ಶಿ ಶಿವಕುಮಾರ್, ಮೈಸೂರು ನಗರ ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷ ರಾಕೇಶ್ ಗೌಡ, ಪ್ರಧಾನ ಕಾರ್ಯದರ್ಶಿ ಡಿ.ಲೋಹಿತ್, ಕ್ಷೇತ್ರದ ನಿಕಟಪೂರ್ವ ಅಧ್ಯಕ್ಷ ಗೆಜ್ಜಗಳ್ಳಿ ಮಹೇಶ್, ಅರುಣ್‌ಕುಮಾರ್‌ಗೌಡ, ಕ್ಷೇತ್ರದ ಯುವ ಮೋರ್ಚಾ ಅಧ್ಯಕ್ಷ ಮೋಹನ್ ಕುಮಾರ್, ಪ್ರಭು, ಪರಶುರಾಮ್, ನಾಗರಾಜು, ಸವಿತಾ, ಶಾಲಿನಿ, ನಂಜುಂಡಸ್ವಾಮಿ, ಸುನಿಲ್ ದಾರಿಪುರ, ಶ್ರೀಕಂಠಸ್ವಾಮಿ, ಮಹಾದೇವಸ್ವಾಮಿ, ಮಾಯಾವತಿ ಹೇಮಂತ್, ಮಲ್ಲೇಶ್, ಬಸವರಾಜು, ಚಿಕ್ಕಕಾನ್ಯ ಶಿವು ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು,ಸೆ.17–ಪಕ್ಷಕ್ಕಾಗಿ ದೇಶಕ್ಕಾಗಿ ತಮ್ಮ ಸರ್ವಸ್ವವನ್ನು ಅರ್ಪಿಸಿ ಕೆಲಸ ಮಾಡುತ್ತಿರುವ ಪ್ರಧಾನಿಯವರ ದಾರಿಯಲ್ಲೇ ನಾವೆಲ್ಲರೂ ಸಾಗಬೇಕು ಎಂದು ಮಾಜಿ ಶಾಸಕ ಎಲ್.ನಾಗೇಂದ್ರ ಮಾತನಾಡಿದರು.

ಮೈಸೂರಿನ ನ್ಯೂ ಸಯ್ಯಾಜಿರಾವ್ ರಸ್ತೆ ಜೀವಧಾರ ರಕ್ತನಿಧಿ ಕೇಂದ್ರದ ಆವರಣದಲ್ಲಿ ಜೀವಧಾರ ರಕ್ತನಿಧಿ ಕೇಂದ್ರ ಹಾಗೂ ಬಿಜೆಪಿ ವೈದ್ಯಕೀಯ ಪ್ರಕೋಷ್ಠ ಮತ್ತು ನರೇಂದ್ರ ಮೋದಿ ಅಭಿಮಾನಿ ಬಳಗದ ವತಿಯಿಂದ ಆಯೋಜಿಸಿದ ಸ್ವಯಂಪ್ರೇರಿತ ರಕ್ತದಾನ ಶಿಬಿರದಲ್ಲಿ 30ಕ್ಕೂ ಹೆಚ್ಚು ಬಿಜೆಪಿ ಕಾರ್ಯಕರ್ತರು ರಕ್ತದಾನ ಮಾಡಿದರು. ನಂತರ ಸಾರ್ವಜನಿಕರಿಗೆ ಬಿಜೆಪಿ ನಗರ ಅಧ್ಯಕ್ಷ ಎಲ್.ನಾಗೇಂದ್ರ ಚಹ ವಿತರಿಸಿ ಮಾತನಾಡಿದ ಅವರು, ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ 18 ಗಂಟೆಗಳ ಕಾಲ ದೇಶ ಸೇವೆ ಸಲ್ಲಿಸುತ್ತಿರುವ ಪ್ರಧಾನಿ ಮೋದಿಯವರ ಹುಟ್ಟುಹಬ್ಬದ ದಿನದಂದು ದೇಶದ ಯುವ ಸಮೂಹ ಸ್ವಯಂಪ್ರೇರಣೆಯಿಂದ ರಕ್ತದಾನ ಮಾಡುವ ಮೂಲಕ ಮೋದಿಯವರಿಗೆ ಮತ್ತಷ್ಟು ಹುರುಪು ತುಂಬುವ ಕೆಲಸ ಮಾಡಿದ್ದಾರೆ. ಪಕ್ಷಕ್ಕಾಗಿ ದೇಶಕ್ಕಾಗಿ ತಮ್ಮ ಸರ್ವಸ್ವವನ್ನು ಅರ್ಪಿಸಿ ಕೆಲಸ ಮಾಡುತ್ತಿರುವ ಪ್ರಧಾನಿಯವರ ದಾರಿಯಲ್ಲೇ ನಾವೆಲ್ಲರೂ ಸಾಗಬೇಕು ಎಂದು ಕರೆ ನೀಡಿದರು. ಪ್ರಧಾನ ಕಾರ್ಯದರ್ಶಿ ಬಿ.ಎಂ.ರಘು, ಮಹಿಳಾ ಮೋರ್ಚಾ ಅಧ್ಯಕ್ಷೆ ರೇಣುಕಾರಾಜ್, ವೈದ್ಯಕೀಯ ಪ್ರಕೋಷ್ಠ ಸಂಚಾಲಕ ಗಿರೀಶ್, ಚಾಮರಾಜ ಕ್ಷೇತ್ರದ ಅಧ್ಯಕ್ಷ ದಿನೇಶ್‌ಗೌಡ, ಪ್ರಧಾನ ಕಾರ್ಯದರ್ಶಿ ದಾಸ್‌ಪ್ರಕಾಶ್, ಪಾಲಿಕೆ ಮಾಜಿ ಸದಸ್ಯ ರಂಗಸ್ವಾಮಿ, ಕೇಬಲ್ ವಿಜಿ, ಕುಮಾರ್ ಗೌಡ, ಸೂರಜ್, ಸದಾಶಿವ, ಚಾಮುಂಡೇಶ್ವರಿ ಯುವ ಮೋರ್ಚಾ ಮಾಜಿ ಅಧ್ಯಕ್ಷ ಚಂದ್ರಶೇಖರ್, ಅರವಿಂದ್ ಇದ್ದರು.



ನಗರ ಮಂಡಲ ವತಿಯಿಂದ ದಟ್ಟಗಳ್ಳಿಯಲ್ಲಿ ದೇಸಿ ತಳಿಯ ಹಸು ಕರುವಿಗೆ ಪೂಜೆ ಸಲ್ಲಿಸಿ, ಪ್ರಧಾನಿ ಮೋದಿ ಅವರಿಗೆ ಆಯುರಾರೋಗ್ಯ, ಯಶಸ್ಸು ಕೋರಲಾಯಿತು.

ದೇಶ – ವಿದೇಶ

ಮ್ಯಾನ್ಮಾರ್‌ನಲ್ಲಿ ಟೈಫೂನ್ ಯಾಗಿ ಅಬ್ಬರ: ಒಂದೇ ವಾರದಲ್ಲಿ 226 ಜನ ಸಾವು



ಮ್ಯಾನ್ಮಾರ್: ಟೈಫೂನ್ ಯಾಗಿ ಚಂಡಮಾರುತದ ಅಬ್ಬರದಿಂದ ಮ್ಯಾನ್ಮಾರ್ ದೇಶದಲ್ಲಿ ಸಂಭವಿಸಿದ ಪ್ರವಾಹದಲ್ಲಿ ಒಂದೇ ವಾರದಲ್ಲಿ ಕನಿಷ್ಠ 226 ಜನ ಮೃತಪಟ್ಟಿದ್ದಾರೆ ಎಂದು ರಾಜ್ಯ ಮಾಧ್ಯಮಗಳು ಮಂಗಳವಾರ ವರದಿ ಮಾಡಿವೆ.

ರಾಜಧಾನಿ ಯಾಂಗೋನ್, ಶಾನ್ ರಾಜ್ಯದಲ್ಲಿ ಪ್ರವಾಹದಿಂದ ಹೆಚ್ಚು ಹಾನಿಯಾಗಿದೆ. ಮಂಡಾಲೆ ಪ್ರದೇಶವೊಂದರಲ್ಲೇ 40 ಸಾವಿರ ಎಕರೆಯಷ್ಟು ಕೃಷಿ ಭೂಮಿ ಜಲಾವೃತಗೊಂಡಿದ್ದು, 26 ಸಾವಿರಕ್ಕೂ ಹೆಚ್ಚು ಮನೆಗಳಿಗೆ ಹಾನಿಯಾಗಿದೆ. 9 ರಾಜ್ಯಗಳಲ್ಲಿ ಈಗಾಗಲೇ 388 ನಿರಾಶ್ರಿತರ ಶಿಬಿರಗಳನ್ನು ತೆರೆಯಲಾಗಿದ್ದು, ಹಲವು ಹಿತೈಷಿಗಳು ಕುಡಿಯುವ ನೀರು, ಆಹಾರ, ಬಟ್ಟೆಯ ನೆರವನ್ನು ಒದಗಿಸಿದ್ದಾರೆ ಎಂದು ಮ್ಯಾನ್ಮಾರ್ ಮಿಲಿಟರಿ ಸರ್ಕಾರದ ಮಾಧ್ಯಮ 'ಗ್ಲೋಬಲ್ ನ್ಯೂ ಲೈಟ್ ಆಫ್ ಮ್ಯಾನ್ಮಾರ್' ವರದಿ ಮಾಡಿದೆ.

ವಂದೇ ಭಾರತ್ ರೈಲಿಗೆ ಚಾಲನೆ ನೀಡುವ ವೇಳೆ ಹಳಿಗೆ ಬಿದ್ದ ಶಾಸಕಿ



ಇಟಾವಾ: ಆಗ್ರಾ–ವಾರಾಣಸಿ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿಗೆ ಚಾಲನೆ ನೀಡುವ ವೇಳೆ ಬಿಜೆಪಿ ಶಾಸಕಿಯೊಬ್ಬರು ರೈಲ್ವೆ ಹಳಿಗೆ ಬಿದ್ದ ಘಟನೆ ಉತ್ತರ ಪ್ರದೇಶದಲ್ಲಿ ನಡೆದಿದೆ.


ಸೋಮವಾರ ಸಂಜೆ 6 ಗಂಟೆ ಸುಮಾರಿಗೆ ರೈಲು ಆಗಮಿಸುತ್ತಿದ್ದಂತೆ ಹೊಸ ರೈಲು ನೋಡಲು ಪ್ಲಾಟ್‌ಫಾರ್ಮ್‌ನಲ್ಲಿ ಭಾರಿ ಜನಸ್ತೋಮ ನೆರೆದಿತ್ತು. ವ್ಯಕ್ತಿಯೊಬ್ಬರು ರೈಲಿಗೆ ಹಸಿರು ನಿಶಾನೆ ತೋರುತ್ತಿದ್ದಂತೆ ರೈಲು ನೋಡಲು ಜನ ಮುಗಿಬಿದ್ದಿದ್ದಾರೆ. ಈ ವೇಳೆ ಶಾಸಕಿ ಸರಿತಾ ಆಯತಪ್ಪಿ ಹಳಿಗೆ ಬಿದ್ದಿದ್ದಾರೆ. ತಕ್ಷಣ ಪೊಲೀಸರು ಅವರನ್ನು ಮೇಲಕ್ಕೆತ್ತಿದ್ದಾರೆ. ಈ ಕುರಿತು ಮಾತನಾಡಿರುವ ಇಟಾವಾ ಘಟಕದ ಖಜಾಂಚಿ ಸಂಜೀವ್ ಭದೌರಿಯಾ, 'ಸರಿತಾ ಅವರು ವೈದ್ಯರೊಂದಿಗೆ ಸಮಾಲೋಚನೆ ನಡೆಸಿದ್ದಾರೆ. ಸದ್ಯ ಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾರೆ. ಬಾಹ್ಯವಾಗಿ ಯಾವುದೇ ಗಾಯಗಳಾಗಿಲ್ಲ. ದೇಹದಲ್ಲಿ ಆಂತರಿಕವಾಗಿ ಪೆಟ್ಟಾಗಿದ್ದರೆ ತಪಾಸಣೆಯ ಬಳಿಕ ತಿಳಿದುಬರಲಿದೆ' ಎಂದು ಮಾಹಿತಿ ನೀಡಿದ್ದಾರೆ.

ಸೈನಿಕರಂತೆ ಗಸ್ತು ಕಾಯುವ ರೋಬೋಟ್ ತಯಾರಿಸಿದ ಆಸ್ಟ್ರೇಲಿಯಾ ಸೇನೆ



ಕ್ಯಾನ್ ಬೆರಾ: ಅಪಾಯಕಾರಿ ಪ್ರದೇಶಗಳಲ್ಲಿ ಸೈನಿಕರ ಬದಲಾಗಿ ಕೆಲಸ ಮಾಡುವ ಮತ್ತು ಅವರಂತೆ ಗಡಿಯಲ್ಲಿ ಕಣ್ಗಾವಲು ಇಡಬಲ್ಲ ಜಿಯುಎಸ್ (ಗ್ರೌಂಡ್ ಅನ್ ಕ್ರೂವ್ಡ್ ಸಿಸ್ಟಮ್) ಎಂಬ ಅಡ್ಡಹೆಸರಿನಿಂದ ಕರೆಯಲ್ಪಡುವ ಸಿಬ್ಬಂದಿ ರಹಿತ ರೋಬೋಟ್‌ನ ಪ್ರಯೋಗಗಳನ್ನು ಆಸ್ಟ್ರೇಲಿಯಾ ಸೇನೆ ಪ್ರಾರಂಭಿಸಿದೆ. ಆಸ್ಟ್ರೇಲಿಯಾ ಸೇನೆಯ ಪ್ರಾದೇಶಿಕ ಪಡೆ ಕಣ್ಗಾವಲು ಗುಂಪು (ಆರ್‌ಎಫ್‌ಎಸ್‌ಜಿ) ಪಿಲ್ಬರಾ ರೆಜಿಮೆಂಟ್‌ನ ಸೈನಿಕರು ಸಿಬ್ಬಂದಿಯಿಲ್ಲದ (ಮಾನವ ರಹಿತ) ರೋಬೋಟ್ ಅನ್ನು ಪರೀಕ್ಷಿಸುತ್ತಿದ್ದಾರೆ. ಆಸ್ಟ್ರೇಲಿಯಾದ ರಕ್ಷಣಾ ಸಚಿವಾಲಯದ ಪ್ರಕಾರ, ಈ ಕಣ್ಗಾವಲು ರೋಬೋಟ್ ಕ್ಯಾಮೆರಾಗಳು ಮತ್ತು ಸಂವೇದಕಗಳನ್ನು ಹೊಂದಿದ್ದು, ಬ್ಯಾಟರಿ ಶಕ್ತಿ ಬಳಸಿಕೊಂಡು ಸತತ 30 ದಿನಗಳವರೆಗೆ ನಿರಂತರ ಕಣ್ಗಾವಲು ನಡೆಸುವ ಸಾಮರ್ಥ್ಯ ಹೊಂದಿದೆ. ಇದರಲ್ಲಿ ಆನ್–ಬೋರ್ಡ್ ಲಿಕ್ವಿಡ್ ಫ್ಯೂಯಲ್ ಜನರೇಟರ್ ಇದ್ದು, ಬ್ಯಾಟರಿ ಕಡಿಮೆಯಾದಾಗ ಅದನ್ನು ರೀಚಾರ್ಜ್ ಮಾಡುತ್ತದೆ. ಜಿಯುಎಸ್‌ನ ಮಿಷನ್ ಅವಧಿಯನ್ನು ಮತ್ತಷ್ಟು ವಿಸ್ತರಿಸುತ್ತದೆ.

ಪಾಕಿಸ್ತಾನಿ ನುಸುಳುಕೋರನನ್ನು ಗುಂಡಿಕ್ಕಿ ಕೊಂದ ಬಿಎಸ್‌ಎಫ್



ಅಮೃತಸರ: ಪಾಕಿಸ್ತಾನದ ನುಸುಳುಕೋರನನ್ನು ಗಡಿ ಭದ್ರತಾ ಪಡೆಯ ಯೋಧರು ಪಂಜಾಬ್‌ನ ಗಡಿ ಸಮೀಪ ಗುಂಡಿಕ್ಕಿ ಕೊಂದಿದ್ದಾರೆ ಎಂದು ಬಿಎಸ್‌ಎಫ್‌ನ ವಕ್ತಾರ ತಿಳಿಸಿದ್ದಾರೆ. 'ಸೋಮವಾರ ರಾತ್ರಿ 9.15ರ ಸುಮಾರಿಗೆ ಅಮೃತಸರ ಜಿಲ್ಲೆಯ ರತನ್ ಖುರ್ದ್ ಹಳ್ಳಿಯ ಸಮೀಪ ಅನುಮಾನಾಸ್ಪದ ವ್ಯಕ್ತಿಯೊಬ್ಬ ಅಂತರರಾಷ್ಟ್ರೀಯ ಗಡಿಯನ್ನು ಅಕ್ರಮವಾಗಿ ದಾಟುತ್ತಿರುವುದು ಕಂಡುಬಂದಿದೆ. ಭದ್ರತಾ ಪಡೆಯು ಹಲವು ಬಾರಿ ಎಚ್ಚರಿಕೆ ನೀಡಿದ ಬಳಿಕವೂ, ಗಡಿ ದಾಟಲು ಪ್ರಯತ್ನಿಸಿದ್ದಾನೆ. ಅಲ್ಲದೆ, ಆಕ್ರಮಣಕಾರಿ ಸನ್ನೆಗಳನ್ನು ಪ್ರದರ್ಶಿಸಿದ್ದಾನೆ' ಎಂದು ತಿಳಿಸಿದ್ದಾರೆ. ಕರ್ತವ್ಯದಲ್ಲಿದ್ದ ಭದ್ರತಾ ಪಡೆಯ ಸಿಬ್ಬಂದಿ ನುಸುಳುಕೋರನನ್ನು ಗುಂಡಿಕ್ಕಿ ಕೊಂದಿದ್ದಾರೆ. ಆತನ ಬಳಿ 270 ಪಾಕಿಸ್ತಾನಿ ಕರೆನ್ಸಿ ಮತ್ತು ಅರ್ಧ ಹರಿದ 10ರ ನೋಟು ಪತ್ತೆಯಾಗಿದೆ. ಅಂತರರಾಷ್ಟ್ರೀಯ ಗಡಿಯಲ್ಲಿ ಭದ್ರತಾ ಪಡೆಯ ಯೋಧರು ಕಾವಲು ಕಾಯುತ್ತಿದ್ದಾರೆ ಎಂದು ವಕ್ತಾರರು ಹೇಳಿದ್ದಾರೆ.

ನ್ಯೂಯಾರ್ಕ್‌ನಲ್ಲಿರುವ ಹಿಂದೂ ದೇಗುಲದ ಮೇಲೆ ದುಷ್ಕರ್ಮಿಗಳ ದಾಳಿ



ನ್ಯೂಯಾರ್ಕ್: ನ್ಯೂಯಾರ್ಕ್‌ನ ಮೆಲ್ವಿಲ್ಲೆಯಲ್ಲಿರುವ ಬಾಪ್ಸ್ ಸ್ವಾಮಿ ನಾರಾಯಣ ದೇಗುಲದ ಮೇಲೆ ದುಷ್ಕರ್ಮಿಗಳು ದಾಳಿ ನಡೆಸಿದ್ದಾರೆ. ಘಟನೆಯನ್ನು ಖಂಡಿಸಿರುವ ಭಾರತೀಯ ಕಾನ್ಸುಲೇಟ್ ಜನರಲ್, ಇಂಥ ಕೃತ್ಯಗಳು ಸ್ವೀಕಾರಾರ್ಹವಲ್ಲ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ. ಘಟನೆಯ ಕುರಿತು ಕಾನ್ಸುಲೇಟ್ ಜನರಲ್ ಅಧಿಕಾರಿಗಳು ಯುಎಸ್ ಕಾನೂನು ಜಾರಿ ಪ್ರಾಧಿಕಾರಗಳಿಗೆ ದೂರು ನೀಡಿದ್ದು, ಕೃತ್ಯ ಎಸಗಿದ ದುಷ್ಕರ್ಮಿಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ.

ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಕಾನ್ಸುಲೇಟ್ ಜನರಲ್ ಕಚೇರಿ, ನ್ಯೂಯಾರ್ಕ್‌ನ ಬಾಪ್ಸ್ ಸ್ವಾಮಿ ನಾರಾಯಣ ದೇಗುಲದ ಮೇಲಿನ ದಾಳಿ ಒಪ್ಪುವಂಥದ್ದಲ್ಲ. ಕಾನ್ಸುಲೇಟ್ ಕಚೇರಿ ಹಿಂದೂ ಸಮುದಾಯದ ಜೊತೆ ಸಂಪರ್ಕದಲ್ಲಿದೆ. ಈ ವಿಷಯವನ್ನು ಯುಎಸ್ ಅಧಿಕಾರಿಗಳಿಗೆ ತಿಳಿಸಲಾಗಿದೆ. ಇಂಥ ಹೇಯ ಕೃತ್ಯ ಎಸಗಿದವರ ವಿರುದ್ಧ ಸೂಕ್ತ ಕ್ರಮಕ್ಕೆ ಆಗ್ರಹಿಸಲಾಗಿದೆ ಎಂದು ಮಾಹಿತಿ ನೀಡಿದೆ.

ಗೌರಿ-ಗಣೇಶ ಮೂರ್ತಿ ವಿಸರ್ಜನೋತ್ಸವ ಹಿನ್ನೆಲೆ

ವಿ.ಪೇಟೆಯಲ್ಲಿ ವಿಜೃಂಭಣೆ ಶೋಭಯಾತ್ರೆ







ವಿರಾಜಪೇಟೆಯಲ್ಲಿ ಅಲಂಕೃತ ವಾಹನಗಳಲ್ಲಿ ಗಣೇಶ ವಿಸರ್ಜನೆ ವಿಜೃಂಭಣೆಯಿಂದ ನಡೆಯಿತು.

ವಿರಾಜಪೇಟೆ, ಸೆ.17-ಶ್ರೀ ಗೌರಿ-ಗಣೇಶ ಮೂರ್ತಿ ವಿಸರ್ಜನೋತ್ಸವದ ಶೋಭಯಾತ್ರೆ ಪಟ್ಟಣದ ಮುಖ್ಯ ಬೀದಿಗಳಲ್ಲಿ ಮಂಗಳವಾರ ರಾತ್ರಿ ವಿಜೃಂಭಣೆಯಿಂದ ನಡೆಯಿತು.

ಅಲಂಕೃತ ಮಂಟಪದಲ್ಲಿ ವಿಘ್ನೇಶ್ವರ ಮೂರ್ತಿಯನ್ನು ಪ್ರತಿಷ್ಠಾಪಿಸಿ, ಮೆರವಣಿಗೆ ನಡೆಸಲಾಯಿತು. ಬುಧವಾರ ಮುಂಜಾನೆ ಪವಿತ್ರ ಗೌರಿಕೆರೆಯಲ್ಲಿ ವಿಸರ್ಜಿಸಲಾಯಿತು.

ಮೊದಲು ಗಡಿಯಾರ ಕಂಬದ ಬಳಿಯ ಗಣಪತಿ ದೇವಸ್ಥಾನದಲ್ಲಿ ಪ್ರತಿಷ್ಠಾಪಿಸಿದ್ದ ಗಣೇಶ ಮೂರ್ತಿಯನ್ನು ಹೂವಿನ ಮಂಟಪದಲ್ಲಿ ಕೂರಿಸಿ ಪೂಜೆ ಸಲ್ಲಿಸಲಾಯಿತು. ನಂತರ ಬಸವೇಶ್ವರ ದೇವಸ್ಥಾನದ ಗೌರಿ-ಗಣೇಶ ಹಾಗೂ ಉಳಿದ ಎಲ್ಲಾ ಮಂಟಪಗಳು ಸರತಿ ಸಾಲಿನಲ್ಲಿ ಸಾಗಿ ಸಿದ್ದಾಪುರ ರಸ್ತೆ ತಿರುವಿನಲ್ಲಿ ಹಿಂದಿರುಗಿ ಮುಖ್ಯ ರಸ್ತೆಯಲ್ಲಿ ವಾದ್ಯಗೋಷ್ಠಿಯೊಂದಿಗೆ ಖಾಸಗಿ ಬಸ್ ನಿಲ್ದಾಣದ ಪವಿತ್ರ ಗೌರಿಕೆರೆಯಲ್ಲಿ ವಿಸರ್ಜಿಸಲಾಯಿತು. ಮೆರವಣಿಗೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಗೊಂಬೆ ಕುಣಿತ, ಕೇರಳದ ಚಂಡೆಮದ್ದಾಳೆ, ಕೀಲುಕುದುರೆ ಸೇರಿದಂತೆ ವಿವಿಧ ಕಲಾ ತಂಡಗಳ ನೃತ್ಯ ನಡೆಯಿತು.

ಮೆರವಣಿಗೆಯಲ್ಲಿ ಗಡಿಯಾರ ಕಂಬದ ಬಳಿಯ ಶ್ರೀ ಗಣಪತಿ ದೇವಸ್ಥಾನ ಉತ್ಸವ ಮೂರ್ತಿ, ಶ್ರೀ ಬಸವೇಶ್ವರ ದೇವಸ್ಥಾನ ಜೈನರ ಬೀದಿ, ದೇವರಾಜು ಅರಸು ನಗರದ ವಿಘ್ನೇಶ್ವರ ಸೇವಾ ಸಮಿತಿ, ವಿನಾಯಕ ಯುವಕ ಭಕ್ತ ಮಂಡಳಿಯ ಅಂಗಾಳ ಪರಮೇಶ್ವರಿ ದೇವಸ್ಥಾನ, ದಖ್ಖನಿ ಮೊಹಲ್ಲಾದ ವಿಜಯ ವಿನಾಯಕ ಉತ್ಸವ ಸಮಿತಿ, ಮೂರ್ನಾಡು ರಸ್ತೆಯ ಶ್ರೀ ಕಾವೇರಿ ಗಣೇಶ ಉತ್ಸವ ಸಮಿತಿ, ನೆಹರು ನಗರದ ನೇತಾಜಿ ಉತ್ಸವ ಸಮಿತಿ, ಗಣಪತಿ ಬೀದಿಯ ಮಹಾ ಗಣಪತಿ ಸೇವಾ ಸಂಘ, ಪಂಜರುಪೇಟೆಯ ವಿನಾಯಕ ಸೇವಾ ಸಮಿತಿ, ಚಿಕ್ಕಪೇಟೆಯ ಆಂಜನೇಯ ದೇವಸ್ಥಾನದ ಜಲದರ್ಶಿನಿ ವಿನಾಯಕ ಸೇವಾ ಸಮಿತಿ, ಗಾಂಧಿನಗರದ ಗಣಪತಿ ಸೇವಾ ಸಮಿತಿ, ಸುಂಕದಕಟ್ಟೆ ಸರ್ವಸಿದ್ಧಿ ವಿನಾಯಕ ಉತ್ಸವ ಸಮಿತಿ, ಮಲೆತಿರಿಕೆ ಬೆಟ್ಟದ ಕಣ್ಮಣಿ ವಿನಾಯಕ ಉತ್ಸವ ಸೇವಾ ಸಮಿತಿ, ಕೆದೋಯಿಕೇರಿ ವಿಘ್ನೇಶ್ವರ ಗಣಪತಿ ಸೇವಾ ಸಮಿತಿ, ಹರಿಕೇರಿ ಸುಣ್ಣದಬೀದಿಯ ದೊಡ್ಡಮ್ಮ ಚಿಕ್ಕಮ್ಮ ತಾಯಿ ವಿನಾಯಕ ಸೇವಾ ಸಮಿತಿ ಕುಕ್ಲೂರು ಗ್ರಾಮದ ವಿಘ್ನೇಶ್ವರ ಉತ್ಸವ ಸಮಿತಿ, ಮೀನುಪೇಟೆಯ ವಿಶ್ವ ವಿನಾಯಕ ಗಣೇಶೋತ್ಸವ ಸಮಿತಿ, ಗೌರಿಕೆರೆಯ ಗಣಪತಿ ಸೇವಾ ಸಮಿತಿ, ಪುರಸಭೆಯ ವಿಘ್ನೇಶ್ವರ ಉತ್ಸವ ಸಮಿತಿ, ಅಯ್ಯಪ್ಪಬೆಟ್ಟದ ವರದ ವಿನಾಯಕ ಸೇವಾ ಸಮಿತಿ, ಶಿವಕೇರಿಯ ವಿನಾಯಕ ಯುವ ಸಮಿತಿ, ಅಪ್ಪಯ್ಯಸ್ವಾಮಿ ರಸ್ತೆಯ ಶ್ರೀ ಬಾಲಾಂಜನೇಯ ವಿನಾಯಕ ಉತ್ಸವ ಸಮಿತಿ ಸೇರಿದಂತೆ ಒಟ್ಟು 22 ಮಂಟಪಗಳು ಗಣೇಶ ಮೂರ್ತಿಯ ವಿಸರ್ಜನಾ ಮೆರವಣಿಗೆಯಲ್ಲಿ ಭಾಗವಹಿಸಿದ್ದವು.

ಸೆ.7ರಂದು ಪಟ್ಟಣದ ಹಲವು ಕಡೆಗಳಲ್ಲಿ ಉತ್ಸವ ಸಮಿತಿ ಸದಸ್ಯರು ಗಣಪತಿ ಉತ್ಸವ ಮೂರ್ತಿಗಳನ್ನು ಪ್ರತಿಷ್ಠಾಪಿಸಿದ್ದರು. 10 ದಿನ ಶ್ರೀ ಗೌರಿ-ಗಣೇಶನಿಗೆ ಪೂಜೆ ಸಲ್ಲಿಸಿ, ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು. ಶ್ರೀ ಬಸವೇಶ್ವರ ದೇವಸ್ಥಾನ ಉತ್ಸವ ಸಮಿತಿ ಹಾಗೂ ಮುರ್ನಾಡು ರಸ್ತೆಯ ಕಾವೇರಿ ಗಣೇಶೋತ್ಸವ ಸಮಿತಿ ಮತ್ತು ಮತ್ತಿತರ ಗಣಪತಿ ಪ್ರತಿಷ್ಠಾಪನ ವೇದಿಕೆಯಲ್ಲಿ 10 ದಿನ ಶಾಲಾ-ಕಾಲೇಜು ವಿದ್ಯಾರ್ಥಿಗಳಿಂದ ನೃತ್ಯ, ಮನರಂಜನೆ, ಸಂಗೀತ ರಸಮಂಜರಿ ಕಾರ್ಯಕ್ರಮ, ಸನ್ಮಾನ, ಪ್ರಶಸ್ತಿ ವಿತರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಹೊರ ಜಿಲ್ಲೆ ಹಾಗೂ ಕೊಡಗಿನ ಗ್ರಾಮೀಣ ಭಾಗದ ಸಾವಿರಾರು ಜನರು ಸೇರಿದ್ದರು. ಇಬ್ಬರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, 4 ಡಿವೈಎಸ್‌ಪಿ, 17 ವೃತ್ತನಿರೀಕ್ಷಕರು, 27 ಸಬ್ ಇನ್ಸ್‌ಪೆಕ್ಟರ್, 48 ಎಎಸ್‌ಐ, ಕೆಎಸ್‌ಆರ್‌ಪಿ 4, ಡಿಎಆರ್ 4 ಸೇರಿದಂತೆ 400 ಹೋಂಗಾರ್ಡ್‌ಗಳನ್ನು ಭದ್ರತೆಗೆ ನಿಯೋಜಿಸಲಾಗಿತ್ತು.

ರಾಷ್ಟ್ರದ ಅಭಿವೃದ್ಧಿಗೆ ವಿಶ್ವಕರ್ಮರ ಕೊಡುಗೆ ಅಪಾರ



ವಿಶ್ವಕರ್ಮ ಜಯಂತಿ ಕಾರ್ಯಕ್ರಮವನ್ನು ಡಿಸಿ ವೆಂಕಟ್ ರಾಜಾ ಉದ್ಘಾಟಿಸಿದರು.

ಮಡಿಕೇರಿ, ಸೆ.17-ಸೋಮನಾಥಪುರ ಸೇರಿದಂತೆ ವಿವಿಧ ದೇವಾಲಯ, ಮೂರ್ತಿ ಹಾಗೂ ಪ್ರತಿಮೆಗಳ ಕೆತ್ತನೆಯಲ್ಲಿ ವಿಶ್ವಕರ್ಮ ಸಮಾಜದವರ ಕೊಡುಗೆ ಅಪಾರ ಎಂದು ಸಾಹಿತಿ ಡಾ.ಜೆ.ಸೋಮಣ್ಣ ತಿಳಿಸಿದರು.

ನಗರದ ಗಾಂಧಿ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಮಂಗಳವಾರ ನಡೆದ ಶ್ರೀ ಭಗವಾನ್ ವಿಶ್ವಕರ್ಮ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಂಸ್ಕೃತಿ, ಆಚಾರ-ವಿಚಾರ ಹಾಗೂ ಕುಲಕಸುಬಿನಲ್ಲಿ ವಿಶ್ವಕರ್ಮ ಸಮಾಜದವರು ತಮ್ಮದೇ ಛಾಪು ಮೂಡಿಸಿದ್ದಾರೆ ಎಂದು ಹೇಳಿದರು.

ಇಂಜಿನಿಯರ್‌ಗಳ ರೀತಿ ವಿಶ್ವಕರ್ಮರು ಮರ, ಚಿನ್ನ ಕೆತ್ತನೆ, ಕಬ್ಬಿಣ ಕೆಲಸ ಹೀಗೆ ಹಲವು ವೃತ್ತಿ ಕೌಶಲದಲ್ಲಿ ತೊಡಗಿಸಿಕೊಂಡು ಕಾಯಕವೇ ಕೈಲಾಸ ಎಂಬಂತೆ ವೃತ್ತಿಯನ್ನೇ ಕುಲಕಸುಬನ್ನಾಗಿ ಮಾಡಿಕೊಂಡು ಮುನ್ನಡೆಯುತ್ತಾರೆ. ಪ್ರಾಚೀನ ಕಾಲದಲ್ಲಿ ದೇವಾನುದೇವತೆಗಳ ಸೃಷ್ಟಿಕರ್ತರು ವಿಶ್ವಕರ್ಮರಾಗಿದ್ದಾರೆ. ಸಿಂಧೂ ಬಯಲಿನ ನಾಗರಿಕತೆಯಂತೆ ದೇಶದಲ್ಲಿ ಹಲವು ಅಭಿವೃದ್ಧಿಗೆ ವಿಶ್ವಕರ್ಮರ ಕೊಡುಗೆ ಅಪಾರವಾಗಿದೆ ಎಂದು ಅಭಿಪ್ರಾಯಪಟ್ಟರು.

ಜಿಲ್ಲಾಧಿಕಾರಿ ವೆಂಕಟ್ ರಾಜಾ ಮಾತನಾಡಿ, ಯಾವುದೇ ಗೃಹ ನಿರ್ಮಾಣ ಸೇರಿದಂತೆ ಹಲವು ಕಟ್ಟಡ ಕೆಲಸಗಳು, ಮರಗೆಲಸ, ಉಳುಮೆ ಉಪಕರಣಗಳನ್ನು ವಿಶ್ವಕರ್ಮರು ತಯಾರು ಮಾಡುತ್ತಾರೆ. ಆ ನಿಟ್ಟಿನಲ್ಲಿ ದೇಶಕ್ಕೆ ವಿಶ್ವಕರ್ಮ ಸಮಾಜದವರ ಕೊಡುಗೆ ಅಪಾರವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ವಿಶ್ವಕರ್ಮ ಒಕ್ಕೂಟದ ಜಿಲ್ಲಾಧ್ಯಕ್ಷ ಎಸ್.ಜೆ.ದೇವದಾಸ್, ಪ್ರಾಂಶುಪಾಲೆ ಕೋರನ ಸರಸ್ವತಿ, ಡಿಡಿಪಿಐ ಸಿ.ರಂಗಧಾಮಪ್ಪ, ಬಿಇಓ ದೊಡ್ಡೇಗೌಡ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕುಮಾರ, ವಿಶ್ವಕರ್ಮ ಸೇವಾ ಸಂಘದ ತಾಲೂಕು ಅಧ್ಯಕ್ಷ ಜಿ.ಜಗದೀಶ್ ಆಚಾರ್ಯ ಇದ್ದರು.

ಕರಿಮೆಣಸಿಗೆ ಜಿಎಸ್‌ಟಿ ವಿನಾಯಿತಿ ನೀಡಿ

ಕೇಂದ್ರ ಹಣಕಾಸು ಸಚಿವೆ ನಿರ್ಮಲ ಸೀತಾರಾಮನ್‌ಗೆ ಸಂಸದ ಯದುವೀರ್ ಮನವಿ



ಸಂಸದ ಯದುವೀರ್ ಕೇಂದ್ರ ಹಣಕಾಸು ಸಚಿವೆ ನಿರ್ಮಲ ಸೀತಾರಾಮನ್ ಅವರನ್ನು ಭೇಟಿ ಮಾಡಿ, ಕರಿಮೆಣಸಿಗೆ ಜಿಎಸ್‌ಟಿ ವಿನಾಯಿತಿ ನೀಡುವಂತೆ ಮನವಿ ಮಾಡಿದರು.

ಮಡಿಕೇರಿ, ಸೆ.17- ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಕೇಂದ್ರ ಹಣಕಾಸು ಸಚಿವೆ ನಿರ್ಮಲ ಸೀತಾರಾಮನ್ ಅವರನ್ನು ಭೇಟಿ ಮಾಡಿ, ಕರಿಮೆಣಸು ಮೇಲಿನ ಜಿಎಸ್‌ಟಿಗೆ ವಿನಾಯಿತಿ ನೀಡುವಂತೆ ಮನವಿ ಮಾಡಿದರು.

ಕೊಡಗು, ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳ ರೈತರು ಪ್ರಮುಖ ಬೆಳೆಯಾಗಿ ಕರಿಮೆಣಸನ್ನು ಬೆಳೆಸುತ್ತಿದ್ದಾರೆ. ಈ ಬೆಳೆಗೆ ವಿಧಿಸುತ್ತಿರುವ ಜಿಎಸ್‌ಟಿ ವಿನಾಯಿತಿ ಕುರಿತು ಚರ್ಚಿಸಿದ ಸಂಸದರು, ಕರಿಮೆಣಸಿಗೆ ವಿನಾಯಿತಿ ಮುಂದುವರಿಸುವಂತೆ ಸಚಿವೆ ನಿರ್ಮಲ ಸೀತಾರಾಮನ್ ಅವರಿಗೆ ಮನವಿ ಸಲ್ಲಿಸಿದರು.

ಹಿಂದೆ ಕೊಡಗು ಪ್ಲಾಂಟರ್ಸ್ ಅಸೋಷಿಯೇಷನ್ ಅಧ್ಯಕ್ಷ ನಂದಾ ಬೆಳ್ಯಪ್ಪ, ಉಪಾಧ್ಯಕ್ಷ ಎ.ಎ.ಚಂಗಪ್ಪ, ಪದಾಧಿಕಾರಿಗಳಾದ ಕೆ.ಕೆ.ವಿಶ್ವನಾಥ್, ಕೆ.ಕೆ.ಬೆಳ್ಯಪ್ಪ, ಮುತ್ತು ಕಾರ್ಯಪ್ಪ, ಕಾರ್ಯದರ್ಶಿ ಸಿ.ಕೆ.ಬೆಳ್ಯಪ್ಪ ಅವರು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮೈಸೂರಿನಲ್ಲಿ ಭೇಟಿ ಮಾಡಿದ್ದರು.

ಭತ್ತ ಮತ್ತು ಕೆಂಪು ಮೆಣಸು ಬೆಳೆಗೆ ಜಿಎಸ್‌ಟಿ ವಿನಾಯಿತಿ ನೀಡಿದ ಮಾದರಿಯಲ್ಲೇ ಕರಿಮೆಣಸು ಮತ್ತು ಏಲಕ್ಕಿ ಬೆಳೆಗೂ ವಿನಾಯಿತಿ ನೀಡಬೇಕು. ಕರಿಮೆಣಸು ಮತ್ತು ಏಲಕ್ಕಿಯನ್ನು ಕೃಷಿ ಬೆಳೆ ಎಂದು ಪರಿಗಣಿಸಬೇಕು. ಜಿಎಸ್‌ಟಿ ಕಾಯ್ದೆ 2017ರಲ್ಲಿ ಭತ್ತ ಮತ್ತು ಕೆಂಪುಮೆಣಸಿಗೆ ನೀಡಿದ ವಿನಾಯಿತಿಯನ್ನು ಕರಿಮೆಣಸು ಮತ್ತು ಏಲಕ್ಕಿ ಬೆಳೆಗಳಿಗೂ ಅನ್ವಯಿಸಬೇಕು ಎಂದು ಸಿಪಿಎ ನಿಯೋಗ ಸಂಸದರನ್ನು ಒತ್ತಾಯಿಸಿತ್ತು ಎಂಬುದನ್ನು ಇಲ್ಲಿ ಸ್ಮರಿಸಬಹುದು.

ರಾಹುಲ್ ಗಾಂಧಿ ವಿರುದ್ಧ ಎಸ್‌ಟಿ ಮೋರ್ಚಾ ಪ್ರತಿಭಟನೆ



ಮಡಿಕೇರಿ ಜಿಲ್ಲಾಧಿಕಾರಿ ಕಚೇರಿ ಎದುರು ರಾಹುಲ್ ಗಾಂಧಿ ಹೇಳಿಕೆ ಖಂಡಿಸಿ ಬಿಜೆಪಿ ಎಸ್‌ಟಿ ಮೋರ್ಚಾ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮಡಿಕೇರಿ, ಸೆ.17-ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಭಾರತದ ಮೀಸಲಾತಿ ವ್ಯವಸ್ಥೆ ಕುರಿತು ಅಮೆರಿಕದಲ್ಲಿ ನೀಡಿರುವ ಹೇಳಿಕೆ ಸಂವಿಧಾನ ವಿರೋಧಿಯಾಗಿದೆ ಎಂದು ಆರೋಪಿಸಿ ಕೊಡಗು ಜಿಲ್ಲಾ ಭಾರತೀಯ ಜನತಾ ಪಾರ್ಟಿಯ ಎಸ್‌ಟಿ ಮೋರ್ಚಾ ಕಾರ್ಯಕರ್ತರು ಮಂಗಳವಾರ ನಗರದಲ್ಲಿ ಪ್ರತಿಭಟನೆ ನಡೆಸಿದರು.

ಜಿಲ್ಲಾಧಿಕಾರಿ ಕಚೇರಿ ಎದುರು ರಾಹುಲ್ ಗಾಂಧಿ ವಿರುದ್ಧ ಘೋಷಣೆ ಕೂಗಿದ ಪ್ರತಿಭಟನಾಕಾರರು, ಕಾಂಗ್ರೆಸ್ ಪರಿಶಿಷ್ಟ ಜಾತಿ ಮತ್ತು ಪಂಗಡಗಳನ್ನು ಕೇವಲ ಓಟ್‌ಬ್ಯಾಂಕ್ ರಾಜಕಾರಣಕ್ಕಾಗಿ ಮಾತ್ರ ಬಳಸಿಕೊಳ್ಳುತ್ತಿವೆ ಎಂದು ಆರೋಪಿಸಿದರು. ಪ್ರತಿಭಟನೆ ನೇತೃತ್ವ ವಹಿಸಿ ಮಾತನಾಡಿದ ಎಸ್‌ಟಿ ಮೋರ್ಚಾ ಜಿಲ್ಲಾಧ್ಯಕ್ಷ ಎಂ.ಎಂ.ಪರಮೇಶ್ವರ, ಪರಿಶಿಷ್ಟರ ಭಾವನೆಗೆ ವಿರುದ್ಧವಾದ ಹೇಳಿಕೆ ನೀಡಿರುವ ರಾಹುಲ್ ಗಾಂಧಿ ಅವರನ್ನು ಸಂಸತ್ ಸ್ಥಾನದಿಂದ ತಕ್ಷಣ ವಜಾಗೊಳಿಸಬೇಕು. ಲೋಕಸಭೆ ವಿರೋಧ ಪಕ್ಷದ ನಾಯಕನ ಸ್ಥಾನದಲ್ಲಿದ್ದುಕೊಂಡು ದೇಶದ ಬಗ್ಗೆ ಗೌರವಯುತವಾಗಿ ನಡೆದುಕೊಳ್ಳದೆ ವಿದೇಶದಲ್ಲಿ ಅಗೌರವದ ಮಾತುಗಳನ್ನಾಡಿದ್ದಾರೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಪರಿಶಿಷ್ಟ ಜಾತಿ, ಪಂಗಡ, ಆದಿವಾಸಿ, ಹಿಂದುಳಿದ ವರ್ಗಗಳ ಮೀಸಲಾತಿಯನ್ನು ತೆಗೆದು ಹಾಕುವುದಾಗಿ ಅಮೆರಿಕದಲ್ಲಿ ಹೇಳಿಕೆ ನೀಡಿದ್ದು, ಇದು ಸಂವಿಧಾನ ವಿರೋಧಿ ನಡೆಯಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಅಂಬೇಡ್ಕರ್ ಅವರ ಆಶಯಕ್ಕೆ ತಿಲಾಂಜಲಿ ಇಡುವ ಹುನ್ನಾರ ಕಾಂಗ್ರೆಸ್‌ನಲ್ಲಿ ನಡೆಯುತ್ತಿದ್ದು, ಕಳೆದ 50-60 ವರ್ಷಗಳಿಂದ ಶೋಷಿತ ಸಮುದಾಯವನ್ನು ದಿಕ್ಕು ತಪ್ಪಿಸುತ್ತಾ ಬಂದಿದೆ. ಇದೀಗ ಮೀಸಲಾತಿ ತೆಗೆದು ಹಾಕುವುದಾಗಿ ಬಹಿರಂಗ ಹೇಳಿಕೆ ನೀಡುವ ಮೂಲಕ ರಾಹುಲ್ ಗಾಂಧಿ ಕಾಂಗ್ರೆಸ್ ಬಣ್ಣವನ್ನು ಮತ್ತಷ್ಟು ಬಯಲು ಮಾಡಿದ್ದಾರೆ. ಕಾಂಗ್ರೆಸ್‌ಗೆ ಪರಿಶಿಷ್ಟರು, ಆದಿವಾಸಿಗಳು, ಹಿಂದುಳಿದ ವರ್ಗದವರು, ನೊಂದ ಬಡವರು ಕೇವಲ ಮತ ನೀಡುವುದಕ್ಕಾಗಿ ಮಾತ್ರ ಸಾಕು. ಅವರ ಅಭ್ಯುದಯ ಯಾರಿಗೆ ಬೇಕು ಎನ್ನುವ ಮನೋಸ್ಥಿತಿ ಬಹಿರಂಗವಾಗಿದೆ ಎಂದು ಎಂ.ಎಂ.ಪರಮೇಶ್ವರ ಆರೋಪಿಸಿದರು.

ನಂತರ ರಾಹುಲ್ ಗಾಂಧಿ ಸಂಸತ್ ಸದಸ್ಯ ಸ್ಥಾನವನ್ನು ರದ್ದು ಪಡಿಸುವಂತೆ ಒತ್ತಾಯಿಸಿ, ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದರು. ಎಸ್‌ಟಿ ಮೋರ್ಚಾ ರಾಜ್ಯ ಉಪಾಧ್ಯಕ್ಷೆ ಕೆ.ಆರ್.ಮಂಜುಳಾ, ರಾಜ್ಯ ಸದಸ್ಯ ಕೆ.ಆರ್.ಪ್ರಭಾಕರ್, ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ, ಪ್ರಧಾನ ಕಾರ್ಯದರ್ಶಿ ಮಹೇಶ್ ಜೈನಿ, ಮಾಜಿ ಅಧ್ಯಕ್ಷ ರಾಬಿನ್ ದೇವಯ್ಯ, ಎಸ್‌ಟಿ ಮೋರ್ಚಾ ವಿರಾಜಪೇಟೆ ಮಂಡಲ ಅಧ್ಯಕ್ಷ ಮುತ್ತುರಾಜ್, ಕಾರ್ಯಕಾರಣಿ ಸದಸ್ಯ ಅಪ್ಪಾಜಿ, ಎಸ್‌ಸಿ ಮೋರ್ಚಾ ಜಿಲ್ಲಾಧ್ಯಕ್ಷ ಪಿ.ಎಂ.ರವಿ, ನಗರಸಭೆ ಬಿಜೆಪಿ ಸದಸ್ಯರು ಹಾಗೂ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಕೃಷಿ ಕ್ಷೇತ್ರದಿಂದ ಬಹುರಾಷ್ಟ್ರೀಯ ಕಂಪನಿ ಬಹಿಷ್ಕಾರಕ್ಕೆ ಆಗ್ರಹ



ಬಹುರಾಷ್ಟ್ರೀಯ ಕಂಪನಿಗಳನ್ನು ಕೃಷಿ ಕ್ಷೇತ್ರದಿಂದ ಬಹಿಷ್ಕರಿಸುವಂತೆ ಆಗ್ರಹಿಸಿ ಕುಲಾಂತರಿ ವಿರೋಧಿ ಒಕ್ಕೂಟದ ಸದಸ್ಯರು ಚಾಮರಾಜನಗರದಲ್ಲಿ ಪ್ರತಿಭಟನೆ ನಡೆಸಿದರು.

ಚಾಮರಾಜನಗರ, ಸೆ.17-ಬಹುರಾಷ್ಟ್ರೀಯ ಕಂಪನಿಗಳನ್ನು ಕೃಷಿ ಕ್ಷೇತ್ರದಿಂದ ಬಹಿಷ್ಕರಿಸುವಂತೆ ಆಗ್ರಹಿಸಿ ಕುಲಾಂತರಿ ವಿರೋಧಿ ಒಕ್ಕೂಟದಿಂದ ನಗರದಲ್ಲಿ ಮಂಗಳವಾರ ಪ್ರತಿಭಟನೆ ನಡೆಯಿತು.

ನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನ ಎದುರು ಸಮಾವೇಶಗೊಂಡ ಪ್ರತಿಭಟನಾಕಾರರು, ಅಲ್ಲಿಂದ ಭುವನೇಶ್ವರಿ ವೃತ್ತ, ಬಿ.ರಾಚಯ್ಯ ಜೋಡಿರಸ್ತೆ ಮೂಲಕ ಜಿಲ್ಲಾಡಳಿತ ಭವನದವರೆಗೆ ಮೆರವಣಿಗೆ ನಡೆಸಿದರು. ಈ ವೇಳೆ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ದೇಶದ ಪಾರಂಪರಿಕ ಕೃಷಿ ಜ್ಞಾನ, ಹಿರಿಮೆ, ದೃಷ್ಟಿಕೋನ ವಿಸ್ತಾರವಾಗಿದ್ದು, ಇಲ್ಲಿಗೆ ಕುಲಾಂತರಿ ಆಹಾರವನ್ನು ತರಲು ಬಹುರಾಷ್ಟ್ರೀಯ ಕಂಪನಿಗಳು ಪಿತ್ಥೂರಿ ನಡೆಸುತ್ತಿವೆ. ಈ ಮೂಲಕ ಕೃಷಿ, ಸಮಾಜ, ಸಂಸ್ಕೃತಿ ಮತ್ತು ಪರಿಸರ ವಿರೋಧಿ ಕೃತ್ಯ ನಡೆಸಲು ಮುಂದಾಗಿವೆ ಎಂದು ಆರೋಪಿಸಿದರು.

ದೇಶದಲ್ಲಿ ವಸಾಹತು ಸ್ಥಾಪನೆಗೆ ಬಹುರಾಷ್ಟ್ರೀಯ ಕಂಪನಿಗಳಿಗೆ ಅವಕಾಶ ಕಲ್ಪಿಸುತ್ತಿರುವ ಕೇಂದ್ರದ ನಿರ್ಧಾರ ಸರಿಯಲ್ಲ. ಹೀಗಾಗಿ ಕುಲಾಂತರಿ ಕಾಯ್ದೆ ತಿರಸ್ಕರಿಸಿ, ಸಹಜ ಬೇಸಾಯ ಗ್ರಾಪಂಗಳ ಮೂಲಕ ಸ್ಥಾಪಿಸಬೇಕು. ಕರ್ನಾಟಕವನ್ನು ಕುಲಾಂತರಿ ಮುಕ್ತ ರಾಜ್ಯವೆಂದು ಘೋಷಣೆ ಮಾಡಬೇಕು. ದೇಶಕ್ಕೆ ಕುಲಾಂತರಿ ಆಹಾರದ ಸಲುವಾಗಿ ಹೊರರಾಷ್ಟ್ರಗಳಿಂದ ಬರುತ್ತಿರುವ ಹಣಕ್ಕೆ ನಿರ್ಬಂಧ ಹೇರಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ರೈತ ಮುಖಂಡರಾದ ಹೊನ್ನೂರು ಪ್ರಕಾಶ್, ಪರಿಸರವಾದಿ ಪುಣಜನೂರು ದೊರೆಸ್ವಾಮಿ, ಶಿಕ್ಷಣ ತಜ್ಞ ಪ್ರೊ.ಜಿ.ಎಸ್.ಜಯದೇವ, ರಂಗಕರ್ಮಿ ಕೆ.ವೆಂಕಟರಾಜು, ಜೆಎಸ್‌ಬಿ ಪ್ರತಿಷ್ಠಾನದ ಅಧ್ಯಕ್ಷ ಎಸ್.ಶಶಿಕುಮಾರ್ ಇತರರು ಇದ್ದರು.

ಸಂಘದ ಬೈಲಾ ಓದಿ ಬೆವರಿಳಿಸಿದ ಸದಸ್ಯರು

ಟಿಎಪಿಸಿಎಂಎಸ್ ಆಡಳಿತ ಮಂಡಳಿ ವಿರುದ್ಧ ಅವ್ಯವಹಾರ ಆರೋಪ



ಕೊಳ್ಳೇಗಾಲ ಟಿಎಪಿಸಿಎಂಎಸ್ ಆವರಣದಲ್ಲಿ ನಡೆದ ವಾರ್ಷಿಕ ಸಭೆಯಲ್ಲಿ ಆಡಳಿತ ಮಂಡಳಿ ವಿರುದ್ಧ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದರು.

ಕೊಳ್ಳೇಗಾಲ, ಸೆ.17-ಕೊಳ್ಳೇಗಾಲ ಟಿಎಪಿಸಿಎಂಎಸ್ ಆವರಣದಲ್ಲಿ ಮಂಗಳವಾರ ನಡೆದ ಸಂಘದ ವಾರ್ಷಿಕ ಸಭೆಯಲ್ಲಿ ಹಿಂದಿನ ಆಡಳಿತ ಮಂಡಳಿಯ ಅವ್ಯವಹಾರದ ಬಗ್ಗೆ ಪ್ರಸ್ತಾಪಿಸಿದ ಸದಸ್ಯರು, ಸಂಘದ ಬೈಲಾ ಓದಿ ಬೆವರಿಳಿಸಿದರು.

ಸಭೆಯಲ್ಲಿ ಅಸಮಾಧಾನ ಹೊರಹಾಕಿದ ಸಂಘದ ಅಧ್ಯಕ್ಷ ಚಿಕ್ಕಮಾದನಾಯಕ, ಕಳೆ ಕಿಳುವ ಬದಲು ಪೈರನ್ನೇ ಕಿತ್ತು ಹಾಕಿ ಹಗರಣಕ್ಕೆ ಸಾಕ್ಷಿಯಾಗಿದ್ದಾರೆ. ಆಡಳಿತ ಮಂಡಳಿ ಮತ್ತು ನೌಕರರು ಭ್ರಷ್ಟಾಚಾರ ಮಾಡಿದ್ದಾರೆ. ಇವರ ವಿರುದ್ಧ ಕ್ರಮ ಕೈಗೊಳುವಂತೆ ಮನವಿ ಸಲ್ಲಿಸಿದ್ದರೂ ಪೊಲೀಸರು ಹಾಗೂ ಅಧಿಕಾರಿಗಳು ಕ್ರಮಕ್ಕೆ ಮುಂದಾಗಿಲ್ಲ ಎಂದು ಅಸಮಾಧಾನ ಹೊರಹಾಕಿದರು.

ಸದಸ್ಯರ ಆಕ್ರೋಶ: ಸಂಘದ ಬೈಲಾ ನಿಯಮ ಮತ್ತು ಹಲವು ದಾಖಲೆಗಳನ್ನು ಓದುವ ಮೂಲಕ ಆಡಳಿತ ಮಂಡಳಿಯೇ ನಿಬ್ಬೆರಗಾಗುವಂತೆ ಸಂಘದ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದರು. ಸಂಘದಲ್ಲಿ ವ್ಯಾಪಕ ಭ್ರಷ್ಟಾಚಾರದ ನಡೆದಿದೆ ಎಂದು ಆರೋಪಿಸಿದ ಸದಸ್ಯರು, ಆಹಾರ ಇಲಾಖೆ ಹಿಂದಿನ ನಿರ್ದೇಶಕರು, ನಿರೀಕ್ಷಕರನ್ನು ರಕ್ಷಿಸುವ ಕೆಲಸವಾಗಿದೆ. ಎರಡೂವರೆ ವರ್ಷಗಳಿಂದಲ್ಲೂ ಆಡಳಿತ ಮಂಡಳಿ ನಿಷ್ಕ್ರಿಯವಾಗಿದೆ ಎಂದು ತರಾಟೆ ತೆಗೆದುಕೊಂಡರು.

ಸಭೆಯಲ್ಲಿ ಮೊದಲು ಮಾತನಾಡಿದ ಸದಸ್ಯ ಪಾಳ್ಯ ಪರಶಿವ, ಸಂಘದಲ್ಲಿ ಕೋಟ್ಯಾಂತರ ಅವ್ಯವಹಾರದಲ್ಲಿ ಸಿದ್ದರಾಜು ಇನ್ನಿತರರನ್ನು ಬಲಿಪಶು ಮಾಡಲಾಗಿದೆ. ನಿಜಕ್ಕೂ ಅವ್ಯವಹಾರ ಪ್ರಮುಖ ಆರೋಪಿಗಳಾದ ಆಹಾರ ಇಲಾಖೆಯ ಹಿಂದಿನ ನಿರ್ದೇಶಕ ರಾಚಪ್ಪ ಮತ್ತು ನಿರೀಕ್ಷಕರನ್ನು ರಕ್ಷಿಸಲಾಗಿದೆ. ಮೊದಲು ಇವರ ಮೇಲೆ ಕ್ರಮ ಕೈಗೊಳ್ಳಬೇಕಿತ್ತು. ನಿಯಮ ಗಾಳಿಗೆ ತೂರಲಾಗಿದೆ ಎಂದು ಸಂಘದ ಬೈಲಾ ಹಾಗೂ ದಾಖಲೆಗಳನ್ನು ಓದುವ ಮೂಲಕ ಆಡಳಿತ ಮಂಡಳಿಗೆ ಬೆವರಿಳಿಸಿದರು.

ಹಿಂದಿನ ನೌಕರ ಕೃಷ್ಣಶೆಟ್ಟಿಯನ್ನು ವಜಾಗೊಳಿಸಿರುವುದಾಗಿ ನ್ಯಾಯಾಲಯಕ್ಕೆ ತಪ್ಪು ಮಾಹಿತಿ ನೀಡಲಾಗಿದೆ ಎನ್ನುತ್ತಿದ್ದಂತೆ, ಗಣಕ ಯಂತ್ರ ನಿರ್ವಾಹಕ ಮಹದೇವಸ್ವಾಮಿ ಮಾತನಾಡಿ, ಅದು ಕಂಪ್ಯೂಟರ್‌ನಿಂದ ತಪ್ಪಿರಬಹುದು ಎಂದರು. ಇದರಿಂದ ಆಕ್ರೋಶಗೊಂಡ ಸದಸ್ಯ ಬಸವರಾಜು, ಪರಶಿವ, ಕಾರ್ಯದರ್ಶಿ ಹಾಗೂ ಕಂಪ್ಯೂಟರ್ ಆಪರೇಟರ್‌ರನ್ನು ತರಾಟೆ ತೆಗೆದುಕೊಂಡರು. ಸಭೆಯಲ್ಲಿ ಸದಸ್ಯ ಸೋಮಶೇಖರ್, ನೌಕರ ನಾಗೇಂದ್ರಸ್ವಾಮಿ ಮತ್ತಿತರರು ಹಾಜರಿದ್ದರು.

ಸ್ವಚ್ಛತೆಯೇ ಸೇವೆ ಅಭಿಯಾನಕ್ಕೆ ಚಾಲನೆ



ಚಾಮರಾಜನಗರದಲ್ಲಿ ಗಿಡ ನೆಡುವ ಕಾರ್ಯಕ್ರಮಕ್ಕೆ ನಗರಸಭಾ ಅಧ್ಯಕ್ಷ ಎಸ್.ಸುರೇಶ್ ಚಾಲನೆ ನೀಡಿದರು.

ಚಾಮರಾಜನಗರ, ಸೆ.17-ಸ್ವಚ್ಛ ಭಾರತ ಅಭಿಯಾನದ 10ನೇ ವಾರ್ಷಿಕೋತ್ಸವ ಪ್ರಯುಕ್ತ ನಗರಸಭೆ ವತಿಯಿಂದ ಆಯೋಜಿಸಿದ್ದ ಸ್ವಚ್ಛತೆಯೇ ಸೇವೆ-2024 ಅಭಿಯಾನದಡಿ ಗಿಡ ನೆಡುವ ಕಾರ್ಯಕ್ರಮಕ್ಕೆ ನಗರಸಭಾ ಅಧ್ಯಕ್ಷ ಎಸ್.ಸುರೇಶ್ ಚಾಲನೆ ನೀಡಿದರು.

ನಗರದ 10ನೇ ವಾರ್ಡ್‌ನ ಕರಿನಂಜನಪುರ ರಸ್ತೆಯಲ್ಲಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ಹುಟ್ಟುಹಬ್ಬದ ದಿನದಂದು ನಗರಸಭೆ ಸ್ವಚ್ಛತೆಯೇ ಸೇವೆ ಅಭಿಯಾನದಡಿ ಒಂದು ಗಿಡ ತಾಯಿ ಹೆಸರಿನಲ್ಲಿ ನೆಡುವ ಕಾರ್ಯಕ್ರಮ ಹಮ್ಮಿಕೊಂಡಿರುವುದು ಬಹಳ ಅರ್ಥಪೂರ್ಣವಾಗಿದೆ. ಈ ಕಾರ್ಯಕ್ರಮ ನಗರದ ಸ್ವಚ್ಛತೆಗೆ ಪೂರಕವಾಗಿದ್ದು, ಎಲ್ಲಾ 31 ವಾರ್ಡ್‌ಗಳಲ್ಲೂ ಸ್ವಚ್ಛತೆಗೆ ಒತ್ತು ನೀಡಲಾಗುವುದು ಎಂದರು. ಕಾರ್ಯಕ್ರಮದಲ್ಲಿ ನಗರಸಭಾ ಉಪಾಧ್ಯಕ್ಷೆ ಮಮತಾ ಬಾಲಸುಬ್ರಹ್ಮಣ್ಯಂ, ಸದಸ್ಯರಾದ ಮನೋಜ್ ಪಟೇಲ್, ಚಿನ್ನಮ್ಮ, ಪೌರಾಯುಕ್ತ ರಾಮದಾಸ್, ಪರಿಸರ ಅಭಿಯಂತರಾದ ಸುಷ್ಮಾ, ಹಿರಿಯ ಆರೋಗ್ಯ ನಿರೀಕ್ಷಕ ಮಂಜುನಾಥ್, ಕಿರಿಯ ಆರೋಗ್ಯ ನಿರೀಕ್ಷಕಿ ಪುಷ್ಪಾ, ಮುಖಂಡ ಕೇಶವಮೂರ್ತಿ ಇತರರು ಹಾಜರಿದ್ದರು.

ಇಂದಿನಿಂದ ರಾಜ್ಯಮಟ್ಟದ ವೈದ್ಯಕೀಯ ಸಮ್ಮೇಳನ



ಸುದ್ದಿಗೋಷ್ಠಿಯಲ್ಲಿ ಸಿಮ್ಸ್‌ನ ತುರ್ತು ವೈದ್ಯಕೀಯ ವಿಭಾಗದ ಮುಖ್ಯಸ್ಥ ಡಾ.ಕೆ.ಬಿ.ಅಭಿಷೇಕ್ ಮಾತನಾಡಿದರು.

ಚಾಮರಾಜನಗರ, ಸೆ.17-ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಿಂದ ಸೆ.18ರಿಂದ 21ರವರೆಗೆ ನಗರದಲ್ಲಿ ರಾಜ್ಯ ಮಟ್ಟದ 4ನೇ ವಾರ್ಷಿಕ ತುರ್ತು ವೈದ್ಯಕೀಯ ಸಮ್ಮೇಳನ ಆಯೋಜಿಸಲಾಗಿದೆ ಎಂದು ಸಿಮ್ಸ್‌ನ ತುರ್ತು ವೈದ್ಯಕೀಯ ವಿಭಾಗದ ಮುಖ್ಯಸ್ಥ ಡಾ.ಕೆ.ಬಿ.ಅಭಿಷೇಕ್ ತಿಳಿಸಿದರು.

ನಗರದ ಜಿಲ್ಲಾ ಸಾರ್ವಜನಿಕ ಆಸ್ಪತ್ರೆಯಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮ್ಮೇಳನವನ್ನು ನಗರದ ಅಂಬೇಡ್ಕರ್ ಭವನದಲ್ಲಿ ಆಯೋಜಿಸಲಾಗಿದೆ. ಜಿಲ್ಲಾಧಿಕಾರಿ ಶಿಲ್ಪನಾಗ್, ಬೆಂಗಳೂರಿನ ಎಂ.ಎಸ್.ರಾಮಯ್ಯ ಆಸ್ಪತ್ರೆ ಮುಖ್ಯಸ್ಥರಾದ ಡಾ.ಅರುಣಾ ಸಿ.ರಮೇಶ್ ಇತರರು ಭಾಗವಹಿಸಲಿದ್ದಾರೆ ಎಂದರು.

ಸಮ್ಮೇಳನದಲ್ಲಿ ತಮಿಳುನಾಡು, ಕೇರಳ, ಆಂಧ್ರಪ್ರದೇಶ, ಮಹಾರಾಷ್ಟ್ರದಿಂದ 170ಕ್ಕೂ ಹೆಚ್ಚು ವೈದ್ಯರು ಭಾಗವಹಿಸಲಿದ್ದಾರೆ. ಬೆಂಗಳೂರಿನಲ್ಲಿ 2 ಬಾರಿ ಹಾಗೂ ಮೈಸೂರಿನಲ್ಲಿ ಒಂದು ಬಾರಿ ಸಮ್ಮೇಳನ ನಡೆದಿತ್ತು. ಚಾಮರಾಜನಗರದಲ್ಲಿ ಇದು 4ನೇ ಸಮ್ಮೇಳನವಾಗಿದೆ. ಸ್ಟಾಫ್ ನರ್ಸ್ ಸೇರಿದಂತೆ ಇತರರಿಗೆ 5 ಕಾರ್ಯಾಗಾರ ಆಯೋಜಿಸಲಾಗಿದೆ. ಸಮ್ಮೇಳನದಲ್ಲಿ ರಾಜ್ಯದ 45ಕ್ಕೂ ಹೆಚ್ಚು ಸಂಸ್ಥೆಗಳು ಪಾಲ್ಗೊಳ್ಳಲಿವೆ. ಸಂಪನ್ಮೂಲ ನಿಯಮಿತ ಪರಿಸರದಲ್ಲಿ ತುರ್ತು ವೈದ್ಯಕೀಯ ಚಿಕಿತ್ಸೆ ಎಂಬುದು ಸಮ್ಮೇಳನದ ಮುಖ್ಯ ಉದ್ದೇಶವಾಗಿದೆ ಎಂದು ಮಾಹಿತಿ ನೀಡಿದರು.

ಸಿಮ್ಸ್ ಬೋಧನಾ ಆಸ್ಪತ್ರೆ ಪ್ರತ್ಯೇಕ ತುರ್ತು ವೈದ್ಯಕೀಯ ವಿಭಾಗ ಹೊಂದಿರುವ ಏಕೈಕ ಸರ್ಕಾರಿ ಕಾಲೇಜು ಎಂಬ ಹೆಗ್ಗಳಿಕೆಗೆ ಭಾಜನವಾಗಿದೆ. ತುರ್ತು ವೈದ್ಯಕೀಯ ಚಿಕಿತ್ಸೆ ಹಾಗೂ ಉತ್ತಮ ಆರೈಕೆ ನೀಡುವಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿಕೊಂಡು ಜಿಲ್ಲೆಯ ಆರೋಗ್ಯವನ್ನು ಉನ್ನತಗೊಳಿಸುವ ನಿಟ್ಟಿನಲ್ಲಿ ಪ್ರಮುಖ ಪಾತ್ರವಹಿಸಿದೆ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಸಿಮ್ಸ್‌ನ ಮೂಳೆ-ಕೀಲು ವಿಭಾಗದ ಮುಖ್ಯಸ್ಥ ಡಾ.ಮಾರುತಿ, ಸಿಮ್ಸ್‌ನ ಸ್ಥಾನಿಕ ವೈದ್ಯಾಧಿಕಾರಿ ಡಾ.ಮಹೇಶ್ ಇದ್ದರು.

ಕೆಲ್ಲಂಬಳ್ಳಿಯಲ್ಲಿ ಸ್ವಚ್ಛತಾ ಸೇವಾ ಹೀ ಆಂದೋಲನ



ಸ್ವಚ್ಛತಾ ಹೀ ಸೇವಾ ಆಂದೋಲನಕ್ಕೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಚಾಲನೆ ನೀಡಿದರು.

ಚಾಮರಾಜನಗರ, ಸೆ.17-ಸಾರ್ವಜನಿಕರಿಗೆ ಶುಚಿತ್ವ, ನೈರ್ಮಲ್ಯ ಕುರಿತು ವ್ಯಾಪಕ ಅರಿವು ಮೂಡಿಸಲು ಜಿಲ್ಲೆಯಾದ್ಯಂತ ಹಮ್ಮಿಕೊಂಡಿರುವ ಸ್ವಚ್ಛತಾ ಹೀ ಸೇವಾ ಆಂದೋಲನಕ್ಕೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಚಾಲನೆ ನೀಡಿದರು.

ತಾಲೂಕಿನ ಕೆಲ್ಲಂಬಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ಜಿಪಂ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ತಾಪಂ ಹಾಗೂ ಭೋಗಾಪುರ ಗ್ರಾಪಂ ಸಹಯೋಗದಲ್ಲಿ ಸ್ವಭಾವ ಸ್ವಚ್ಛತಾ-ಸಂಸ್ಕಾರ ಸ್ವಚ್ಛತಾ ಧ್ಯೇಯೋದ್ದೇಶದೊಂದಿಗೆ ಆಯೋಜಿಸಿದ್ದ ಸ್ವಚ್ಛತಾ ಹೀ ಸೇವಾ ಆಂದೋಲನ ಪಾಕ್ಷಿಕ ಆಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಜಿಪಂ ಸಿಇಓ ಮೋನಾ ರೋತ್, ಗ್ರಾಪಂ ಸದಸ್ಯ ಸೋಮಶೇಖರ್ ಮಾತನಾಡಿದರು. ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕಾಧಿಕಾರಿ ಪೂರ್ಣಿಮಾ ಸ್ವಚ್ಛತೆ ಕುರಿತು ಪ್ರತಿಜ್ಞಾವಿಧಿ ಬೋಧಿಸಿದರು. ಗ್ರಾಪಂ ಅಧ್ಯಕ್ಷೆ ರೂಪಾ, ಜಿಪಂ ಉಪ ಕಾರ್ಯದರ್ಶಿ ಪಿ.ಲಕ್ಷ್ಮೀ, ಗ್ರಾಪಂ ಅಭಿವೃದ್ಧಿ ಅಧಿಕಾರಿ ಮಾನಸ, ಸಬ್ ಇನ್ಸ್‌ಪೆಕ್ಟರ್ ಕುಮುದಾ, ಗ್ರಾಪಂ ಸದಸ್ಯರು, ಶಾಲಾ ಶಿಕ್ಷಕರು, ಎಸ್‌ಡಿಎಂಸಿ ಅಧ್ಯಕ್ಷರು ಉಪಸ್ಥಿತರಿದ್ದರು.

ಬೇಗೂರಿನಲ್ಲಿ ಪ್ರಜಾಪ್ರಭುತ್ವ ಜಾಗೃತಿ...



ಬೇಗೂರು ಗ್ರಾಮದ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯಲ್ಲಿ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ಮಾನವ ಸರಪಳಿ ನಿರ್ಮಿಸಿ, ಪ್ರಜಾಪ್ರಭುತ್ವ ಮಹತ್ವ ಹಾಗೂ ಮೌಲ್ಯಗಳ ಕುರಿತ ಜಾಗೃತಿ ಮೂಡಿಸಿದರು.

ಕೆ.ಪ್ರಭಾಕರ ಶೆಟ್ಟಿ ನಿಧನ



ಗುಂಡ್ಲುಪೇಟೆ, ಸೆ.17-ಪಟ್ಟಣದ ನಿವಾಸಿ ಕೆ.ಪ್ರಭಾಕರ ಶೆಟ್ಟಿ (69) ಮಂಗಳವಾರ ಮುಂಜಾನೆ ನಿಧನರಾದರು. ಮೃತರು ಪತ್ನಿ, ಪುರಸಭೆ ಸದಸ್ಯ ಶಶಿಧರ್ ದೀಪು ಸೇರಿದಂತೆ ಇಬ್ಬರು ಪುತ್ರರು, ಪುತ್ರಿ ಹಾಗೂ ಅಪಾರ ಬಂಧು-ಬಳಗ ಅಗಲಿದ್ದಾರೆ. ಬುಧವಾರ ಸಂಜೆ 4 ಗಂಟೆಗೆ ಪಟ್ಟಣದ ಹಿಂದೂ ಚಿತಾಗಾರದಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಂತಾಪ: ಶಾಸಕ ಹೆಚ್.ಎಂ.ಗಣೇಶ್‌ಪ್ರಸಾದ್, ಚಾಮುಲ್ ನಿರ್ದೇಶಕ ಹೆಚ್.ಎಸ್.ನಂಜುಂಡಪ್ರಸಾದ್, ಹಿರಿಯ ಪತ್ರಕರ್ತ ಸೋಮಶೇಖರ್ ಮತ್ತಿತರರು ಸಂತಾಪ ಸೂಚಿಸಿದ್ದಾರೆ.

ಗಜಪಡೆಗೆ ಮರದ ಅಂಬಾರಿ ಹೊರಿಸುವ ತಾಲೀಮಿಗೆ ಇಂದು ಚಾಲನೆ

ಕ್ಯಾಪ್ಟನ್ ಅಭಿಮನ್ಯು ಜೊತೆಗೆ ಇನ್ನು 5 ಆನೆಗಳಿಗೂ ಮರದ ಅಂಬಾರಿ ಹೊರುವ ತರಬೇತಿ




ಅರಮನೆ ಆವರಣದಲ್ಲಿ ಮಂಗಳವಾರ ಗಜಪಡೆ ತಾಲೀಮು ನಡೆಯಿತು.

ಮೈಸೂರು,ಸೆ.17(ಪಿಎಂ)– ದಸರಾ ಉತ್ಸವಕ್ಕೆ ದಿನಗಣನೆ ಆರಂಭವಾಗಿರುವ ಹಿನ್ನೆಲೆಯಲ್ಲಿ ಸೆ.18ರಂದು ಗಜಪಡೆಗೆ ಮರದ ಅಂಬಾರಿ ಹೊರಿಸುವ ತಾಲೀಮು ಆರಂಭಿಸಲಾಗುತ್ತಿದೆ. ಸಂಜೆ 4ಕ್ಕೆ ಗಜಪಡೆ ಕ್ಯಾಪ್ಟನ್ ಅಭಿಮನ್ಯುವಿಗೆ ಮರದ ಅಂಬಾರಿ ಹೊರಿಸಲಾಗುತ್ತಿದೆ.

ಮೈಸೂರು ಅರಮನೆ ಆವರಣದ ಗಜಪಡೆ ಶಿಬಿರದಲ್ಲಿ ಪೂಜಾ ವಿಧಿವಿಧಾನಗಳನ್ನು ನಡೆಸಿ ಅಭಿಮನ್ಯು ಮೇಲೆ ಮರದ ಅಂಬಾರಿ ಕಟ್ಟಿ ತಾಲೀಮು ನಡೆಸಲಾಗುತ್ತದೆ. ಅರಮನೆಯ ರಾಜವಂಶಸ್ಥರ ನಿವಾಸದ ಬಳಿ ಕ್ರೇನ್ ಸಹಾಯದಿಂದ ಅಭಿಮನ್ಯು ಮೇಲೆ ಮರದ ಅಂಬಾರಿ ಕಟ್ಟಲಾಗುತ್ತದೆ.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಮೈಸೂರು ಉಪಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ ವಿಭಾಗ) ಡಾ.ಐ.ಬಿ.ಪ್ರಭುಗೌಡ, ಮೊದಲ ದಿನ ಅಭಿಮನ್ಯುಗೆ ಮರದ ಅಂಬಾರಿ ಹೊರಿಸುವ ತಾಲೀಮು ನಡೆಸಲಾಗುವುದು. ಇದಲ್ಲದೆ, ಪರ್ಯಾಯವಾಗಿ ಇನ್ನು ಐದು ಆನೆಗಳಿಗೂ ಮಾರನೇ ದಿನದಿಂದ ಮರದ ಅಂಬಾರಿ ಹೊರುವ ತರಬೇತಿ ನೀಡಲಾಗುವುದು. ಮಹೇಂದ್ರ, ಧನಂಜಯ, ಸುಗ್ರೀವ, ಗೋಪಿ ಮತ್ತು ಭೀಮ ಆನೆಗಳು ಮರದ ಅಂಬಾರಿ ಹೊರುವ ತರಬೇತಿ ಪಡೆಯುವ ಪರ್ಯಾಯ ಆನೆಗಳಾಗಿವೆ ಎಂದು ತಿಳಿಸಿದರು.



ಮರದ ಅಂಬಾರಿ ತಾಲೀಮಿನ ಸಂಗ್ರಹ ಚಿತ್ರ

ತಾಲೀಮು: ಮಂಗಳವಾರ ಸಂಜೆ ಅರಮನೆ ಆವರಣ ಹಾಗೂ ಸಯ್ಯಾಜಿ ರಾವ್ ರಸ್ತೆಯಲ್ಲಿ ಗಜಪಡೆ ತಾಲೀಮು ನಡೆಯಿತು. ಅರಮನೆ ಉತ್ತರ ದ್ವಾರದ ಮೂಲಕ ಕೆಆರ್ ವೃತ್ತದ ಮಾರ್ಗವಾಗಿ ಸರ್ಕಾರಿ ಆಯುರ್ವೇದ ಕಾಲೇಜು ವೃತ್ತದವರೆಗೆ ಗಜಪಡೆಯ ತಾಲೀಮು ನಡೆಸಲಾಯಿತು. ಅಭಿಮನ್ಯು, ಧನಂಜಯ, ಗೋಪಿ, ಭೀಮ, ಕಂಜನ್, ರೋಹಿತ್, ಏಕಲವ್ಯ, ವರಲಕ್ಷ್ಮೀ, ಲಕ್ಷ್ಮೀ, ಪ್ರಶಾಂತ, ಮಹೇಂದ್ರ, ಸುಗ್ರೀವ, ಲಕ್ಷ್ಮೀ ಮತ್ತು ಹಿರಣ್ಯ ಆನೆಗಳು ತಾಲೀಮಿನಲ್ಲಿ ಪಾಲ್ಗೊಂಡಿದ್ದವು.

ಸಂಭ್ರಮದ ರೈತ ದಸರಾಕ್ಕೆ ಭರದ ಸಿದ್ಧತೆ

ಅ.5ರಂದು ಕೃಷಿ ಸಚಿವ ಚಲುವರಾಯಸ್ವಾಮಿ ಅವರಿಂದ ಚಾಲನೆ

ಮೈಸೂರು, ಸೆ.17(ಎಸ್‌ಪಿಎನ್)– ಮೈಸೂರು ದಸರಾ ಮಹೋತ್ಸವ–2024ರ ಅಂಗವಾಗಿ ಜಿಲ್ಲಾಮಟ್ಟದಲ್ಲಿ ನಡೆಯುವ 'ರೈತ ದಸರಾ' ಕಾರ್ಯಕ್ರಮವನ್ನು ಮೂರು ದಿನ ವಿಶಿಷ್ಟ ರೀತಿ ಆಚರಣೆಗೆ ಜಿಲ್ಲಾಡಳಿತ ಮುಂದಾಗಿದ್ದು, ಇದರ ಅಂಗವಾಗಿ ಅ.5ರಂದು ಬೆಳಗ್ಗೆ 11ಕ್ಕೆ ಜೆ.ಕೆ.ಗ್ರೌಂಡ್ಸ್‌ನ ಮೈಸೂರು ಮೆಡಿಕಲ್ ಕಾಲೇಜು ಅಲೂಮ್ನಿ ಅಸೋಷಿಯೇಷನ್ ಸಭಾಂಗಣದಲ್ಲಿ ಕೃಷಿ ಸಚಿವ ಎನ್.ಚೆಲುವರಾಯಸ್ವಾಮಿ ಉದ್ಘಾಟಿಸಲಿದ್ದಾರೆ.

ಇದಕ್ಕೂ ಮುನ್ನ ಬೆಳಗ್ಗೆ 9.30ಕ್ಕೆ ರೈತ ದಸರಾ ಮೆರವಣಿಗೆಯನ್ನು ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಜೆ.ಕೆ.ಮೈದಾನದವರೆಗೆ ಏರ್ಪಡಿಸಲಾಗಿದೆ. ಎತ್ತಿನಬಂಡಿ, ಜಾನಪದ ಕಲಾತಂಡ ಹಾಗೂ ಆಧುನಿಕ ಕೃಷಿ ಯಂತ್ರೋಪಕರಣಗಳ ಮೆರವಣಿಗೆಯೊಂದಿಗೆ ಚಾಲನೆ ಸಿಗಲಿದ್ದು, ಈ ವೇಳೆ ಶಾಸಕ ಟಿ.ಎಸ್.ಶ್ರೀವತ್ಸ ಹರೀಶ್‌ಗೌಡ ಸೇರಿದಂತೆ ವಿವಿಧ ನಿಗಮ–ಮಂಡಳಿ ಅಧ್ಯಕ್ಷರು, ಸದಸ್ಯರು, ರೈತದಸರಾ ಸಮಿತಿ ಅಧ್ಯಕ್ಷರು, ಸದಸ್ಯರು ಉಪಸ್ಥಿತರಿರುತ್ತಾರೆ ಎಂದು ಮೈಸೂರು ಜಿಪಂ ಉಪ ಕಾರ್ಯದರ್ಶಿ ಡಾ.ಕೃಷ್ಣಂರಾಜು(ಅಭಿವೃದ್ಧಿ) 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಅಂದು ಕೃಷಿ ಮತ್ತು ಕೃಷಿ ಸಂಬಂಧಿತ ಇಲಾಖೆಗಳಿಂದ ವಸ್ತುಪ್ರದರ್ಶನವನ್ನು ಪಶು ಸಂಗೋಪನಾ ಹಾಗೂ ರೇಷ್ಮೆ ಖಾತೆ ಸಚಿವ ಕೆ.ವೆಂಕಟೇಶ್ ನೆರವೇರಿಸಲಿದ್ದು, ಮತ್ಸ್ಯಮೇಳದ ಉದ್ಘಾಟನೆಯನ್ನು ಮೀನುಗಾರಿಕೆ ಹಾಗೂ ಬಂದರು ಖಾತೆ ಸಚಿವ ಮಂಕಾಳ ವೈದ್ಯ ನೆರವೇರಿಸಲಿದ್ದಾರೆ.

ಮೈಸೂರು ಮೆಡಿಕಲ್ ಕಾಲೇಜು ಅಲೂಮ್ನಿ ಅಸೋಷಿಯೇಷನ್ ಸಭಾಂಗಣದಲ್ಲಿ ಬೆಳಗ್ಗೆ 11.15ಕ್ಕೆ ರೈತ ದಸರಾ ವೇದಿಕೆ ಕಾರ್ಯಕ್ರಮದಲ್ಲಿ ರೈತರು, ರೈತ ಮಹಿಳೆಯರು, ವಿಜ್ಞಾನಿಗಳು, ಯುವ ರೈತರು ಹಾಗೂ ಅತ್ಯುತ್ತಮ ವಿಸ್ತರಣಾ ಕಾರ್ಯಕರ್ತರಿಗೆ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಸನ್ಮಾನಿಸಲಿದ್ದಾರೆ. ಹಾಗೂ ಪ್ರಗತಿಪರ ರೈತರಿಂದ ವೈಜ್ಞಾನಿಕ ಕೃಷಿ ಕುರಿತು ಅನಿಸಿಕೆಗಳನ್ನು ವ್ಯಕ್ತಪಡಿಸಲಿದ್ದಾರೆ. ನಂತರ 12.30ಕ್ಕೆ ಸಮಗ್ರ ಕೃಷಿ ಪದ್ಧತಿಯಿಂದ ಸ್ವಾವಲಂಬಿ ಕೃಷಿ ಕುರಿತು ತಜ್ಞರಿಂದ ಮಾಹಿತಿ ಹಾಗೂ ಕೃಷಿಯಲ್ಲಿ ಖುಷಿ ಕಂಡ ಮೂವರು ರೈತ ದಂಪತಿಗಳಿಂದ ಕೃಷಿ ಅನುಭವ ವ್ಯಕ್ತಪಡಿಸಲಿದ್ದಾರೆ.

ಅ.5ರಂದು ಮಧ್ಯಾಹ್ನ 3 ಗಂಟೆಗೆ ಹಾಸ್ಯಕಲಾವಿದ ಪ್ರಾಣೇಶ್ ಮತ್ತು ತಂಡದವರಿಂದ ರೈತ ಹಾಸ್ಯೋತ್ಸವ ಕಾರ್ಯಕ್ರಮ ಜರುಗಲಿದೆ. ಕಾರ್ಯಕ್ರಮದಲ್ಲಿ ಸಚಿವರಾದ ಎನ್.ಚೆಲುವರಾಯ ಸ್ವಾಮಿ, ಕೆವೆಂಕಟೇಶ್, ಎಸ್.ಎಸ್.ಮಲ್ಲಿಕಾರ್ಜುನ, ಈಶ್ವರ್ ಖಂಡ್ರೆ, ಮಂಕಾಳ ವೈದ್ಯ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಮುದ್ದು ಪ್ರಾಣಿಗಳ ಪ್ರದರ್ಶನ: ಅ.6ರಂದು ನಡೆಯುವ 'ಮುದ್ದು ಪ್ರಾಣಿಗಳ ಪ್ರದರ್ಶನ ಸ್ಪರ್ಧೆಗೆ ಪಶು ಸಂಗೋಪನಾ ಹಾಗೂ ರೇಷ್ಮೆ ಸಚಿವ ಕೆ.ವೆಂಕಟೇಶ್ ಚಾಲನೆ ನೀಡಲಿದ್ದು, ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಪ್ರಮಾಣ ಪತ್ರ ವಿತರಣೆ ಮಾಡಲಿದ್ದು, ಶಾಸಕ ಕೆ.ಹರೀಶ್‌ಗೌಡ ಇತರೆ ಜನಪ್ರತಿನಿಧಿಗಳು ಉಪಸ್ಥಿತರಿರುತ್ತಾರೆ. ಈ ಸ್ಪರ್ಧೆಯಲ್ಲಿ ಭಾಗವಹಿಸುವವರು ಸೆ.20ರಿಂದ ಅ.1ರವರೆಗೆ ಜಿಲ್ಲಾ ಪಶು ಸಂಗೋಪನಾ ಇಲಾಖೆಗೆ ಅರ್ಜಿ ಸಲ್ಲಿಸಬಹುದು.

ರಾಜ್ಯಮಟ್ಟದ ಹಾಲು ಕರೆಯುವ ಸ್ಪರ್ಧೆ: ಅ.7ರಂದು ರೈತ ದಸರಾ ಅಂಗವಾಗಿ ರಾಜ್ಯ ಮಟ್ಟದ ಹಾಲು ಕರೆಯುವ ಸ್ಪರ್ಧೆಗೆ ಬೆಳಗ್ಗೆ 6.30ಕ್ಕೆ ಚಾಲನೆ ನೀಡಲಿದ್ದು, ಈ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಸಂಜೆ 5.30ಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಪಶು ಸಂಗೋಪನಾ ಹಾಗೂ ರೇಷ್ಮೆ ಖಾತೆ ಸಚಿವ ಕೆ.ವೆಂಕಟೇಶ್, ಶಾಸಕ ಕೆ. ಹರೀಶ್‌ಗೌಡ ಉಪಸ್ಥಿತಿಯಲ್ಲಿ ಬಹುಮಾನ ವಿತರಣೆ ಮಾಡಲಿದ್ದಾರೆ. ಈ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆದವರಿಗೆ ಲಕ್ಷ ರೂ. ನಗದು, ದ್ವಿತೀಯ ಸ್ಥಾನ ಪಡೆದವರಿಗೆ 80 ಸಾವಿರ, ತೃತೀಯ ಸ್ಥಾನ ಪಡೆದವರಿಗೆ 60 ಸಾವಿರ ಹಾಗೂ ಸಮಾಧಾನಕರ ಬಹುಮಾನ ಪಡೆದವರಿಗೆ 40 ಸಾವಿರ ರೂ.ಗಳ ನಗದು ಬಹುಮಾನ ಇರಲಿದೆ. ಈ ಸ್ಪರ್ಧೆಯಲ್ಲಿ ಭಾಗವಹಿಸುವವರು ಸೆ.20ರಿಂದ ಅ.1ರವರೆಗೆ ಜಿಲ್ಲಾ ಪಶು ಸಂಗೋಪನಾ ಇಲಾಖೆಗೆ ಅರ್ಜಿ ಸಲ್ಲಿಸಬಹುದು ಎಂದು ಮಾಹಿತಿ ನೀಡಿದರು.

ದೆಹಲಿ ಸಿಎಂ ಸ್ಥಾನಕ್ಕೆ ಕೇಜ್ರಿವಾಲ್ ರಾಜೀನಾಮೆ; ಅತಿಶಿ ನೂತನ ಸಿಎಂ

ನವದೆಹಲಿ: ಅಬಕಾರಿ ನೀತಿ ಹಗರಣದಲ್ಲಿ ಆರು ತಿಂಗಳು ಜೈಲುವಾಸ ಮುಗಿಸಿ ಜಾಮೀನಿನ ಮೇಲೆ ಬಿಡುಗಡೆಯಾಗಿರುವ ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಮಂಗಳವಾರ ಸಂಜೆ ಲೆಫ್ಟಿನೆಂಟ್ ಗವರ್ನರ್ ವಿಕೆ ಸಕ್ಸೇನಾ ಅವರನ್ನು ಭೇಟಿಯಾಗಿ ರಾಜೀನಾಮೆ ಸಲ್ಲಿಸಿದ್ದಾರೆ.

ಎಎಪಿ ರಾಷ್ಟ್ರೀಯ ಸಂಚಾಲಕರೂ ಆದ ಅರವಿಂದ್ ಕೇಜ್ರಿವಾಲ್, ಇಂದು ಸಂಜೆ 4.30ಕ್ಕೆ, ನಿಯೋಜಿತ ಮುಖ್ಯಮಂತ್ರಿ ಅತಿಶಿ ಸೇರಿದಂತೆ ಅವರ ಕ್ಯಾಬಿನೆಟ್ ಸಹೋದ್ಯೋಗಿಗಳೊಂದಿಗೆ ರಾಜಭವನಕ್ಕೆ ಆಗಮಿಸಿ ರಾಜೀನಾಮೆ ಸಲ್ಲಿಸಿದರು.

ನಂತರ ಸಚಿವೆ ಅತಿಶಿ ಅವರು ಸಕ್ಸೇನಾ ಅವರನ್ನು ಭೇಟಿಯಾಗಿ, ದೆಹಲಿಯಲ್ಲಿ ಹೊಸ ಸರ್ಕಾರ ರಚಿಸಲು ಹಕ್ಕು ಮಂಡಿಸಿದರು ಎಂದು ಎಎಪಿ ನಾಯಕ ಗೋಪಾಲ್ ರೈ ಹೇಳಿದ್ದಾರೆ.

ಅತಿಶಿ ಅವರು ದೆಹಲಿ ಸಿಎಂ ಆಗುತ್ತಿರುವ ಮೂರನೇ ಮಹಿಳೆ ಮತ್ತು ಸಿಎಂ ಸ್ಥಾನ ಅಲಂಕರಿಸುತ್ತಿರುವ ಅತ್ಯಂತ ಕಿರಿಯ ಮಹಿಳೆ ಎಂಬ ಗೌರವಕ್ಕೆ ಪಾತ್ರರಾಗಿದ್ದಾರೆ. ಅಲ್ಲದೆ ಪಶ್ಚಿಮ ಬಂಗಾಳದ ಮಮತಾ ಬ್ಯಾನರ್ಜಿ ನಂತರ ಅತಿಶಿ(43) ಅವರು ದೇಶದ ಎರಡನೇ ಪ್ರಸ್ತುತ ಮಹಿಳಾ ಮುಖ್ಯಮಂತ್ರಿಯಾಗಲಿದ್ದಾರೆ.

ಅತಿಶಿ ಮರ್ಲೆನಾ ಯಾರು?: ಮಾಜಿ ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಅವರು ಅಬಕಾರಿ ನೀತಿ ಪ್ರಕರಣದಲ್ಲಿ ಜೈಲು ಪಾಲಾದ ಬಳಿಕ ಶಾಸಕಿ ಅತಿಶಿ ಸಿಂಗ್ ಅವರು ಎಎಪಿಯ ಮುಂಚೂಣಿ ನಾಯಕಿಯಾಗಿ ಕಾಣಿಸಿಕೊಂಡಿದ್ದರು.



ಕೇಜ್ರಿವಾಲ್ ರಾಜೀನಾಮೆ ಬೆನ್ನಹಿಂದೆಯೇ ನಿಯೋಜಿತ ಮುಖ್ಯಮಂತ್ರಿ ಅತಿಶಿ ಲೆಫ್ಟಿನೆಂಟ್ ಗವರ್ನರ್ ವಿ.ಕೆ.ಸಕ್ಸೆನಾ ಅವರಲ್ಲಿ ಸರ್ಕಾರ ರಚನೆ ಹಕ್ಕು ಮಂಡಿಸಿದರು

2015–2018ರವರೆಗೆ ಮನೀಶ್ ಸಿಸೋಡಿಯಾಗೆ ಸಲಹೆಗಾರರಾಗಿ ಕೆಲಸ ಮಾಡಿದ್ದ ಅತಿಶಿ ಅವರನ್ನು 2023ರಲ್ಲಿ ದಿಲ್ಲಿ ಸರ್ಕಾರದಲ್ಲಿ ಶಿಕ್ಷಣ, ಪಿಡಬ್ಲ್ಯುಡಿ, ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಸಚಿವರಾಗಿ ನೇಮಕ ಮಾಡಲಾಗಿತ್ತು.

1981ರ ಜೂ.8ರಂದು ವಿಜಯ್ ಸಿಂಗ್ ಮತ್ತು ತ್ರಿಪ್ತಾ ದಂಪತಿಯ ಪುತ್ರಿಯಾಗಿ ಜನಿಸಿದ್ದ ಅತಿಶಿ ಅವರ ಪೂರ್ಣ ಹೆಸರು ಅತಿಶಿ ಮರ್ಲೆನಾ ಸಿಂಗ್. ಅವರ ತಂದೆ–ತಾಯಿ ಇಬ್ಬರೂ ಪ್ರಾಧ್ಯಾಪಕರಾಗಿದ್ದರು. ಆದರೆ ಅವರು 2018ರಿಂದ ರಾಜಕೀಯದಲ್ಲಿ ಸಕ್ರಿಯವಾಗುತ್ತಿದ್ದಂತೆ ತಮ್ಮ ಹೆಸರನ್ನು ಹೆಚ್ಚಾಗಿ ಅತಿಶಿ ಎಂದೇ ಉಲ್ಲೇಖಿಸುತ್ತಿದ್ದರು. ಇವರು ಸ್ನಾತಕೋತ್ತರ ಪದವೀಧರೆ.

2013 ರಲ್ಲಿ ಆಮ್ ಆದ್ಮಿ ಪಕ್ಷದೊಂದಿಗೆ ತಮ್ಮ ರಾಜಕೀಯ ಜೀವನವನ್ನು ಆರಂಭಿಸಿದ್ದ ಅತಿಶಿ ಎಎಪಿ ಪಕ್ಷದ ನೀತಿ ನಿರೂಪಣೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. 2015 ರಲ್ಲಿ ಮಧ್ಯಪ್ರದೇಶದ ಖಾಂಡ್ವಾ ಜಿಲ್ಲೆಯಲ್ಲಿ ನಡೆದಿದ್ದ ಐತಿಹಾಸಿಕ ಜಲ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. ನಂತರದ ಪ್ರತಿಭಟನೆಗಳು ಮತ್ತು ಕಾನೂನು ಹೋರಾಟದಲ್ಲಿ ಎಎಪಿ ನಾಯಕ ಅಲೋಕ್ ಅಗರ್ವಾಲ್ ಅವರಿಗೆ ಬೆಂಬಲ ನೀಡಿದ್ದರು.

2019ರಲ್ಲಿ ಪೂರ್ವ ದಿಲ್ಲಿ ಲೋಕಸಭಾ ಕ್ಷೇತ್ರದಿಂದ ಬಿಜೆಪಿಯ ಗೌತಮ್ ಗಂಭೀರ್ ವಿರುದ್ಧ ಎಎಪಿ ಅತಿಶಿ ಅವರನ್ನು ಕಣಕ್ಕಿಳಿಸಿತ್ತು. ಆದರೆ ಅತಿಶಿ 4.5 ಲಕ್ಷಕ್ಕೂ ಹೆಚ್ಚು ಮತಗಳ ಅಂತರದಿಂದ ಸೋಲನ್ನು ಕಂಡಿದ್ದರು.

2020ರಲ್ಲಿ ನಡೆದ ದಿಲ್ಲಿ ವಿಧಾನಸಭಾ ಚುನಾವಣೆಯಲ್ಲಿ ಅತಿಶಿ ಅವರಿಗೆ ದಕ್ಷಿಣ ದೆಹಲಿಯ ಕಲ್ಕಾಜಿ ಕ್ಷೇತ್ರದಿಂದ ಟಿಕೆಟ್ ನೀಡಲಾಗಿದೆ. ಅವರು ಬಿಜೆಪಿಯ ಧರಂಬೀರ್ ಸಿಂಗ್ ಅವರನ್ನು 11,000 ಮತಗಳಿಂದ ಸೋಲಿಸಿದ್ದರು.

ದಿಲ್ಲಿಯಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿ ಗಮನಾರ್ಹವಾದ ಬದಲಾವಣೆ ತಂದಿರುವ ಖ್ಯಾತಿಯು ಅತಿಶಿಯದ್ದಾಗಿದೆ. ದಿಲ್ಲಿ ಸರ್ಕಾರಿ ಶಾಲೆಗಳ ಮೂಲಸೌಕರ್ಯವನ್ನು ಸುಧಾರಿಸುವಲ್ಲಿ, ಶಿಕ್ಷಣ ಹಕ್ಕು ಕಾಯ್ದೆಗೆ ಅನುಗುಣವಾಗಿ ಶಾಲಾ ನಿರ್ವಹಣಾ ಸಮಿತಿಗಳನ್ನು ಸ್ಥಾಪಿಸುವಲ್ಲಿ ಮತ್ತು ಖಾಸಗಿ ಶಾಲೆಗಳ ಅನಿಯಂತ್ರಿತ ಶುಲ್ಕ ಹೆಚ್ಚಳವನ್ನು ತಡೆಯಲು ನಿಯಮಗಳನ್ನು ಬಲಪಡಿಸುವಲ್ಲಿ ಅತಿಶಿ ಪ್ರಮುಖ ಪಾತ್ರವನ್ನು ವಹಿಸಿದ್ದರು. ಅವರ ಪಾತ್ರಗಳ ಬಗ್ಗೆ ಮಾಧ್ಯಮಗಳು ಕೂಡ ವರದಿಯನ್ನು ಮಾಡಿತ್ತು. ದಿಲ್ಲಿ ಸರ್ಕಾರದಲ್ಲಿ ಶಿಕ್ಷಣ ಮತ್ತು ಲೋಕೋಪಯೋಗಿ ಇಲಾಖೆಯಂತಹ ಪ್ರಮುಖ ಖಾತೆಗಳನ್ನು ಹೊಂದಿದ್ದ ಅತಿಶಿ ಕೇಜ್ರಿವಾಲ್ ಮತ್ತು ಸಿಸೋಡಿಯಾ ಜೈಲಿನಲ್ಲಿದ್ದಾಗ ಪಕ್ಷದ ಕಾರ್ಯಕ್ರಮಗಳು ಮತ್ತು ಮಾಧ್ಯಮ ಸಂವಾದದಲ್ಲಿ ಪಕ್ಷದ ನಿಲುವನ್ನು ಸ್ಪಷ್ಟಪಡಿಸುವ ಮೂಲಕ ಬಿಜೆಪಿ ಹಾಗೂ ಕೇಂದ್ರ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದ್ದರು.

ರಾಜ್ಯ ಅಂತರ ಜಿಲ್ಲಾ ಕಿರಿಯರ, 23 ವಯೋಮಿತಿಯುಳ್ಳವರ ಕ್ರೀಡಾಕೂಟ

ದಕ್ಷಿಣ ಕನ್ನಡ ಜಿಲ್ಲೆಗೆ ಸಮಗ್ರ ಪ್ರಶಸ್ತಿ



ಮೈಸೂರಿನ ನಜರ್‌ಬಾದಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಮಂಗಳವಾರ ದಕ್ಷಿಣ ಕನ್ನಡ ಜಿಲ್ಲೆ ಕ್ರೀಡಾಪಟುಗಳು ಸಮಗ್ರ ಪ್ರಶಸ್ತಿ ಸ್ವೀಕರಿಸಿದರು.

ಮೈಸೂರು,ಸೆ.17(ಪಿಎಂ)– ಮೈಸೂರು ಜಿಲ್ಲಾ ಅಥ್ಲೆಟಿಕ್ಸ್ ಸಂಸ್ಥೆ ವತಿಯಿಂದ ನಡೆದ ಕರ್ನಾಟಕ ರಾಜ್ಯ ಅಂತರ ಜಿಲ್ಲಾ ಕಿರಿಯರ ಹಾಗೂ 23 ವಯೋಮಿತಿಯುಳ್ಳವರ ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ ದಕ್ಷಿಣ ಕನ್ನಡ ಜಿಲ್ಲೆ ಸಮಗ್ರ ಪ್ರಶಸ್ತಿ ಮುಡಿಗೇರಿಸಿಕೊಂಡಿತು.

ಮೈಸೂರಿನ ನಜರ್‌ಬಾದಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಮೈಸೂರು ಜಿಲ್ಲಾ ಅಥ್ಲೆಟಿಕ್ಸ್ ಸಂಸ್ಥೆ, ಕರ್ನಾಟಕ ಅಥ್ಲೆಟಿಕ್ಸ್ ಅಸೋಸಿಯೇಷನ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಂಯುಕ್ತಾಶ್ರಯದಲ್ಲಿ ಕಳೆದ ನಾಲ್ಕು ದಿನಗಳಿಂದ ನಡೆದ ಕ್ರೀಡಾಕೂಟದಲ್ಲಿ ಎಲ್ಲಾ ಕ್ರೀಡೆಗಳಲ್ಲಿ ಉತ್ತಮ ಪ್ರದರ್ಶನ ನೀಡಿದ ದಕ್ಷಿಣ ಕನ್ನಡ ಜಿಲ್ಲೆಯ ಪಟುಗಳು 402 ಅಂಕಗಳನ್ನು ಗಳಿಸಿ ತಮ್ಮ ಜಿಲ್ಲೆಗೆ ಸಮಗ್ರ ಪ್ರಶಸ್ತಿ ಬಾಚಿಕೊಂಡರು.

ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಮಂಗಳವಾರ ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಬಹುಮಾನಗಳನ್ನು ವಿತರಣೆ ಮಾಡಲಾಯಿತು. 242 ಅಂಕಗಳನ್ನು ಪಡೆದ ಬೆಂಗಳೂರು ನಗರ ದ್ವಿತೀಯ ಹಾಗೂ 189 ಅಂಕಗಳನ್ನು ಪಡೆದ ಬೆಳಗಾವಿ ಮೂರನೇ ಸ್ಥಾನ ಪಡೆದುಕೊಂಡವು.

ಬೆಸ್ಟ್ ಅಥ್ಲೀಟ್: ವಿವಿಧ ವಯೋಮಾನದ ವಿಭಾಗದಲ್ಲಿ ಹಲವು ಪಟುಗಳು ಕ್ರೀಡಾಕೂಟದ ಅತ್ಯುತ್ತಮ ಪಟುಗಳಾಗಿ ಹೊರಹೊಮ್ಮಿದರು. 14 ವರ್ಷ ಒಳಪಟ್ಟವರ ಬಾಲಕರ ವಿಭಾಗದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಲೋಹಿತ್‌ಗೌಡ, ಬಾಲಕಿಯರ ವಿಭಾಗದಲ್ಲಿ ಕೆ.ಪಿ.ಅದ್ವಿಕಾ ಬೆಸ್ಟ್ ಅಥ್ಲೀಟ್ ಪುರಸ್ಕಾರಕ್ಕೆ ಭಾಜನರಾದರು.

ಅಂತೆಯೇ 16 ವರ್ಷ ಒಳಪಟ್ಟವರ ಬಾಲಕರ ವಿಭಾಗದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಆಯುಷ್ ಪ್ರಾಂಜಲ್, ಬಾಲಕಿಯರ ವಿಭಾಗದಲ್ಲಿ ಬಳ್ಳಾರಿ ಎಸ್.ಸುಚಿತ್ರಾ, 18 ವರ್ಷ ಒಳಪಟ್ಟವರ ಬಾಲಕರ ವಿಭಾಗದಲ್ಲಿ ಧಾರವಾಡದ ಸಯದ್ ಸಬೀರ್, ಬಾಲಕಿಯರ ವಿಭಾಗದಲ್ಲಿ ಉಡುಪಿಯ ಶ್ರುತಿ ಪಿ.ಶೆಟ್ಟಿ, 20 ವರ್ಷ ಒಳಪಟ್ಟವರ ಪುರುಷರ ವಿಭಾಗದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಸುಶಾನ್, ಮಹಿಳೆಯರ ವಿಭಾಗದಲ್ಲಿ ಚಿಕ್ಕಮಗಳೂರಿನ ದಿಶಾ ಅಲಿಗೆ, 23 ವರ್ಷ ಒಳಪಟ್ಟವರ ಪುರುಷರ ವಿಭಾಗದಲ್ಲಿ ಮೈಸೂರಿನ ಗಗನ್ ಎಲ್.ಗೌಡ, ಮಹಿಳೆಯರ ವಿಭಾಗದಲ್ಲಿ ಉಡುಪಿಯ ಎಸ್.ಕೀರ್ತನಾ ಕ್ರೀಡಾಕೂಟದಲ್ಲಿ ಅಸಾಧಾರಣ ಸಾಧನೆ ಪ್ರದರ್ಶನದ ಮೂಲಕ ಉತ್ತಮ ಅಥ್ಲೀಟ್ ಪ್ರಶಸ್ತಿ ಪಡೆದುಕೊಂಡರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್, ಪೊಲೀಸ್ ಅಧಿಕಾರಿ ಆನಂದ್, ಮೈಸೂರು ಜಿಲ್ಲಾ ಅಥ್ಲೆಟಿಕ್ಸ್ ಸಂಸ್ಥೆ ಅಧ್ಯಕ್ಷ ಸೋಮಶೇಖರ್ ಮತ್ತಿತರರು ಸಮಾರೋಪ ಸಮಾರಂಭದಲ್ಲಿ ಹಾಜರಿದ್ದರು.

ಲೇಖಕ ಪ್ರಕಾಶ್ ಬಾಬು ಅವರ ಎರಡು ಕೃತಿಗಳ ಬಿಡುಗಡೆ



ಮೈಸೂರಿನ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಲೇಖಕ ಎಸ್.ಪ್ರಕಾಶ್ ಬಾಬು ಬರೆದಿರುವ 'ಅವರು ಹೋದ ಮೇಲೆ' ಹಾಗೂ 'ಸಿನಿ ಸಾಧಕರ ಟರ್ನಿಂಗ್ ಪಾಯಿಂಟ್' ಕೃತಿಗಳನ್ನು ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಬಿಡುಗಡೆ ಮಾಡಿದರು.

ಮೈಸೂರು, ಸೆ.17(ಬಿಎಲ್‌ಯು)– ಲೇಖಕ ಎಸ್.ಪ್ರಕಾಶ್ ಬಾಬು ಬರೆದಿರುವ 'ಅವರು ಹೋದ ಮೇಲೆ' ಹಾಗೂ 'ಸಿನಿ ಸಾಧಕರ ಟರ್ನಿಂಗ್ ಪಾಯಿಂಟ್' ಕೃತಿಗಳನ್ನು ಗಣಪತಿ ಸಚ್ಚಿದಾನಂದ ಆಶ್ರಮದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಬಿಡುಗಡೆ ಮಾಡಿದರು.

ನಗರದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮಿ ಆಶ್ರಮದಲ್ಲಿ ಇಂದು ನಡೆದ ಕಾರ್ಯಕ್ರಮದಲ್ಲಿ ಕೃತಿ ಬಿಡುಗಡೆ ಮಾಡಿ ಮಾತನಾಡಿದ ವಿಧಾನ ಮಾಜಿ ಪರಿಷತ್ ಸದಸ್ಯ ಮಾದೇಗೌಡ, ಜೀವನದಲ್ಲಿ ಏನಾದರೊಂದು ಸಾಧನೆ ಮಾಡಬೇಕೆಂಬ ಹಂಬಲ ಇರುವ ಯುವಕರಿಗೆ ಈ ಕೃತಿಗಳು ಸ್ಫೂರ್ತಿದಾಯಕವಾಗಲಿವೆ ಎಂದು ಅಭಿಪ್ರಾಯಪಟ್ಟರು.

ಈ ವೇಳೆ ಮಾತನಾಡಿದ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್, ಸಿನಿ ಕಲಾವಿದರು ತಮ್ಮ ವೃತ್ತಿ ಬದುಕಿನ ಆರಂಭದಲ್ಲಿ ಸಾಧನೆಯ ಬೆನ್ನು ಹತ್ತಿ ಗೆದ್ದ ಬಗ್ಗೆ ಆಸಕ್ತಿದಾಯಕ ಒಳನೋಟಗಳನ್ನು ಈ ಕೃತಿ ತೆರೆದಿಟ್ಟುಕೊಳ್ಳುತ್ತದೆ ಎಂದರು.

ಆಶೀರ್ವಚನ ನೀಡಿ ಮಾತನಾಡಿದ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ, ಈ ಕೃತಿಯಲ್ಲಿ ಅಡಗಿರುವ ಸಾಧನಾಸ್ಫೂರ್ತಿಯನ್ನು ಯುವ ಜನರು ಅಳವಡಿಸಿಕೊಳ್ಳುವ ಮೂಲಕ ಜೀವನದಲ್ಲಿ ಸಾಧನೆಯ ಉತ್ತುಂಗ ಏರಬೇಕೆಂದು ಸಲಹೆ ನೀಡಿದರು.

ಪತ್ರಕರ್ತ ಕೆ.ಜೆ.ಕುಮಾರ್, ಸಮಾಜ ಸೇವಕ ಡಾ.ಕೆ.ರಘುರಾಮ್ ವಾಜಪೇಯಿ, ನೇಗಿಲ ಯೋಗಿ ಸಮಾಜ ಸೇವಾ ಟ್ರಸ್ಟ್ ಅಧ್ಯಕ್ಷ ಡಿ.ರವಿಕುಮಾರ್, ಲೇಖಕ ಎಸ್. ಪ್ರಕಾಶ್ ಬಾಬು, ವ್ಯಂಗ್ಯಚಿತ್ರಕಾರ ಎಂ.ವಿ. ನಾಗೇಂದ್ರ ಬಾಬು ಉಪಸ್ಥಿತರಿದ್ದರು.

ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಪ್ರಾಸ್ತಾವಿಕ ನುಡಿಗಳಾಡಿದರು. ಹಿಮಾಲಯ ಫೌಂಡೇಷನ್ ಅಧ್ಯಕ್ಷ ಎನ್. ಅನಂತ ವಂದನಾರ್ಪಣೆ ಮಾಡಿದರು. ಹೋಟೆಲ್ ಮಾಲೀಕರ ಸಹಕಾರ ಸಂಘದ ಅಧ್ಯಕ್ಷ ನಾರಾಯಣ ವಿ. ಹೆಗಡೆ ಕಾರ್ಯಕ್ರಮ ನಿರ್ವಹಣೆ ಮಾಡಿದರು.

ಮನಸೂರೆಗೊಂಡ ವಿದುಷಿ ಅಕ್ಕರೈ ಸಹೋದರಿಯರ ವಯೋಲಿನ್ ವಾದನ

ಮೈಸೂರು, ಸೆ.17(ಎಸ್‌ಪಿಎನ್)– ವಿದುಷಿ ಅಕ್ಕರೈ ಸಹೋದರಿಯರು ಪ್ರಸ್ತುತಪಡಿಸಿದ 'ದ್ವಂದ್ವ ವಯೋಲಿನ್ ವಾದನ' ಸಂಗೀತಪ್ರಿಯರ ಮನಸೂರೆಗೊಂಡಿತು.

ನಗರದ ವಾಣಿವಿಲಾಸ ಮೊಹಲ್ಲಾದ 8ನೇ ಕ್ರಾಸ್‌ನಲ್ಲಿ ಶ್ರೀಪ್ರಸನ್ನ ವಿದ್ಯಾ ಗಣಪತಿ ಮಹೋತ್ಸವ ಚಾರಿಟಬಲ್ ಟ್ರಸ್ಟ್(ಎಸ್‌ಪಿವಿಜಿಎಂಸಿ) ಏರ್ಪಡಿಸಿರುವ 63ನೇ 'ಪಾರಂಪರಿಕ ಸಂಗೀತೋತ್ಸವ'ದ ಹನ್ನೊಂದನೇ ದಿನದ ಕಾರ್ಯಕ್ರಮದಲ್ಲಿ ವಿದುಷಿ ಅಕ್ಕರೈ ಶುಭಲಕ್ಷ್ಮಿ, ಅಕ್ಕರೈ ಸ್ವರ್ಣಲತಾ ಸಹೋದರಿಯರ ವಯೋಲಿನ್ ವಾದನ ಮೆರಗು ತಂದಿತು. ವಿದ್ವಾನ್ ಸುಮೇಶ್ ನಾರಾಯಣನ್ ಮೃದಂಗ, ವಿದ್ವಾನ್ ಸುಂದರ್ ಕುಮಾರ್ ಖಂಜರಾ ಹಾಗೂ ವಿದುಷಿ ಶ್ರೇಯ ತಂಬೂರಿ ನುಡಿಸುವ ಮೂಲಕ ಸಂಗೀತ ಕಛೇರಿಗೆ ಮೆರಗು ತಂದುಕೊಟ್ಟರು.



63ನೇ 'ಪಾರಂಪರಿಕ ಸಂಗೀತೋತ್ಸವದ ಹನ್ನೊಂದನೇ ದಿನದ ಕಾರ್ಯಕ್ರಮದಲ್ಲಿ ವಿದುಷಿ ಅಕ್ಕರೈ ಶುಭಲಕ್ಷ್ಮಿ, ಅಕ್ಕರೈ ಸ್ವರ್ಣಲತಾ ಸಹೋದರಿಯರ ವಯೋಲಿನ್ ವಾದನ ಮೆರಗು ತಂದಿತು.

ಇದಕ್ಕೂ ಮುನ್ನ ವಿದ್ವಾನ್ ಕಿರಗಸೂರು ರಾಜಪ್ಪ ಮತ್ತು ತಂಡದವರಿಂದ ರಂಗಗೀತೆಗಳನ್ನು ಪ್ರಸ್ತುತ ಪಡಿಸಲಾಯಿತು. ಸೆ.19ರಂದು ಬೆಳಗ್ಗೆ ಸಕಲ ಧಾರ್ಮಿಕ ವಿಧಿ–ವಿಧಾನಗಳೊಂದಿಗೆ ಗಣಪತಿಯನ್ನು ವಿಸರ್ಜನೆ ಹಾಗೂ ಅನ್ನಸಂತರ್ಪಣೆ ಮಾಡಲಾಗುವುದು ಎಂದು ಟ್ರಸ್ಟ್ ಸದಸ್ಯರೊಬ್ಬರು ಮಾಹಿತಿ ನೀಡಿದರು.


ಸಮಾಜಕ್ಕೆ ಉತ್ತಮ ಸಂಸ್ಕಾರ ನೀಡಿದವರು ವಿಶ್ವಕರ್ಮರು

ವಿಶ್ವಕರ್ಮ ಜಯಂತಿ ದಿನಾಚರಣೆಯಲ್ಲಿ ಶಾಸಕ ಕೆ.ಹರೀಶ್‌ಗೌಡ ಬಣ್ಣನೆ

ಮೈಸೂರು, ಸೆ.17– ಉತ್ತಮ ಸಂಸ್ಕಾರ ಮತ್ತು ಸಂಸ್ಕೃತಿಯನ್ನು ಸಮಾಜಕ್ಕೆ ನೀಡಿದಂತಹ ಮಹಾಪುರುಷರು ವಿಶ್ವಕರ್ಮರು ಎಂದು ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಹೇಳಿದರು.

ಇಂದು ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಕಿರು ರಂಗಮಂದಿರದಲ್ಲಿ ಆಯೋಜಿಸಿದ್ದ ಶ್ರೀ ವಿಶ್ವಕರ್ಮ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿಯೊಬ್ಬ ಮನುಷ್ಯನು ಇಂದು ಯಾವುದೇ ಕೆಲಸ ಕಾರ್ಯವನ್ನು ನಿರ್ವಹಿಸಿ ಬದುಕುತ್ತಿರುವುದು ವಿಶ್ವಕರ್ಮರು ಹಾಕಿಕೊಟ್ಟಂತಹ ಮಾರ್ಗದಿಂದ. ಇಂದಿನ ಯುಗದಲ್ಲಿ ಯಾವುದೇ ಮದುವೆ, ನೇಗಿಲು ಹಿಡಿದು ಹೊಲ ಉಳುಮೆ ಮಾಡಬೇಕಾದರೂ, ಗುಡಿಯಲ್ಲಿ ದೇವರನ್ನಿಟ್ಟು ಪೂಜಿಸಬೇಕಾದರೂ, ದೇವರ ಮೂರ್ತಿ ಕೆತ್ತಲು ವಿಶ್ವಕರ್ಮರ ಅವಶ್ಯಕತೆಯಿದೆ ಎಂದು ಹೇಳಿದರು.

ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್. ಶ್ರೀವತ್ಸ ಮಾತನಾಡಿ, ಇಡೀ ಜಗತ್ತಿನಲ್ಲಿ ಕಾಯಕ ಸಮಾಜವನ್ನು ದೃಷ್ಟಿಯಲ್ಲಿಟ್ಟುಕೊಂಡು ಸಮಾಜದಲ್ಲಿನ ಶ್ರಮಜೀವಿಗಳಿಗೋಸ್ಕರ ಸರ್ಕಾರವು ಜಾರಿಗೆ ತಂದಂತಹ ಯೋಜನೆಯೇ ವಿಶ್ವಕರ್ಮ ಯೋಜನೆ. ಜಗತ್ತಿನಲ್ಲಿ ಯಾವುದನ್ನು ಕಾಯಕ ಸಮಾಜ ಎಂದು ಹೇಳುತ್ತೇವೆಯೋ ಆ ಕಾಯಕ ಸಮಾಜವನ್ನು ಮೆಟ್ಟಿ ನಿಲ್ಲುವಂತಹ ಶ್ರಮಜೀವಿಗಳು ವಿಶ್ವಕರ್ಮರು ಎಂದರು.



ಮೈಸೂರು ಜಿಲ್ಲಾಡಳಿತ ಹಾಗೂ ಕನ್ನಡ–ಸಂಸ್ಕೃತಿ ಇಲಾಖೆ ವತಿಯಿಂದ ಕಿರುರಂಗಮಂದಿರದಲ್ಲಿ ಆಯೋಜಿಸಿದ್ದ ಶ್ರೀ ವಿಶ್ವಕರ್ಮ ಜಯಂತಿ ಕಾರ್ಯಕ್ರಮವನ್ನು ವಿಶ್ವಕರ್ಮರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಉದ್ಘಾಟಿಸಿದರು. ಶ್ರೀ ನೀಲಕಂಠಚಾರ್ಯ ಸ್ವಾಮೀಜಿ ಇನ್ನಿತರರು ಚಿತ್ರದಲ್ಲಿದ್ದಾರೆ.

ಬಿಜೆಪಿ ಮುಖಂಡ ರಘು ಕೌಟಿಲ್ಯ ಮಾತನಾಡಿ, ವಿಶ್ವಕರ್ಮ ಜಯಂತಿ ಎಂದರೆ ಒಗ್ಗಟ್ಟಿನ ದಿನ, ಪಂಚಋಷಿಗಳ ಒಗ್ಗಟ್ಟನ್ನು ಸಾರಿದ ದಿನ, ಒಟ್ಟಿಗೆ ವಿಶ್ವಕರ್ಮದ ಪಂಚ ಗುಂಪುಗಳು ಸೇರಿದ ದಿನವನ್ನು ವಿಶ್ವಕರ್ಮ ಜಯಂತಿ ದಿನ ಎಂದು ಆಚರಿಸುತ್ತೇವೆ. ವಿಶ್ವಕರ್ಮ ಸಮುದಾಯದವರು ವಿದ್ವತ್ತು ವಾಸ್ತುಶಿಲ್ಪಕಲೆ ವೈಶಿಷ್ಟ್ಯವನ್ನು ಸೃಷ್ಟಿ ಮಾಡುವುದರ ಮೂಲಕ ರಾಮಾಯಣ, ಮಹಾಭಾರತ, ದ್ವಾರಕಾ, ಲಂಕಾ ಎಲ್ಲವನ್ನು ಸೃಷ್ಟಿ ಮಾಡಿದಂತಹ ಸೃಷ್ಟಿಕರ್ತರಾಗಿದ್ದಾರೆ. ಇಡೀ ಕಾಯಕ ಸಮುದಾಯಗಳಲ್ಲಿ ಅತ್ಯಂತ ಪಾವಿತ್ರ್ಯದಂತಹ ಸಂಸ್ಕೃತಿಯನ್ನು ನೋಡುವಂತಹ ಕೇಳುವಂತಹ ಅನುಭವಿಸುವಂತಹ ಸಮಾಜ ವಿಶ್ವಕರ್ಮ ಸಮುದಾಯ. ಸುಂದರವಾದಂತಹ ಬದ್ಧತೆಗೂ ಪರಿಪೂರ್ಣವಾದಂತಹ ಸಮಾಜವನ್ನು ನಿರ್ಮಾಣ ಮಾಡಿದಂತಹ ಕೀರ್ತಿ ವಿಶ್ವಕರ್ಮರಿಗೆ ಸಲ್ಲುತ್ತದೆ ಎಂದು ಹೇಳಿದರು.

ತುಮಕೂರಿನ ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸ್ವಾಮಿಗಳಾದ ಡಾ. ಶ್ರೀ ನೀಲಕಂಠಚಾರ್ಯ ಸ್ವಾಮೀಜಿ ಆಶೀರ್ವಚನ ನೀಡಿದರು. ಶಿಲ್ಪಿ ಡಾ.ಅರುಣ್ ಯೋಗಿರಾಜ್, ಚಿಂತಕ, ಸಾಹಿತಿ ಪ್ರೊ.ಸಿ.ನಾಗಣ್ಣ, ಅಂತರ ರಾಷ್ಟ್ರೀಯ ಕ್ರೀಡಾಪಟು ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಡಾ.ಕೆ.ಎಸ್.ರಾಜಣ್ಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಹಾಗೂ ಸಮುದಾಯದ ಮುಖಂಡರು ಸೇರಿದಂತೆ ಇನ್ನಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಮೈಸೂರು ಮಿತ್ರ ಬುಧವಾರ 18 ಸೆಪ್ಟೆಂಬರ್ 2024

ಸರಗೂರಿನ ಅಭಿವೃದ್ಧಿಗೆ ಹೆಚ್ಚು ಒತ್ತು

ಶಾಸಕ ಅನಿಲ್



ಕುಡಿಯುವ ನೀರಿನ ಟ್ಯಾಂಕ್ ನಿರ್ಮಾಣ ಕಾಮಗಾರಿಗೆ ಶಾಸಕ ಅನಿಲ್ ಭೂಮಿ ಪೂಜೆ ನೆರವೇರಿಸಿದರು

ಸರಗೂರು, ಸೆ.17– ಸರಗೂರಿನ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಲಾಗುವುದು ಎಂದು ಶಾಸಕ ಅನಿಲ್ ತಿಳಿಸಿದರು.

ಪಟ್ಟಣದಲ್ಲಿ ಕುಡಿಯುವ ನೀರಿನ ಟ್ಯಾಂಕ್ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಅಮೃತ್ ಯೋಜನೆಯಡಿ ಪಟ್ಟಣದಲ್ಲಿ ಕುಡಿಯುವ ನೀರಿನ ಟ್ಯಾಂಕ್ ನಿರ್ಮಾಣ, ಜಾಕ್‌ವೆಲ್ ನವೀಕರಣ ಕಾಮಗಾರಿ ಹಾಗೂ ಆಶ್ರಯ ಬಡಾವಣೆಯಲ್ಲಿ 5 ಲಕ್ಷ ಲೀಟರ್ ಸಾಮರ್ಥ್ಯದ ಟ್ಯಾಂಕ್ ನಿರ್ಮಾಣ, 31.20 ಕಿಮೀ ಎಚ್‌ಡಿಪಿಇ ವಿತರಣಾ ಕೊಳವೆ ಮಾರ್ಗ, ಜಾಕ್‌ವೆಲ್, ಜಲಶುದ್ಧೀಕರಣ ಘಟಕ ಹಾಗೂ ಮೇಲ್ಮಟ್ಟದ ಜನಸಂಗ್ರಹಗಳಿಗೆ ಆನ್‌ಲೈನ್ ಮಾನಿಟರಿಂಗ್ ಒದಗಿಸಲು 13.12 ಕೋಟಿ ವೆಚ್ಚದಲ್ಲಿ ಕಾಮಗಾರಿ ಮಾಡಲಾಗುತ್ತದೆ. 18 ತಿಂಗಳೊಳಗೆ ಈ ಕಾಮಗಾರಿ ಮುಗಿಯಲಿದೆ ಎಂದರು. ಈಗಾಗಲೇ ತಾಲೂಕು ಕೇಂದ್ರದಲ್ಲಿ ಮಿನಿವಿಧಾನಸೌಧ ನಿರ್ಮಾಣಕ್ಕೆ ನಿವೇಶನ ಗುರುತಿಸಲಾಗಿದ್ದು, ಮುಂದಿನ ದಿನಗಳಲ್ಲಿ ಕಟ್ಟಡ ನಿರ್ಮಾಣ ಚಾಲನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಆಹ್ವಾನಿಸಲಾಗುವುದು ಎಂದರು.

ತಾಲೂಕು ಅಭಿವೃದ್ಧಿಗೆ ಪೂರಕವಾಗಿ 50 ಹಾಸಿಗೆ ಆಸ್ಪತ್ರೆ ನಿರ್ಮಿಸಲಾಗುವುದು. ಅಗ್ನಿಶಾಮಕ ಠಾಣೆ ಸೇರಿದಂತೆ ಇನ್ನಿತರ ಇಲಾಖೆ ಕಚೇರಿ ತೆರೆಯಲು ಕ್ರಮವಹಿಸಲಾಗುವುದು. ನಮ್ಮದೇ ಸರ್ಕಾರ ಇರುವುದರಿಂದ ಅಭಿವೃದ್ಧಿಗೆ ಸಂಪೂರ್ಣ ಬೆಂಬಲ ನೀಡಿದ್ದಾರೆ. ತಾಲೂಕಿನ ಅಭಿವೃದ್ಧಿ ಕುರಿತು ಸಿಎಂ ಸಿದ್ದರಾಮಯ್ಯ ಅವರೊಂದಿಗೆ ಚರ್ಚಿಸಿ ಹೆಚ್ಚು ಅನುದಾನ ತರುವ ವಿಶ್ವಾಸ ವ್ಯಕ್ತಪಡಿಸಿದರು.

ಆಶ್ರಯ ಬಡಾವಣೆಗೆ ಮೂಲ ಸೌಲಭ್ಯ ಒದಗಿಸಲು ಕ್ರಮ ವಹಿಸಲಾಗುವುದು. ನೀರಿನ ಟ್ಯಾಂಕ್ ನಿರ್ಮಾಣದಿಂದ ಪಟ್ಟಣದ ನಿವಾಸಿಗಳಿಗೆ ಶುದ್ಧ ಕುಡಿಯುವ ನೀರು ಒದಗಿಸಲು ಸಹಕಾರಿಯಾಗಲಿದೆ. ಪಟ್ಟಣದ ವಸತಿ ವಂಚಿತರಿಗೆ ಶೀಘ್ರ ಮನೆ ನಿರ್ಮಾಣಕ್ಕೆ ಮನೆ ಮಂಜೂರಾತಿ ಆದೇಶ ಪತ್ರ ವಿತರಿಸಲಾಗುವುದು. ಈಗಿರುವ ಪಟ್ಟಣ ಪಂಚಾಯಿತಿಯನ್ನು ತೆರವುಗೊಳಿಸಿ ಸುಸಜ್ಜಿತ ಕಟ್ಟಡ ನಿರ್ಮಾಣಕ್ಕೆ ಗುದ್ದಲಿಪೂಜೆ ಮಾಡಲು ಪಪಂ ಮುಖ್ಯಾಧಿಕಾರಿಗೆ ತಿಳಿಸಿದರು.

ಪಪಂ ಮುಖ್ಯಾಧಿಕಾರಿ ಮಂಜುನಾಥ್ ಮಾತನಾಡಿದರು. ಅಧ್ಯಕ್ಷೆ ರಾಧಿಕಾ, ಉಪಾಧ್ಯಕ್ಷ ವಿನಾಯಕ ಪ್ರಸಾದ್, ಸದಸ್ಯರಾದ ಶ್ರೀನಿವಾಸ್, ಸಣ್ಣತಾಯಮ್ಮ, ನೂರಾಳಸ್ವಾಮಿ, ಚಲುವಕೃಷ್ಣ, ವೀರೇಶ್, ಕಸಾಪ ಅಧ್ಯಕ್ಷ ಎಂ.ಕೆಂಡಗಣ್ಣಸ್ವಾಮಿ, ಕಾಂಗ್ರೆಸ್ ಟೌನ್ ಅಧ್ಯಕ್ಷ ನಾಗರಾಜು, ಕಾಂಗ್ರೆಸ್ ಮುಖಂಡರಾದ ಶಿವಾಜು, ಆದಿಕರ್ನಾಟಕ ಮಹಾಸಭಾ ಅಧ್ಯಕ್ಷ ಶಿವಣ್ಣ, ಎಪಿಎಂಸಿ ಮಾಜಿ ಅಧ್ಯಕ್ಷ ಸಿದ್ದರಾಜು, ಅಕ್ರಮ ಸಕ್ರಮ ಸಮಿತಿ ಸದಸ್ಯ ಶಿವಶಂಕರನ್, ಮುಖಂಡರಾದ ಶ್ರೀನಾಥ್, ನವೀನ್ ಕುಮಾರ್, ಭಜರಂಗದಳ ರಾಮು, ಸುಹೇಲ್, ಮಟ್ಟಿ ಹನುಮಯ್ಯ, ಮಲ್ಲೇಶ್, ಬಿಲ್ಲಯ್ಯ ಹಾಗೂ ಪಪಂ ಸಿಬ್ಬಂದಿ ವರ್ಗ ಹಾಜರಿದ್ದರು.

ಯಾವುದೇ ಸಮುದಾಯ ತಮ್ಮ ಆಚಾರ, ಪದ್ಧತಿಯೊಂದಿಗೆ

ಅನ್ಯರ ಪದ್ಧತಿ ಗೌರವಿಸುವ ಮನಸ್ಥಿತಿ ಬೆಳೆಸಿಕೊಳ್ಳಿ

ವಿಶ್ವಕರ್ಮ ಜಯಂತಿಯಲ್ಲಿ ತಹಸೀಲ್ದಾರ್ ಟಿ.ಜೆ.ಸುರೇಶ್ ಆಚಾರ್



ವಿಶ್ವಕರ್ಮ ಜಯಂತಿಯನ್ನು ತಹಸೀಲ್ದಾರ್ ಟಿ.ಜೆ.ಸುರೇಶ್ ಆಚಾರ್ ಉದ್ಘಾಟಿಸಿದರು.

ತಿ.ನರಸೀಪುರ, ಸೆ.17– ಯಾವುದೇ ಸಮುದಾಯ ತಮ್ಮ ಆಚಾರ, ವಿಚಾರ, ಪದ್ಧತಿಗಳನ್ನು ಆಚರಿಸುವ ಜೊತೆಗೆ ಅನ್ಯರ ಪದ್ಧತಿಗಳನ್ನು ಗೌರವಿಸುವ ಮನಸ್ಥಿತಿ ಬೆಳೆಸಿಕೊಳ್ಳಬೇಕು ಎಂದು ತಹಸೀಲ್ದಾರ್ ಟಿ.ಜೆ.ಸುರೇಶ್ ಆಚಾರ್ ತಿಳಿಸಿದರು.

ತಾಲೂಕು ಆಡಳಿತ, ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಹಾಗೂ ವಿಶ್ವಕರ್ಮ ಕ್ಷೇಮಾಭಿವೃದ್ಧಿ ಸಂಘಗಳ ಸಂಯುಕ್ತಾಶ್ರಯದಲ್ಲಿ ಮಂಗಳವಾರ ಪಟ್ಟಣದ ತಾಲೂಕು ಆಡಳಿತಸೌಧದ ಮುಂಭಾಗ ನಡೆದ ವಿಶ್ವಕರ್ಮ ಜಯಂತಿಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಭಗವಂತನಿಗೆ ಮೂರ್ತಿ ರೂಪ ಕೊಡುವ ಮೂಲಕ ಮೂಲ ಪುರುಷ ವಿಶ್ವಕರ್ಮರು ಬಹಳಷ್ಟು ದೇವಸ್ಥಾನಗಳನ್ನು ನಿರ್ಮಿಸಿದ್ದಾರೆಂದು ನಾವು ಪುರಾಣದಿಂದ ಓದಿ ತಿಳಿದಿದ್ದೇವೆ. ಇಂತಹ ಮಹತ್ತರ ಕೊಡುಗೆಗಳನ್ನು ನಮ್ಮ ಸಮಾಜಕ್ಕೆ ನೀಡಿದಂತಹ ಸಮುದಾಯದಲ್ಲಿ ನಾವೆಲ್ಲಾ ಇದ್ದೇವೆ ಎಂಬುದೇ ಹೆಮ್ಮೆಯ ವಿಷಯ ಎಂದರು.

ನಮ್ಮ ಸಮಾಜವೇ ಮುಖ್ಯ, ಇತರರು ಏನು ಇಲ್ಲ ಎಂಬುದು ಸರಿಯಲ್ಲ. ಎಲ್ಲಾ ಸಮುದಾಯದವರು ಸಹ ಮುಖ್ಯವಾಗುತ್ತಾರೆ. ಇಲ್ಲಿ ಯಾರೂ ಮೇಲೂ ಅಲ್ಲ. ಕೀಳು ಅಲ್ಲ. ಎಲ್ಲರೂ ಸಮಾನರೇ. ಹೀಗಾಗಿ ನಾವೆಲ್ಲರೂ ಆಚಾರ, ವಿಚಾರ, ಪದ್ಧತಿಗಳನ್ನು ಆಚರಿಸುವ ಜೊತೆಗೆ ಅನ್ಯರ ಆಚರಣೆಗಳನ್ನು ಗೌರವಿಸಬೇಕು. ನಮ್ಮ ಆಚರಣೆ ಮಾತ್ರ ಶ್ರೇಷ್ಠ ಎಂಬ ಮನೋಭಾವದಿಂದ ಹೊರಬರಬೇಕು. ಅನ್ಯರ ವಿಚಾರಧಾರೆಗಳನ್ನು ಅರ್ಥ ಮಾಡಿಕೊಳ್ಳುವುದು ಬಹುಮುಖ್ಯ ಎಂದರು.

> ವಿಶ್ವಕರ್ಮರು ಪ್ರಾತಃ ಸ್ಮರಣೀಯರಾಗಿದ್ದು, ಅವರಿಂದಾಗಿ ವಿಶ್ವದಲ್ಲಿ ಕಲೆ ಮತ್ತು ವಾಸ್ತುಶಿಲ್ಪ ಆರಂಭಗೊಂಡಿದೆ. ಪುರಾಣಗಳಲ್ಲಿ ಉಲ್ಲೇಖಿಸಿದಂತೆ ಪ್ರಸಿದ್ಧ ಕ್ಷೇತ್ರಗಳು, ವಾಸ್ತುಶಿಲ್ಪ ಕಲೆಗಳು, ನಮ್ಮ ವಿಶ್ವಕರ್ಮರಿಂದ ರಚಿತವಾಗಿದ್ದು, ಸುಪ್ರಸಿದ್ಧ ದ್ವಾರಕ ನಗರವು ನಮ್ಮ ಸೃಷ್ಟಿಗಳಲ್ಲೊಂದಾಗಿದ್ದು, ಕಲೆ ಮತ್ತು ವಾಸ್ತುಶಿಲ್ಪಕ್ಕೆ ನಾವೇ ಮೂಲ ಪುರುಷರಾಗಿದ್ದೇವೆ. ಸಮಾಜದ ಬಾಂಧವರು ಕಲೆಗೆ ಹೆಸರುವಾಸಿಯಾಗಿದ್ದು, ಸಮಾಜದವರ ಕೆಲಸದ ನೈಪುಣ್ಯತೆಯಿಂದ ರೂಪುಗೊಂಡ ಅತ್ಯುತ್ತಮ ಶಿಲ್ಪಕಲೆಗಳು ದೇಶದ ಆಸ್ತಿಯಾಗಿದೆ. ಜಿಲ್ಲೆಯುಲ್ಲೂ ಅನೇಕ ನವನವೀನ ವಿನ್ಯಾಸದ ಕಲ್ಲು ಹಾಗೂ ಮರದ ಕೆತ್ತನೆಯ ವಾಸ್ತು ಶಿಲ್ಪಗಳನ್ನು ಕೊಡುಗೆಯನ್ನಾಗಿ ನೀಡಲಾಗಿದೆ. - ಕುಮಾರಸ್ವಾಮಿ, ನಿವೃತ್ತ ಶಿಕ್ಷಕ.

ಕಾರ್ಯಕ್ರಮಕ್ಕೂ ಮುನ್ನಾ ವಿಶ್ವಕರ್ಮರ ಭಾವಚಿತ್ರವನ್ನು ಅಲಂಕೃತ ವಾಹನದಲ್ಲಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಸಮಾಜದ ಮುಖಂಡರು, ಮಹಿಳೆಯರು ಮೆರವಣಿಗೆಯಲ್ಲಿ ವಿವಿಧ ಸ್ಥಬ್ದಚಿತ್ರಗಳೊಂದಿಗೆ ನಡೆದು ಬಂದರು. ವಿವಿಧ ಗ್ರಾಮಗಳಿಂದ ಬಂದಿದ್ದ ಸ್ಥಬ್ದ ಚಿತ್ರಗಳು ನೋಡುಗರ ಗಮನ ಸೆಳೆದವು.

ಕಾರ್ಯಕ್ರಮದಲ್ಲಿ ವಿಶ್ವಕರ್ಮ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎಂ.ಸಿದ್ದಪ್ಪಾಜಿ, ಗೌರವಾಧ್ಯಕ್ಷ ಎ.ಎನ್.ಸ್ವಾಮಿ, ಕಾರ್ಯಾಧ್ಯಕ್ಷ ಪಿ.ಪ್ರಭಾಕರ್, ಕಾರ್ಯದರ್ಶಿ ಎಸ್.ಮಹೇಶ್ ಕುಮಾರ್, ಮಾಜಿ ಕಾರ್ಯದರ್ಶಿ ಲೋಕೇಶ್ ವಿಶ್ವಕರ್ಮ, ಬನ್ನೂರು ಪುರಸಭೆ ಉಪಾಧ್ಯಕ್ಷೆ ನಾಗರತ್ನ, ಮೆಕಾನಿಕ್ ಸೋಮಣ್ಣ, ಕೆಂಪಯ್ಯನಹುಂಡಿ ಶಿವಕುಮಾರ್, ಸಿದ್ದಾಚಾರ್, ಬನ್ನೂರು ಪುರಸಭೆ ಮುಖ್ಯಾಧಿಕಾರಿ ಆರ್.ಹೇಮಂತ್ ರಾಜು, ತಾಪಂ ಇಓ ಪಿ.ಎಸ್.ಅನಂತರಾಜು, ತಾಲೂಕು ನಾಯಕರ ಸಂಘದ ನಿಕಟಪೂರ್ವ ಅಧ್ಯಕ್ಷ ಚಿಕ್ಕಯ್ಯ, ಬಾಬು ಜಗಜೀವನರಾಂ ಸಂಘದ ಅಧ್ಯಕ್ಷ ಪುಟ್ಟಯ್ಯ, ಮನ್ಸೂರ್ ಆಲಿ, ಅಕ್ಬರ್, ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕಿ ಶಾಂತ, ಪಶು ವೈದ್ಯ ಇಲಾಖೆ ಸಹಾಯಕ ನಿರ್ದೇಶಕ ಲಿಂಗರಾಜು, ಬಿಸಿಎಂ ಇಲಾಖೆ ಅಧಿಕಾರಿ ರಾಜಣ್ಣ, ಉಪನ್ಯಾಸಕ ಮೂಗೂರು ಕುಮಾರಸ್ವಾಮಿ, ಬಸವ ರಾಜು, ಕೆಬ್ಬೇಹುಂಡಿ ಶಿವಕುಮಾರ್ ಸೇರಿದಂತೆ ಮತ್ತಿತರರಿದ್ದರು.

ಕಲೆ, ವಾಸ್ತುಶಿಲ್ಪಕ್ಕೆ ವಿಶ್ವಕರ್ಮರ ಕೊಡುಗೆ ಅಪಾರ

ಶಾಸಕ ದರ್ಶನ್



ನಂಜನಗೂಡಲ್ಲಿ ವಿಶ್ವಕರ್ಮ ಜಯಂತಿ ನಡೆಯಿತು.

ನಂಜನಗೂಡು, ಸೆ.17– ದೇಶದ ಕಲೆ, ವಾಸ್ತುಶಿಲ್ಪಕ್ಕೆ ವಿಶ್ವಕರ್ಮರ ಕೊಡುಗೆ ಅಪಾರ. ಅವರ ಕೊಡುಗೆಗಳು ಸದಾ ಜೀವಂತವಾಗಿವೆ ಎಂದು ಶಾಸಕ ದರ್ಶನ್ ಬಣ್ಣಿಸಿದರು.

ನಗರದ ತಾಲೂಕು ಕಚೇರಿ ಸಭಾಂಗಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ಏರ್ಪಡಿಸಿದ್ದ ವಿಶ್ವಕರ್ಮ ಜಯಂತಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ವಿಶ್ವಕರ್ಮ ಸಮುದಾಯ ಎಲ್ಲಾ ಸಮುದಾಯದೊಂದಿಗೆ ಬೆಸೆದುಕೊಂಡಿದೆ. ವಿಶ್ವಕರ್ಮ ಸಮುದಾಯದವರಿಲ್ಲದೆ ಬೇರೆ ಸಮಾಜದವರು ಬದುಕಲು ಸಾಧ್ಯವಿಲ್ಲ. ಪ್ರತಿಯೊಂದು ಸಮುದಾಯದ ವೃತ್ತಿಗೆ ಬೇಕಾದ ಪರಿಕರ ನಿರ್ಮಾಣದಲ್ಲಿ ವಿಶ್ವಕರ್ಮ ಜನಾಂಗದ ಕೊಡುಗೆ ಅಪಾರವಾಗಿದೆ. ಅಲ್ಲದೆ ನಾವು ನಿತ್ಯ ಬಳಸುವ ವಸ್ತುಗಳು, ಮನೆ ನಿರ್ಮಾಣಕ್ಕೂ ಕೂಡ ವಿಶ್ವಕರ್ಮ ಸಮುದಾಯದ ಮಾರ್ಗದರ್ಶನ ಅವಶ್ಯಕ. ವಿಶ್ವಕರ್ಮ ಸಮುದಾಯ ರಾಜಕೀಯ, ಶೈಕ್ಷಣಿಕವಾಗಿ ಹಿಂದುಳಿದಿದೆ. ಕ್ಷೇತ್ರದಲ್ಲಿ ಸಮುದಾಯದ ಶಿಕ್ಷಣಕ್ಕೆ ನೆರವಾಗುವ ದೃಷ್ಟಿಯಿಂದ ಕಾರ್ಯಕ್ರಮ ರೂಪಿಸಲಾಗುವುದು. ಅಲ್ಲದೇ ಸಮಾಜಕ್ಕೆ ರಾಜಕೀಯ ಸ್ಥಾನಮಾನ ಒದಗಿಸಬೇಕು ಎಂಬುದು ನನ್ನ ತಂದೆ ಆರ್.ಧ್ರುವನಾರಾಯಣ್ ಕನಸಾಗಿತ್ತು. ನಾನು ಕೂಡ ವಿವಿಧ ಸಮಿತಿಗಳಲ್ಲಿ ಅವಕಾಶ ಕಲ್ಪಿಸುವ ಮೂಲಕ ರಾಜಕೀಯ ಸ್ಥಾನಮಾನ ನೀಡಲು ಕ್ರಮವಹಿಸುತ್ತೇನೆ. ಸಮುದಾಯ ಭವನ ನಿರ್ಮಾಣಕ್ಕೆ ಅನುದಾನ ನೀಡಲಾಗುವುದು ಎಂದು ತಿಳಿಸಿದರು.

ವಿಶ್ವಕರ್ಮ ಸಮುದಾಯದ ತಾಲೂಕು ಅಧ್ಯಕ್ಷ ಚಂದ್ರು ಮಾತನಾಡಿ, ಸಮುದಾಯ ಶಿಕ್ಷಣ ಹಾಗೂ ಒಗ್ಗಟ್ಟಿನ ಕೊರತೆಯಿಂದ ರಾಜಕೀಯ, ಆರ್ಥಿಕ, ಸಾಮಾಜಿಕವಾಗಿ ಹಿಂದುಳಿದಿದೆ. ಆದ್ದರಿಂದ ಸಮುದಾಯದ ಬಂಧುಗಳು ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣ ನೀಡಬೇಕು. ಅಲ್ಲದೆ ಶಾಸಕರು ಸಮುದಾಯದವರಿಗೆ ರಾಜಕೀಯ ಸ್ಥಾನಮಾನ ಒದಗಿಸಲು ಕ್ರಮ ವಹಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು, ತಾಪಂ ಇಓ ಜೆರಾಲ್ಡ್ ರಾಜೇಶ್, ಪೌರಾಯುಕ್ತ ನಂಜುಂಡಸ್ವಾಮಿ, ನಗರಸಭಾಧ್ಯಕ್ಷ ಶ್ರೀಕಂಠಸ್ವಾಮಿ, ಸದಸ್ಯೆ ಗಾಯತ್ರಿ, ಉಪಾಧ್ಯಕ್ಷೆ ರಿಯಾನಾಭಾನು, ವಿಶ್ವಕರ್ಮ ನಿಗಮ ಮಾಜಿ ಅಧ್ಯಕ್ಷ ನಂದಕುಮಾರ್, ಶ್ರೀಕಂಠ, ರಾಜು, ಸಿದ್ದಾಚಾರ್, ಗೋಪಾಲ್‌ಕೃಷ್ಣ, ಪುರುಷೋತ್ತಮ, ಅನಂತು, ಸ್ನೇಕ್ ಬಸವರಾಜು, ಗೋವಿಂದು, ಸಿದ್ದರಾಜು, ಸಿದ್ದಪ್ಪಾಜಿ ಸೇರಿದಂತೆ ಇತರರಿದ್ದರು.

ಹುಣಸೂರಲ್ಲಿ ಪ್ರಧಾನಿ ಮೋದಿ ಹುಟ್ಟುಹಬ್ಬ ಆಚರಣೆ



ಹುಣಸೂರಿನಲ್ಲಿ ಪ್ರಧಾನಿ ಮೋದಿ ಹುಟ್ಟುಹಬ್ಬ ಅಂಗವಾಗಿ ಬಿಜೆಪಿ ವತಿಯಿಂದ ಡಿ.ದೇವರಾಜ ಅರಸು ಸಾರ್ವಜನಿಕ ಆಸ್ಪತ್ರೆ ಒಳರೋಗಿಗಳಿಗೆ ಹಣ್ಣು ಹಂಪಲು ವಿತರಿಸಲಾಯಿತು. ಈ ವೇಳೆ ಮೈಸೂರು ಜಿಲ್ಲಾ ಉಪಾಧ್ಯಕ್ಷ ಗಣೇಶ್ ಕುಮಾರಸ್ವಾಮಿ ರಮೇಶ್ ಕುಮಾರ್, ಹುಣಸೂರು ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಕಾಂತರಾಜ್, ನಗರಾಧ್ಯಕ್ಷ ನಾರಾಯಣ, ಮುಖಂಡರಾದ ನಾಗರಾಜ್, ಮಂಜುನಾಥ್, ಪ್ರಸನ್ನ, ರಾಮಚಂದ್ರು, ರವಿಶಂಕರ್, ಮುದ್ದುರಾಮ್, ಮಧು, ಮಂಜುಳಮ್ಮ, ವೆಂಕಟಮ್ಮ ಸೇರಿದಂತೆ ಇನ್ನಿತರರಿದ್ದರು.

ನಾಳೆ ವಾರ್ಷಿಕ ಮಹಾಸಭೆ

ಕಂಪಲಾಪುರ, ಸೆ.17– ಇಲ್ಲಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ವಾರ್ಷಿಕ ಮಹಾಸಭೆ ಸೆ.19ರಂದು ಬೆಳಗ್ಗೆ 10 ಗಂಟೆಗೆ ಸಂಘದ ಆವರಣದಲ್ಲಿ ಅಧ್ಯಕ್ಷ ಕೆ.ಆರ್.ಸಂತೋಷ್ ಅಧ್ಯಕ್ಷತೆಯಲ್ಲಿ ನಡೆಯಲಿದ್ದು, ಸದಸ್ಯರು ಸಕಾಲಕ್ಕೆ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಸಂಘದ ಸಿಇಓ ಕೆ.ಎನ್.ಹರ್ಷ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸೆ.20, ಪಿಎಸಿಎಸ್ ಮಹಾಸಭೆ

ಬನ್ನೂರು, ಸೆ.17– ಚಾಮನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 2023–24ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಸೆ.20ರಂದು ಬೆಳಗ್ಗೆ 11 ಗಂಟೆಗೆ ಸಂಘದ ಆವರಣದಲ್ಲಿ ಅಧ್ಯಕ್ಷ ಸಿ.ವೈ.ಕಾಂತ ಅವರ ಅಧ್ಯಕ್ಷತೆಯಲ್ಲಿ ನಡೆಯಲಿದ್ದು, ಸಂಘದ ಸದಸ್ಯರು ಸಕಾಲಕ್ಕೆ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಸಿಇಓ ಹೆಚ್.ಎಂ.ರವಿಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೆಟ್ಟಹಳ್ಳಿಯಲ್ಲಿ ಹಲವರಿಗೆ ವಾಂತಿ–ಭೇದಿ ಹಿನ್ನೆಲೆ

ಜಿಲ್ಲಾಧಿಕಾರಿ ಭೇಟಿ: ರೋಗಿಗಳ ಆರೋಗ್ಯ ವಿಚಾರಣೆ



ರೋಗಿಗಳ ಆರೋಗ್ಯ ವಿಚಾರಿಸಿದ ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ

ಸಾಲಿಗ್ರಾಮ, ಸೆ.17– ತಾಲೂಕಿನ ಬೆಟ್ಟಹಳ್ಳಿ ಗ್ರಾಮದಲ್ಲಿ ವಾಂತಿ–ಭೇದಿ ಪ್ರಕರಣಕ್ಕೆ ಸಂಬಂಧಿಸಿದಂತೆ ವರದಿ ಬಂದ ನಂತರ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಶಿಸ್ತುಕ್ರಮ ಕೈಗೊಳ್ಳಲಾಗುವುದು ಎಂದು ಮೈಸೂರು ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ ತಿಳಿಸಿದರು.

ಬೆಟ್ಟಹಳ್ಳಿ ಗ್ರಾಮಕ್ಕೆ ಭೇಟಿ ನೀಡಿ ರೋಗಿಗಳ ಆರೋಗ್ಯ ವಿಚಾರಿಸಿದ ಅವರು ನಂತರ ತಾಲೂಕು ಆರೋಗ್ಯಾಧಿಕಾರಿ ಡಾ.ನಟರಾಜ್ ಅವರೊಂದಿಗೆ ಸಾರ್ವಜನಿಕರ ಆರೋಗ್ಯದ ಸ್ಥಿತಿಗತಿ ಹೇಗಿದೆ. ಎಷ್ಟು ಜನಕ್ಕೆ ವಾಂತಿ ಭೇದಿಯಾಗಿದೆ. ಎಷ್ಟು ಮಂದಿ ಚಿಕಿತ್ಸೆ ಪಡೆಯುತ್ತಿದ್ದಾರೆ. ತುರ್ತು ಚಿಕಿತ್ಸೆ ಯಾರಾದರೂ ಪಡೆಯುತ್ತಿದ್ದಾರಾ. ಯಾವ ಆಸ್ಪತ್ರೆಯಲ್ಲಿ ಎಷ್ಟು ಮಂದಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂಬುದರ ಬಗ್ಗೆ ಮಾಹಿತಿ ಕಲೆ ಹಾಕಿದರು.

ಬಳಿಕ ಮಾತನಾಡಿದ ಅವರು, ಮೈಸೂರು, ಸಾಲಿಗ್ರಾಮ, ಹಳ್ಳಿ ಮೈಸೂರು, ಹೊಳೆನರಸೀಪುರ, ಹಾಸನ, ಬೆಟ್ಟಹಳ್ಳಿ ತಾತ್ಕಾಲಿಕ ಚಿಕಿತ್ಸಾಲಯಗಳಲ್ಲಿ ಒಟ್ಟು 82 ಜನ ಚಿಕಿತ್ಸೆ ಪಡೆದಿದ್ದು, 78 ಜನ ಗುಣಮುಖರಾಗಿದ್ದಾರೆ. ನಾಲ್ವರು ಸಾಲಿಗ್ರಾಮ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಗ್ರಾಮದಲ್ಲಿ ವಾಂತಿ–ಭೇದಿ ಭಯದ ವಾತಾವರಣ ಕಡಿಮೆಯಾಗಿದೆ ಎಂದರು.

ಗ್ರಾಪಂ, ಆರೋಗ್ಯ ಇಲಾಖೆ ಮತ್ತು ಗ್ರಾಮೀಣ ಕುಡಿಯುವ ನೀರು ನೈರ್ಮಲ್ಯ ಇಲಾಖೆ ಅಧಿಕಾರಿಗಳು ಮುಂಜಾಗ್ರತೆ ವಹಿಸಿ ಪ್ರತಿ ಕುಟುಂಬ ಸರ್ವೆ ಮಾಡಿ ಪ್ರತಿಯೊಂದು ಕುಟುಂಬದ ಸದಸ್ಯರ ಆರೋಗ್ಯದ ಮಾಹಿತಿ ಪಡೆಯಬೇಕು. ಈ ರೀತಿಯ ಘಟನೆ ಮರುಕಳಿಸಬಾರದು ಎಂದು ತಾಲೂಕು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ಕಲುಷಿತ ನೀರಿನಿಂದ ಈ ಘಟನೆ ನಡೆದಿರಬಹುದು ಎಂಬ ದೂರು ಕೇಳಿ ಬಂದ ಹಿನ್ನಲೆಯಲ್ಲಿ ಶಿಗೇವಾಳು ಪಿಡಿಓ ಶ್ರೀಧರ್ ಅವರಿಂದ ಮಾಹಿತಿ ಪಡೆದು ಗ್ರಾಮಕ್ಕೆ ನೀರು ಸರಬರಾಜು ಆಗುವ ಮುಖ್ಯ ಪಾಯಿಂಟ್ ತೋರಿಸುವಂತೆ ಅಧಿಕಾರಿಗಳ ತಂಡದೊಂದಿಗೆ ತೆರಳಿದರು. ಈ ವೇಳೆ ರಸ್ತೆಯುದ್ದಕ್ಕೂ ಚರಂಡಿ, ಗಿಡಗಂಟಿಗಳು, ಪೈಪ್‌ಲೈನ್‌ಗಳು, ವಾಲ್‌ಗಳು ಹಾಗೂ ನಲ್ಲಿಗಳನ್ನು ವೀಕ್ಷಿಸಿದ ಡಿಸಿ ನೀರಿನ ಟ್ಯಾಂಕ್ ಪರಿಶೀಲಿಸಿದರು.

ಇದೇ ವೇಳೆ ಕೊಳಚೆ ನೀರು ನಿಲ್ಲದ ಕಡೆ ಎತ್ತರದ ಮಟ್ಟದಲ್ಲಿ ವಾಲ್‌ಗಳು ನಿರ್ಮಾಣವಾಗಬೇಕು. ಕೂಡಲೇ ಚರಂಡಿ ಸ್ವಚ್ಛಗೊಳಿಸಬೇಕು. ಗಿಡಗಂಟಿಗಳನ್ನು ಸ್ವಚ್ಛಗೊಳಿಸಬೇಕು ಎಂದು ಗ್ರಾಪಂ ಅಧಿಕಾರಿಗಳಿಗೆ ಸೂಚಿಸಿದರು.

ಬಳಿಕ ಸಾಲಿಗ್ರಾಮ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿದ ಜಿಲ್ಲಾಧಿಕಾರಿಗಳು ಚಿಕಿತೆ ಪಡೆಯುತ್ತಿರುವ ನಾಲ್ವರ ಆರೋಗ್ಯ ವಿಚಾರಿಸಿ ಅವರಿಂದ ಮಾಹಿತಿ ಪಡೆದರು. ಬಳಿಕ ಎಲ್ಲರಿಗೂ ಉತ್ತಮ ಚಿಕಿತ್ಸೆ ನೀಡಲಾಗುವುದು. ಯಾರು ಆರೋಗ್ಯದ ಬಗ್ಗೆ ಆತಂಕ ಪಡಬೇಡಿ ಎಂದು ಧೈರ್ಯ ತುಂಬಿದರು.

ತಹಸೀಲ್ದಾರ್ ನರಗುಂದ, ಗ್ರಾಪಂ ಅಧ್ಯಕ್ಷೆ ಪವಿತ್ರ, ಆರೋಗ್ಯ ಇಲಾಖೆ ಹಿರಿಯ ಪರಿವೀಕ್ಷಕ ಮಹೇಶ್, ಕೆ.ವಿ.ರಮೇಶ್, ಸೇರಿದಂತೆ ಹಲವು ಇಲಾಖೆ ಅಧಿಕಾರಿಗಳು ಇದ್ದರು.

ಆಟೋ ಚಾಲಕರಿಗೆ ಸಮವಸ್ತ್ರ ವಿತರಣೆ



ಪ್ರಧಾನಿ ಮೋದಿ ಹುಟ್ಟುಹಬ್ಬದ ಅಂಗವಾಗಿ ವರುಣ ಕ್ಷೇತ್ರದ ಮಾಜಿ ಅಧ್ಯಕ್ಷ ತೋಟದಪ್ಪ ಬಸವರಾಜು ತಿ.ನರಸೀಪುರದಲ್ಲಿ ಆಟೋ ಚಾಲಕರಿಗೆ ಸಮವಸ್ತ್ರ ವಿತರಿಸಿದರು. ಎಸ್‌ಟಿ ಮೋರ್ಚಾ ಗ್ರಾಮಾಂತರ ಜಿಲ್ಲಾಧ್ಯಕ್ಷ ಮುದ್ದುಕೃಷ್ಣ, ಜಿಲ್ಲಾ ಎಸ್‌ಸಿ ಮೋರ್ಚಾ ಉಪಾಧ್ಯಕ್ಷ ಆಲಗೂಡು ಮಂಜು ಮತ್ತಿತರಿದ್ದರು.

ಹೆಚ್ಚುವರಿ ಉಸ್ತುವಾರಿ ನೇಮಕ

ಮೈಸೂರು, ಸೆ.17(ಎಸ್‌ಪಿಎನ್)– ಜೆಡಿಎಸ್ ಪಕ್ಷದಲ್ಲಿ ನೋಂದಣಿ ಅಭಿಯಾನ ರಾಜ್ಯಾದ್ಯಂತ ಈಗಾಗಲೇ ಆರಂಭವಾಗಿದ್ದು, ಈ ಅಭಿಯಾನವನ್ನು ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳೊಳಗೆ ಪೂರ್ಣಗೊಳಿಸಲು 19 ಜಿಲ್ಲೆಗೆ ಹೆಚ್ಚುವರಿ ಉಸ್ತುವಾರಿಗಳನ್ನು ನೇಮಿಸಿ ರಾಜ್ಯಾಧ್ಯಕ್ಷ ಹೆಚ್.ಡಿ.ಕುಮಾರಸ್ವಾಮಿ ಸೆ.14ರಂದು ಆದೇಶ ಹೊರಡಿಸಿದ್ದಾರೆ. ಕೊಡಗು ಜಿಲ್ಲೆಗೆ ದಕ್ಷಿಣ ಕನ್ನಡದ ಮೊಹಮ್ಮದ್, ಹಾಸನ ಜಿಲ್ಲೆಗೆ ದಕ್ಷಿಣ ಕನ್ನಡದ ಸಯ್ಯದ್ ಮೀರಾಸಾಬ್, ತುಮಕೂರು ನಾಗರಾಜಯ್ಯ, ಚಾಮರಾಜನಗರಕ್ಕೆ ಹೆಚ್.ಕೆ.ರಾಮು ಸೇರಿದಂತೆ ಒಟ್ಟು 19 ಜಿಲ್ಲೆಗೆ ಹೆಚ್ಚುವರಿ ಉಸ್ತುವಾರಿಗಳನ್ನು ನೇಮಿಸಿದ್ದಾರೆ.

ನಗರ್ಲೆ ಡೈರಿ ವಾರ್ಷಿಕ ಮಹಾಸಭೆ



ನಗರ್ಲೆ ಡೈರಿ ಆವರಣದಲ್ಲಿ ವಾರ್ಷಿಕ ಮಹಾಸಭೆ ನಡೆಯಿತು.

ನಗರ್ಲೆ, ಸೆ.17– ನಂಜನಗೂಡು ತಾಲೂಕಿನ ನಗರ್ಲೆ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ 2023–24ನೇ ಸಾಲಿನ ವಾರ್ಷಿಕ ಮಹಾಸಭೆ ಸಂಘದ ಆವರಣದಲ್ಲಿ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಸಂಘದ ಅಧ್ಯಕ್ಷ ಎನ್.ಬಿ.ವೀರೇಂದ್ರ, ಗ್ರಾಮದ ರೈತರು ಹೆಚ್ಚಾಗಿ ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡು ಸಂಘಕ್ಕೆ ಗುಣಮಟ್ಟದ ಹಾಲು ಸರಬರಾಜು ಮಾಡುವ ಮೂಲಕ ಸಂಘದ ಅಭಿವೃದ್ಧಿಗೆ ಸಹಕರಿಸಬೇಕು. ಆ ಮೂಲಕ ಆರ್ಥಿಕವಾಗಿ ಸಬಲರಾಗಬೇಕು ಎಂದರು. ಇದೇ ವೇಳೆ ಸಮಘದ ಆಯವ್ಯಯ ಮಂಡಿಸಲಾಯಿತು. ಈ ವೇಳೆ ಡೈರಿ ಉಪಾಧ್ಯಕ್ಷೆ ಮಂಜುಳಾ, ನಿರ್ದೇಶಕರಾದ ಎನ್.ಇ.ಗುರುಸ್ವಾಮಿ, ಎನ್.ಎಂ.ರಾಜಶೇಖರಪ್ಪ, ನಾಗೇಗೌಡ, ಎನ್.ಎಂ..ಮಹದೇವಸ್ವಾಮಿ, ಚನ್ನಗೌರಮ್ಮ, ಪಾಪಣ್ಣ, ಜಯಕುಮಾರ್, ಸ್ವಾಮಿ, ನಾಗೇಂದ್ರಸ್ವಾಮಿ, ಸಿಬ್ಬಂದಿಗಳಾದ ಎನ್.ಎಂ.ರಾಜೇಂದ್ರ, ಹೆಚ್.ಮಾದಪ್ಪ ಸೇರಿದಂತೆ ಸಂಘದ ಸದಸ್ಯರು, ರೈತರು ಹಾಜರಿದ್ದರು.

ಜಿಲ್ಲಾಧಿಕಾರಿ ಲಕ್ಷ್ಮೀಕಾಂತರೆಡ್ಡಿ ನೇತೃತ್ವದಲ್ಲಿ ಜನಸ್ಪಂದನಾ ಸಭೆ

ಸಾರ್ವಜನಿಕರಿಂದ ದೂರುಗಳ ಸುರಿಮಳೆ



ಜನಸಂಪರ್ಕ ಸಭೆಯನ್ನು ಶಾಸಕ ಅನಿಲ್ ಉದ್ಘಾಟಿಸಿದರು. ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ ಇನ್ನಿತರರಿದ್ದರು.

ಹೆಚ್.ಡಿ.ಕೋಟೆ, ಸೆ.17– ಜಮೀನಿಗೆ ರಸ್ತೆ ಬಿಡಿಸಬೇಕು, ಸಾಗುವಳಿ ನೀಡಬೇಕು, ನಕಲು ಸಾಗುವಳಿ ರದ್ದು ಮಾಡಬೇಕು, ವಾಸದ ಮನೆಗೆ ಹಕ್ಕು ಪತ್ರ ನೀಡಬೇಕು, ಜಮೀನಿಗೆ ರಸ್ತೆ ಬಿಡಿಸಬೇಕು, ಸ್ಮಶಾನ ಜಾಗ ಗುರುತಿಸಬೇಕು, ಜಮೀನು ದುರಸ್ತಿ ಮಾಡಿಕೊಡಬೇಕು, ಸಾಗುವಳಿ ಪಡೆಯಲು ಕಿಮತ್ತು ಕಟ್ಟಿದರೂ ಹಕ್ಕುಪತ್ರ ನೀಡಿಲ್ಲ, ಕುಡಿಯಲು ನೀರು ಬೇಕು, ಕೋಟ್ಯಾಂತರ ರೂ. ಜಮೀನುಗಳನ್ನು ದಾಖಲೆ ಇಲ್ಲದೆ ಕಬಳಿಸುತ್ತಿದ್ದು, ಇದನ್ನು ಮೂಲ ವಾರಸುದಾರರಿಗೆ ನೀಡಬೇಕು ಎಂಬುದು ಸೇರಿದಂತೆ ಅನೇಕ ದೂರುಗಳು ಮಂಗಳವಾರ ಜಿಲ್ಲಾಧಿಕಾರಿ ಲಕ್ಷ್ಮೀಕಾಂತರೆಡ್ಡಿ ನೇತೃತ್ವದಲ್ಲಿ ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ನಡೆದ ಜನಸ್ಪಂದನಾ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಂದ ಕೇಳಿ ಬಂದ ದೂರುಗಳು.

ಮೊದಲಿಗೆ ನಾಗನಹಳ್ಳಿ ಗ್ರಾಮಸ್ಥರು ಮಾತನಾಡಿ, ಗ್ರಾಮದ ರಾಜಕಾಲುವೆಯನ್ನು ಕೆಲವರು ಒತ್ತುವರಿ ಮಾಡಿಕೊಂಡಿದ್ದು, ಜಮೀನಿಗೆ ತೆರಳಲು ತೊಂದರೆಯಾಗಿದೆ. ಈ ಬಗ್ಗೆ ಹಲವು ಬಾರಿ ತಹಸೀಲ್ದಾರ್‌ಗೆ ದೂರು ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಕೂಡಲೇ ರಸ್ತೆ ಸರ್ವೆ ಮಾಡಿ ರಸ್ತೆ ಬಿಡಿಸಿಕೊಡಬೇಕು ಎಂದು ಮನವಿ ಮಾಡಿದರು.

ಸರ್ವೆಯರ್ ಶಂಭುಲಿಂಗಸ್ವಾಮಿ ಮಾತನಾಡಿ, ರಾಜಕಾಲುವೆ ಒಂದು ಮುಕ್ಕಾಲು ಕಿಮೀ ದೂರವಿದ್ದು, ಇದನ್ನು ಅಳತೆ ಮಾಡಲು ಹೆಚ್ಚು ಸರ್ವೆಯರ್‌ಗಳು ಬೇಕಾಗಿದ್ದು ಹೀಗಾಗಿ ಅಳತೆ ಮಾಡಲು ಸಾಧ್ಯವಾಗಿಲ್ಲ ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಲಕ್ಷ್ಮೀಕಾಂತರೆಡ್ಡಿ ಮಾತನಾಡಿ, 4 ವರ್ಷದಿಂದ ಸಾರ್ವಜನಿಕರು ದೂರು ನೀಡಿದರೂ ಸಮಸ್ಯೆ ಬಗೆಹರಿದಿಲ್ಲ ಎಂದರೆ ಏನು ಎಂದು ತಾಲೂಕು ಅಧಿಕಾರಿಗಳನ್ನು ಪ್ರಶ್ನಿಸಿದರು. ಸಾಗುವಳಿ ಮಂಜೂರು ಮಾಡಿರುವ ಜಮೀನು ಅರಣ್ಯ ಇಲಾಖೆ ವ್ಯಾಪ್ತಿಗೆ ಬರುತ್ತದೆಯೋ ಇಲ್ಲವೋ ಎಂಬುದನ್ನು ವರದಿ ನೀಡಬೇಕು. ಇದನ್ನು ತಹಸೀಲ್ದಾರ್ ಸೂಕ್ತ ಸಮಯದಲ್ಲಿ ಖಾತೆ ಮಾಡಬೇಕು ಎಂದು ತಿಳಿಸಿದರು.

ಅರಣ್ಯ ಇಲಾಖೆ, ಭೂಮಾಪನ ಇಲಾಖೆ ವೈಫಲ್ಯದಿಂದ ಅರಣ್ಯ ವಾಸಿಗಳಿಗೆ ತೊಂದರೆಯಾಗಿದೆ. ಜಿಲ್ಲಾ ಮಟ್ಟದಲ್ಲಿ ಸಭೆ ಕರೆದು ಸಮಸ್ಯೆ ಬಗೆಹರಿಸಲು ಕ್ರಮ ಕೈಗೊಳ್ಳಲಾಗುತ್ತದೆ. ಬಸ್ ವ್ಯವಸ್ಥೆ ಬಗ್ಗೆ ಜನರು ದೂರು ನೀಡುತ್ತಿದ್ದು, ಈ ಬಗ್ಗೆ ಘಟಕ ವ್ಯವಸ್ಥಾಪಕರು ಜಿಲ್ಲಾ ಮಟ್ಟದ ಅಧಿಕಾರಿಗಳ ಗಮನಕ್ಕೆ ತಂದು ಸಮಸ್ಯೆ ಬಗೆಹರಿಸಬೇಕು. ಸ್ಥಳೀಯ ಗ್ರಾಪಂ ಕುಡಿಯುವ ನೀರಿಗೆ ಸಮಸ್ಯೆ ಆಗದಂತೆ ಕ್ರಮ ವಹಿಸಬೇಕು ಎಂದರು.

ಶಾಸಕ ಅನಿಲ್ ಮಾತನಾಡಿ, ವಿಎ ಮತ್ತು ಆರ್‌ಐಗಳ ವರದಿ ಆಧಾರದ ಮೇಲೆ ಸಾಗುವಳಿ ಮಂಜೂರು ಮಾಡಿದ್ದೇವೆ. ನೀವು ಮಂಜೂರಾತಿ ಮಾಡಬಹುದು ಎಂದು ಹೇಳಿದ ನಂತರ ಸಾಗುವಳಿ ವಿತರಿಸಲಾಗಿದೆ. ಆದರೆ ಖಾತೆ ಮಾಡುವ ಬದಲು ನೀವು ಅರಣ್ಯ ಇಲಾಖೆ ಅನುಮತಿಗೆ ಏಕೆ ಕಳಿಸಬೇಕು. ನಾವು ನೀಡಿರುವ ಸಾಗುವಳಿಗಳನ್ನು ಖಾತೆ ಮಾಡಬೇಕು ಎಂದು ಎಚ್ಚರಿಕೆ ನೀಡಿದರು.

ಪಟ್ಟಣದ ಕುಡಿಯುವ ನೀರು ಯೋಜನೆಗೆ ಕೋಟ್ಯಾಂತರ ರೂ. ಖರ್ಚು ಮಾಡಿದ್ದರೂ ಕಳೆದ ನಾಲ್ಕು ತಿಂಗಳಿಂದ ಸಮರ್ಪಕವಾಗಿ ಕಬಿನಿ ಜಲಾಶಯದ ನೀರು ಪೂರೈಕೆಯಾಗುತ್ತಿಲ್ಲ. ಬೋರ್‌ವೆಲ್ ನೀರನ್ನೇ ಜನರು ಕುಡಿಯುತ್ತಿದ್ದಾರೆ. ಆದರೆ ಪುರಸಭಾಧಿಕಾರಿಗಳು ಪೈಪ್ ಲೈನ್ ಹದಗೆಟ್ಟಿದೆ ಎನ್ನುತ್ತಿದ್ದು, ಈ ಬಗ್ಗೆ ಕ್ರಮ ವಹಿಸುತ್ತಿಲ್ಲ ಎಂದು ಜಿಲ್ಲಾಧಿಕಾರಿಗಳಿಗೆ ದೂರು ನೀಡಿದರು.

ಹೆಚ್.ಡಿ.ಕೋಟೆ ತಾಲೂಕು ಹಿಂದುಳಿದಿಲ್ಲ. ಭ್ರಷ್ಟ ಅಧಿಕಾರಿಗಳಿಂದ ಹಿಂದುಳಿದ ಅಣೆಪಟ್ಟಿ ಅಳಿಸಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ತಾಲೂಕಿನಲ್ಲಿ ಕಳೆದ ಐದಾರು ವರ್ಷಗಳಿಂದ ಒಂದೇ ಕಡೆ ಕೆಲಸ ಮಾಡುವ ಅಧಿಕಾರಿಗಳನ್ನು ಬೇರೆಡೆಗೆ ವರ್ಗಾವಣೆ ಮಾಡಬೇಕು ಎಂದು ಜಿಲ್ಲಾಧಿಕಾರಿಗಳಿಗೆ ಸಾರ್ವಜನಿಕರು ದೂರು ನೀಡಿದರು.

ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಶ್ರೀನಿವಾಸ್, ಉಪ ಸಂರಕ್ಷಣಾಧಿಕಾರಿ ಸೀಮಾ, ಡಿಡಿಪಿಐ ಜವರೇಗೌಡ, ಎಸಿಎಫ್‌ಗಳಾದ ಬಸವರಾಜ್, ಅಭಿಷೇಕ್, ಜಿಲ್ಲಾ ಭೂಮಾಪನ ಅಧಿಕಾರಿ ರಮ್ಯ, ಅಡಿಷನಲ್ ಎಸ್‌ಪಿ ನಾಗೇಶ್, ಜಿಲ್ಲಾ ಕಾರ್ಮಿಕ ಅಧಿಕಾರಿ ಜೀವನ್ ಕುಮಾರ್, ಜಿಲ್ಲಾ ಆರೋಗ್ಯಾಧಿಕಾರಿ ಕುಮಾರಸ್ವಾಮಿ, ಆರೋಗ್ಯಾಧಿಕಾರಿ ಡಾ.ರವಿಕುಮಾರ್, ಇಓ ಧರಣೇಶ್ ಸೇರಿದಂತೆ ಇನ್ನಿತರರಿದ್ದರು.

ನಂಜನಗೂಡು ನಗರಸಭೆಯಿಂದ ಹೊಲಿಗೆ ಯಂತ್ರ ವಿತರಣೆ

ನಂಜನಗೂಡು, ಸೆ.17– ಹಿಂದುಳಿದ ಮಹಿಳೆಯರ ಜೀವನಕ್ಕೆ ನೆರವಾಗಲು, ಅವರನ್ನು ಆರ್ಥಿಕವಾಗಿ ಸಧೃಡರನ್ನಾಗಿಸಲು ನಗರಸಭೆ ನಿಧಿ ಅನುದಾನದಿಂದ ಹೊಲಿಗೆ ಯಂತ್ರ ಹಾಗೂ ಐರನ್ ಬಾಕ್ಸ್‌ಗಳನ್ನು ವಿತರಿಸಲಾಗಿದೆ ಎಂದು ಶಾಸಕ ದರ್ಶನ್ ತಿಳಿಸಿದರು.

ನಗರದ ನಗರಸಭೆ ಆವರಣದಲ್ಲಿ ಫಲಾನುಭವಿಗಳಿಗೆ ವಿವಿಧ ಸವಲತ್ತು ವಿತರಿಸಿ ಮಾತನಾಡಿದ ಅವರು, ರಾಜ್ಯ ಕಾಂಗ್ರೆಸ್ ಸರ್ಕಾರ ಮಹಿಳೆಯರಿಗೆ ಮಾಸಿಕ 2 ಸಾವಿರ, ಉಚಿತ ಬಸ್ ಪ್ರಯಾಣ ಸೌಲಭ್ಯ ಒದಗಿಸಿ ನುಡಿದಂತೆ ನಡೆದಿದೆ. ನಗರಸಭೆಯಿಂದ ಹಿಂದುಳಿದ ಮಹಿಳೆಯರು ಸ್ವಯಂ ಉದ್ಯೋಗ ಕೈಗೊಳ್ಳಲು ನೆರವು ನೀಡುವ ಸಲುವಾಗಿ ಸವಲತ್ತುಗಳನ್ನು ವಿತರಿಸಲಾಗಿದೆ. ಇದರ ಸದುಪಯೋಗ ಪಡೆದು ಮಹಿಳೆಯರು ಆರ್ಥಿಕವಾಗಿ ಸಬಲರಾಗಿ ಎಂದರಲ್ಲದೇ ಮುಂದಿನ ದಿನಗಳಲ್ಲಿ ನಗರದ ಉಳಿದ ಬಡಾವಣೆಗಳಲ್ಲಿ ಅರ್ಹ ಬಡ ಮಹಿಳೆಯರಿಂದ ಅರ್ಜಿ ಪಡೆದು ಹೊಲಿಗೆ ಯಂತ್ರ ವಿತರಿಸಲು ಕ್ರಮವಹಿಸಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ನಗರಸಭೆ ಅಧ್ಯಕ್ಷ ಶ್ರೀಕಂಠಸ್ವಾಮಿ, ಉಪಾಧ್ಯಕ್ಷೆ ರೆಹನಾಬಾನು, ಆಯುಕ್ತ ನಂಜುಂಡಸ್ವಾಮಿ, ಸದಸ್ಯರಾದ ಗಾಯತ್ರಿ, ಶ್ವೇತಾಲಕ್ಷ್ಮಿ, ಮಂಗಳಮ್ಮ, ಗಂಗಾಧರ್, ಮೀನಾಕ್ಷಿ, ವಿಜಯಲಕ್ಷ್ಮಿ, ಖಾಲಿದ್, ಯೋಗೀಶ್, ಮಹದೇವಪ್ರಸಾದ್, ರವಿ, ಬಸವರಾಜ್, ದೀಪು, ಸೌಭಾಗ್ಯ, ರಮೇಶ್, ಗ್ಯಾರಂಟಿ ಯೋಜನೆ ಸಮಿತಿ ತಾಲೂಕು ಅಧ್ಯಕ್ಷ ಕೆ.ಮಾರುತಿ ಉಪಸ್ಥಿತರಿದ್ದರು.



ಶಾಸಕ ದರ್ಶನ್ ಫಲಾನುಭವಿಗಳಿಗೆ ವಿವಿಧ ಸವಲತ್ತುಗಳನ್ನು ವಿತರಣೆ ಮಾಡಿದರು.

ಮೈಸೂರಲ್ಲಿರುವ ಟೆಕ್ಕಿಗಳಿಗೆ ವರದಾನವಾದ ಎಕ್ಸ್‌ಪ್ರೆಸ್ ವೇ; ಮೆಟ್ರೊ

ಬೆಂಗಳೂರಲ್ಲಿ ಕೆಲಸ; ಮೈಸೂರಲ್ಲಿ ವಾಸ

- ಮೈಸೂರಿನಿಂದ ಚೆಲ್ಲಘಟ್ಟದವರೆಗೆ ಸಾರಿಗೆ ಬಸ್; ಅಲ್ಲಿಂದ ವೈಟ್‌ಫೀಲ್ಡ್‌ಗೆ ಮೆಟ್ರೊ
- ಎರಡೂವರೆ ಗಂಟೆಯಲ್ಲಿ ಕೆಲಸದ ಸ್ಥಳ ತಲುಪುವ ಉಪಾಯ



ಬಾಪುಲಿಂಗರಾಜ್ ಅರಸ್

ಮೈಸೂರು, ಸೆ.17– ಸಿಲಿಕಾನ್ ಸಿಟಿ ಬೆಂಗಳೂರಿನ ಟ್ರಾಫಿಕ್ ದಟ್ಟಣೆಯಿಂದ ಹೈರಾಣಾಗಿರುವ ಮೈಸೂರಿನ ವಾಸಿಗಳಿಗೆ ಅದರಲ್ಲೂ ಟೆಕ್ಕಿಗಳಿಗೆ ಮೆಟ್ರೊ ಹಾಗೂ ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇ ವರದಾನವಾಗಿದೆ. ಐಟಿ ಕಾರಿಡಾರ್ ವೈಟ್‌ಫೀಲ್ಡ್, ಮಾರತ್ತಳ್ಳಿ, ಮಹದೇವಪುರ ಸೇರಿದಂತೆ ಇತರೆಡೆ ಕೆಲಸ ಮಾಡುವ ಮೈಸೂರಿಗರು ಬೆಂಗಳೂರಿನ ಟ್ರಾಫಿಕ್‌ಗೆ ಗುಡ್ ಬೈ ಹೇಳಿ ಮೈಸೂರಿನಿಂದ ಬೆಂಗಳೂರಿಗೆ ಪ್ರತಿದಿನ ಆರಾಮವಾಗಿ ಪ್ರಯಾಣ ಮಾಡುತ್ತಿದ್ದಾರೆ.

ಬೆಂಗಳೂರಿನ ಐಟಿ ಕಂಪನಿಗಳಲ್ಲಿ ಕೆಲಸ ಮಾಡುವ ಸಾಫ್ಟ್‌ವೇರ್ ಇಂಜಿನಿಯರ್‌ಗಳು ಈ ಮೊದಲು ಬೆಂಗಳೂರಿನಲ್ಲೇ ನೆಲೆಸಿದ್ದರು. ತಾವು ಕೆಲಸ ಮಾಡುವ ಕಂಪನಿ ಹಾಗೂ ಮನೆ ನಡುವಿನ ಅಂತರ ಹೆಚ್ಚಿತ್ತು. ಬೆಳಿಗ್ಗೆ ಮತ್ತು ಸಂಜೆ ಪೀಕ್ ಅವರ್ ಟ್ರಾಫಿಕ್ ದಟ್ಟಣೆಯಲ್ಲಿ ಆಫೀಸ್‌ನಿಂದ ಮನೆ ಸೇರಲು ಕನಿಷ್ಠ ಮೂರ್ನಾಲ್ಕು ಗಂಟೆ ಸಮಯ ಹಿಡಿಯುತ್ತಿತ್ತು. ಆ ವೇಳೆ ಬಸ್‌ನಲ್ಲಿ ಕಾಲಿಡಲು ಜಾಗವಿಲ್ಲದಷ್ಟು ತುಂಬಿರುತ್ತಿದ್ದರು.

ಟ್ರಾಫಿಕ್ ಜಾಮ್‌ನಿಂದ ವಾಹನಗಳು ನಿಂತಲ್ಲೇ ನಿಲ್ಲಬೇಕಿತ್ತು. ಹೆಜ್ಜೆ ನಮಸ್ಕಾರದಂತೆ ನಿಧಾನವಾಗಿ ಸಾಗುವಷ್ಟರಲ್ಲಿ ಜನರು ಹೈರಾಣಾಗುತ್ತಿದ್ದರು. ಈ ಟ್ರಾಫಿಕ್ ಕಿರಿಕಿರಿಯಿಂದ ತಪ್ಪಿಸಿಕೊಳ್ಳುವುದು ಹೇಗಪ್ಪಾ ಎಂದು ಟೆಕ್ಕಿಗಳು ಚಿಂತೆಗೆ ಬಿದ್ದಿದ್ದರು. ಆದರೆ ಅನಿವಾರ್ಯವಾದ ಕಾರಣ ಈ ತೊಂದರೆ ಅನುಭವಿಸಲೇಬೇಕಿತ್ತು.

ಆದರೆ ಈಗ ವೈಟ್‌ಫೀಲ್ಡ್, ಮಾರತ್ತಳ್ಳಿ, ಮಹದೇವಪುರ ಸೇರಿದಂತೆ ಇತರೆಡೆ ಕೆಲಸ ಮಾಡುವ ಮೈಸೂರು ವಾಸಿಗಳು ಈ ಕಿರಿಕಿರಿಯಿಂದ ಪಾರಾಗಿದ್ದಾರೆ. ಎಕ್ಸ್‌ಪ್ರೆಸ್ ವೇನಲ್ಲಿ ಮೈಸೂರಿನಿಂದ ಸಲೀಸಾಗಿ ಬೆಂಗಳೂರು ಸೇರುತ್ತಾರೆ. ಅಷ್ಟೇ ಸಲೀಸಾಗಿ ಮೈಸೂರಿಗೆ ಬಂದು ಸೇರುತ್ತಿದ್ದಾರೆ. ಬೆಂಗಳೂರಿನ ಟ್ರಾಫಿಕ್‌ನಲ್ಲಿ ನಿಂತು ಮನೆಗೆ ಹೋಗುವ ವೇಳೆಗೆಲ್ಲಾ ಮುಂಚಿತವಾಗಿಯೇ ಮೈಸೂರು ಬಂದು ಸೇರುತ್ತಿದ್ದಾರೆ.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಹಾಗೂ ಸಿಲಿಕಾನ್ ಸಿಟಿಯ ಬೆಂಗಳೂರು ಮೆಟ್ರೊ ಇವರಿಗೆ ವರದಾನವಾಗಿದೆ. ಇದರಿಂದ ಬೆಂಗಳೂರು ತೊರೆದಿರುವ ಬಹಳಷ್ಟು ಟೆಕ್ಕಿಗಳು ಈಗ ಮೈಸೂರಿನಲ್ಲೇ ವಾಸವಿದ್ದು, ಪ್ರತಿದಿನ ಬೆಂಗಳೂರಿಗೆ ಹೋಗಿ ಬರುತ್ತಿದ್ದಾರೆ.

ಮೈಸೂರಿನಿಂದ ಬೆಂಗಳೂರಿಗೆ ಪ್ರತಿ 15 ನಿಮಿಷಕ್ಕೊಂದು ಬಸ್ ಇದೆ. ಮೈಸೂರಿನ ಗ್ರಾಮಾಂತರ ಬಸ್ ನಿಲ್ದಾಣದಿಂದ ಹೊರಡುವ ಟೆಕ್ಕಿಗಳು ಒಂದೂ ಮುಕ್ಕಾಲು ಗಂಟೆಗೆಲ್ಲಾ ಚೆಲ್ಲಘಟ್ಟ ತಲುಪುತ್ತಾರೆ. ಮೆಟ್ರೋ ಹತ್ತಿ ವೈಟ್‌ಫೀಲ್ಡ್‌ಗೆ ಅರ್ಧ ಗಂಟೆಯಲ್ಲಿ ತಲುಪುತ್ತಾರೆ. ಇದರಿಂದ ಕೇವಲ ಎರಡೂವರೆ ಗಂಟೆ ಸಮಯಾವಧಿಯಲ್ಲಿ ಮೈಸೂರಿನಿಂದ ತಾವು ಕೆಲಸ ಮಾಡುವ ಐಟಿ ಕಂಪನಿ ಸೇರುತ್ತಾರೆ.

ಮಹಿಳಾ ಸಾಫ್ಟ್‌ವೇರ್ ಇಂಜಿನಿಯರ್‌ಗಳಿಗಂತೂ ಬೆಂಗಳೂರು ಮೆಟ್ರೊ ಹಾಗೂ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಬಂಪರ್ ಗಿಫ್ಟ್.

ಶಕ್ತಿ ಯೋಜನೆಯಲ್ಲಿ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಎಲ್ಲೇ ಪ್ರಯಾಣ ಮಾಡಿದರೂ ಉಚಿತ. ಇದರಿಂದ ಮೈಸೂರಿನಿಂದ ಚೆಲ್ಲಘಟ್ಟಕ್ಕೆ ಹೋಗಲು ಹಾಗೂ ಅಲ್ಲಿಂದ ಮೈಸೂರಿಗೆ ಬರಲು ಮಹಿಳಾ ಸಾಫ್ಟ್‌ವೇರ್ ಇಂಜಿನಿಯರ್‌ಗಳಿಗೆ ಉಚಿತ.

ಚೆಲ್ಲಘಟ್ಟದಿಂದ ವೈಟ್‌ಫೀಲ್ಡ್‌ಗೆ ಹೋಗಿ ಬರಲು 120 ರೂಪಾಯಿ ಖರ್ಚು. ಅದರಲ್ಲೂ ಶನಿವಾರ ಹಾಗೂ ಭಾನುವಾರ ರಜಾ. ವಾರಕ್ಕೆ 5 ದಿನ ಮಾತ್ರ ಕೆಲಸ. ಈ ಮೂಲಕ ಮೆಟ್ರೊ ಟಿಕೆಟ್‌ಗಾಗಿ ತಿಂಗಳಿಗೆ 2640 ರೂಪಾಯಿ ಖರ್ಚು. ಕನಿಷ್ಠ 50 ಸಾವಿರದಿಂದ ಲಕ್ಷಾಂತರ ರೂಪಾಯಿ ವೇತನ ಪಡೆಯುವ ಸಾಫ್ಟ್‌ವೇರ್ ಇಂಜಿನಿಯರ್‌ಗಳಿಗೆ ಈ ವೆಚ್ಚ ಏನೇನೂ ಅಲ್ಲ. ಇದರಿಂದ ಪುರುಷರಿಗಿಂತ ಮಹಿಳಾ ಸಾಫ್ಟ್‌ವೇರ್ ಇಂಜಿನಿಯರ್‌ಗಳಿಗೆ ಬಹುಪಯೋಗವಾಗಿದೆ.

ಬನಶಂಕರಿ ಮುಖೇನ ಬಿಟಿಎಂ ಲೇಔಟ್, ಸಿಲ್ಕ್ ಬೋರ್ಡ್, ಎಲೆಕ್ಟ್ರಾನಿಕ್ ಸಿಟಿ ಮೂಲಕ ನಾರಾಯಣ ಹೃದಯಾಲಯದ ತನಕ ಮೆಟ್ರೊ ಸಂಚಾರ ತಿಂಗಳಲ್ಲಿ ಆರಂಭವಾಗಲಿದೆ. ಇದರ ಟ್ರಯಲ್ ರನ್ ಈಗಾಗಲೇ ನಡೆಯುತ್ತಿದೆ. ಇದು ಆರಂಭವಾದರೆ ಎಲೆಕ್ಟ್ರಾನಿಕ್ ಸಿಟಿಯಲ್ಲಿ ಕೆಲಸ ಮಾಡುವ, ಮೈಸೂರಿನ ಬಹಳಷ್ಟು ಸಾಫ್ಟ್‌ವೇರ್ ಇಂಜಿಯರ್‌ಗಳಿಗೆ ಮತ್ತಷ್ಟು ಅನುಕೂಲವಾಗಲಿದೆ.

ರಸ್ತೆ ಗುಣಮಟ್ಟ ಹಾಗೂ ಸುಗಮ ವಾಹನ ಸಂಚಾರ ವ್ಯವಸ್ಥೆ ಆ ದೇಶದ ಅಭಿವೃದ್ಧಿ ಬಿಂಬಿಸಲಿದೆ ಎಂಬ ಮಾತಿದೆ. ಅದರಂತೆ ದಿನ ಕಳೆದಂತೆ ಆಗುತ್ತಿರುವ ರಸ್ತೆ ಗುಣಮಟ್ಟ ಹಾಗೂ ನವೀನ ತಂತ್ರಜ್ಞಾನದ ಮೆಟ್ರೊದಂತಹ ಸಂಚಾರ ವ್ಯವಸ್ಥೆಯಿಂದ ಅಭಿವೃದ್ಧಿ ಮತ್ತಷ್ಟು ವೇಗ ಪಡೆಯಲಿದೆ. ಇದರಿಂದ ಜನ ಸಾಮಾನ್ಯರಿಗೆ ಬಹು ಉಪಯೋಗವಾಗಲಿದೆ.

ವೈಟ್‌ಫೀಲ್ಡ್‌ನಲ್ಲಿ ಟಿಸಿಎಸ್, ಅಸ್ಸೆಂಚರ್, ವಿಪ್ರೊ, ಎಂ ಯು ಸಿಗ್ಮಾ, ಟೆಸ್ಕೊ, ಐಬಿಎಂ, ಡೆಲ್, ಹೂವಾಯ್ ಸೇರಿದಂತೆ ನೂರಾರು ಐಟಿ ಕಂಪನಿಗಳಿವೆ. ಮೈಸೂರಿನ ಸಾವಿರಾರು ಐಟಿ ಉದ್ಯೋಗಿಗಳು ವೈಟ್‌ಫೀಲ್ಡ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ.

ಬೆಂಗಳೂರಿನಲ್ಲೇ ವಾಸವಿದ್ದರೆ ಬಾಡಿಗೆ ಮನೆ, ಪ್ರಯಾಣ ವೆಚ್ಚ ಸೇರಿದಂತೆ ಜೀವನ ನಿರ್ವಹಣೆ ದುಬಾರಿಯೇ. ಆದರೆ ನಿವೃತ್ತಿದಾರರ ಸ್ವರ್ಗ ಮೈಸೂರಿನಲ್ಲಿ ಜೀವನ ಸರಾಗ. ಆದ್ದರಿಂದ ಬಹಳಷ್ಟು ಟೆಕ್ಕಿಗಳು ಬೆಂಗಳೂರು ವಾಸಕ್ಕೆ ಗುಡ್ ಬೈ ಹೇಳಿ ಈಗ ಮೈಸೂರನ್ನೇ ಆಯ್ಕೆ ಮಾಡಿಕೊಂಡಿದ್ದಾರೆ. ಇದರಿಂದ ಪ್ರತಿ ಟೆಕ್ಕಿ ಸಾವಿರಾರು ರೂಪಾಯಿ ಉಳಿತಾಯ ಮಾಡುತ್ತಿದ್ದಾರೆ. ಜೊತೆಗೆ ಸಮಯ ಕೂಡ ಉಳಿತಾಯವಾಗುತ್ತಿದೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಭೀಮಾ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ರಾಯನ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಡಬ್ಬಲ್ ಇಸ್ಮಾರ್ಟ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಭೀಮ (ಕ)	4 ಪ್ರದರ್ಶನಗಳು
ಗಾಯಿತ್ರಿ	
ರಾನಿ (ಕ)	4 ಪ್ರದರ್ಶನಗಳು
ರಾಜಕಮಲ್	
ಎಆರ್‌ಎಂ (ತ)	4 ಪ್ರದರ್ಶನಗಳು
ಸಂಗಂ	
ಭೀಮಾ (ಕ)	4 ಪ್ರದರ್ಶನಗಳು
ಲಿಡೋ	
ಕಳಿಂಗ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಸ್ತ್ರೀ–2 (ಹಿ)	4 ಪ್ರದರ್ಶನಗಳು
ಪ್ರಭಾ	
ಖೈದಿ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ದಿ ಬಕಿಂಗ್ಹ್ಯಾಮ್ ಮರ್ಡರ್ಸ್ (ಹಿಂ): ಬೆ.10.45ಕ್ಕೆ, ಶಾಲಿವಾಹನ ಶಕೆ (ಕ): ಮ.1.05ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ಸಂ.4ಕ್ಕೆ, ಎಆರ್‌ಎಂ (3ಡಿ) (ಮ): ರಾ.7.05ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ರಾ.9.55ಕ್ಕೆ.
ಸ್ಕ್ರೀನ್ 2	ಕಾಲಾಪತ್ಥರ್ (ಕ): ಬೆ.11.10ಕ್ಕೆ, ಸ್ತ್ರೀ 2 (ಹಿಂ): ಮ.1.35ಕ್ಕೆ, ಕಲ್ಜಿಗ (ಕ): ಸಂ.4.35ಕ್ಕೆ, ದಿ ಬಕಿಂಗ್ಹ್ಯಾಮ್ ಮರ್ಡರ್ಸ್ (ಹಿಂ): ರಾ.7.05ಕ್ಕೆ, ಕೊಂಡಲ್ (ಮ): ರಾ.9.55ಕ್ಕೆ.
ಸ್ಕ್ರೀನ್ 3	ರಾನಿ (ಕ): ಬೆ.10.45ಕ್ಕೆ, ಮ.1.45ಕ್ಕೆ, ಅನ್ನ (ಕ): ಸಂ.4.45ಕ್ಕೆ, ಲಾಫಿಂಗ್ ಬುದ್ಧ (ಕ): ರಾ.7.20ಕ್ಕೆ, ಕಿಷ್ಕಿಂಧಾ ಖಂಡಂ (ಮ): ರಾ.10ಕ್ಕೆ.
ಸ್ಕ್ರೀನ್ 4	ದಿ ಗ್ರೇಟೆಸ್ಟ್ ಆಫ್ ಆಲ್ ಟೈಂ (ತ): ಬೆ.10.15ಕ್ಕೆ, ಸಂ.6.45ಕ್ಕೆ, ರಾ.10.10ಕ್ಕೆ, ವಿಕಾಸಪರ್ವ (ಕ): ಮ.1.40ಕ್ಕೆ, ಉತ್ಸವಂ (ತೆ): ಸಂ.4ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ದಿ ಗ್ರೇಟೆಸ್ಟ್ ಆಫ್ ಆಲ್ ಟೈಂ (ತ): ಬೆ.10.25ಕ್ಕೆ, ರಾ.9.30ಕ್ಕೆ, ರಾನಿ (ಕ): ಮ.1.45ಕ್ಕೆ, ಕಾಲಾಪತ್ಥರ್ (ಕ): ಸಂ.4.35ಕ್ಕೆ, ಮಾತು ವದಲಾರ 2 (ತೆ): ಸಂ.6.50ಕ್ಕೆ.
ಸ್ಕ್ರೀನ್ 2	ಕಾಲಾಪತ್ಥರ್ (ಕ): ಬೆ.10.20ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ಮ.12.35ಕ್ಕೆ, ಸಂ.6.45ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ಮ.3.40ಕ್ಕೆ, ಎಆರ್‌ಎಂ (3ಡಿ) (ಮ): ರಾ.9.50ಕ್ಕೆ.
ಸ್ಕ್ರೀನ್ 3	ಇಬ್ಬನಿ ತಬ್ಬಿದ ಇಳೆಯಲಿ (ಕ): ಬೆ.10.45ಕ್ಕೆ, ಎಆರ್‌ಎಂ (3ಡಿ) (ಮ): ಮ.3.20ಕ್ಕೆ, ದಿ ಗ್ರೇಟೆಸ್ಟ್ ಆಫ್ ಆಲ್ ಟೈಂ (ತ): ಸಂ.6.15ಕ್ಕೆ, ಕಳಿಂಗ (ತೆ): ರಾ.9.35ಕ್ಕೆ.
ಸ್ಕ್ರೀನ್ 4	ಶಾಲಿವಾಹನ ಶಕೆ (ಕ): ಬೆ.10.40ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ಮ.1.20ಕ್ಕೆ, ಕಲ್ಜಿಗ (ಕ): ಸಂ.4.25ಕ್ಕೆ, ರಾನಿ (ಕ): ಸಂ.6.40ಕ್ಕೆ, ಉತ್ಸವಂ (ತೆ): ರಾ.9.30ಕ್ಕೆ.


ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಇಸ್ರೇಲ್‌ನಿಂದ ಪೇಜರ್‌ಗಳ ಸ್ಫೋಟ: ಲೆಬನಾನ್, ಸಿರಿಯಾದಲ್ಲಿ 9 ಸಾವು

2800 ಹೆಜ್ಬೊಲ್ಲಾಗಳಿಗೆ ಗಾಯ!



ಸಿರಿಯಾ, ಸೆ.17– ಲೆಬನಾನ್, ಸಿರಿಯಾಗಳಲ್ಲಿ ಪೇಜರ್‌ಗಳು ಸ್ಫೋಟಗೊಂಡು 9ಮಂದಿ ಸಾವನ್ನಪ್ಪಿ 2,800 ಕ್ಕೂ ಹೆಚ್ಚಿನ ಹೆಜ್ಬೊಲ್ಲಾ ಸದಸ್ಯರು ತೀವ್ರವಾಗಿ ಗಾಯಗೊಂಡಿದ್ದಾರೆ. ಲೆಬನಾನ್‌ನ ಆರೋಗ್ಯ ಸಚಿವ ಫಿರಾಸ್ ಅಬಿಯಾಡ್ ಇದನ್ನು ದೃಢಪಡಿಸಿದ್ದಾರೆ.

2,750 ಮಂದಿಯ ಪೈಕಿ 200 ಮಂದಿಗೆ ತೀವ್ರವಾಗಿ ಗಾಯಗಳಾಗಿದ್ದು, ಹೆಚ್ಚಿನ ಪ್ರಕರಣಗಳಲ್ಲಿ ಮುಖ, ಕೈ, ಹೊಟ್ಟೆಗಳಿಗೆ ಹಾನಿಯುಂಟಾಗಿದೆ ಎಂದು ಫಿರಾಸ್ ಅಬಿಯಾಡ್ ಹೇಳಿದ್ದಾರೆ. ಹಮಾಸ್‌ನ ಮಿತ್ರ ಪಕ್ಷವಾದ ಹಿಜ್ಬುಲ್ಲಾ, ಪೇಜರ್ ದಾಳಿಗೆ ಇಸ್ರೇಲ್ ಸಂಪೂರ್ಣ ಹೊಣೆಯಾಗಿದೆ ಎಂದು ಆರೋಪಿಸಿದೆ.

ನೂರಾರು ಹ್ಯಾಂಡ್‌ಹೆಲ್ಡ್ ಪೇಜರ್‌ಗಳು ಲೆಬನಾನ್‌ನಾದ್ಯಂತ ಮತ್ತು ಸಿರಿಯಾದ ಕೆಲವು ಭಾಗಗಳಲ್ಲಿ ಏಕಕಾಲದಲ್ಲಿ ಸ್ಫೋಟಗೊಂಡಿವೆ ಅನಾಮಧೇಯತೆಯ ಷರತ್ತು ವಿಧಿಸಿ ಈ ಕುರಿತು ಮಾತನಾಡಿದ ಹೆಜ್ಬೊಲ್ಲಾ ಅಧಿಕಾರಿಯೊಬ್ಬರು ಅಸೋಸಿಯೇಟೆಡ್ ಪ್ರೆಸ್‌ಗೆ ಹೇಳಿಕೆ ನೀಡಿದ್ದು, ಗುಂಪಿನ ಸದಸ್ಯರು ಸೇರಿದಂತೆ ಹಲವು ಜನರು ತಮ್ಮ ಹ್ಯಾಂಡ್ ಹೆಲ್ಡ್ ಪೇಜರ್‌ಗಳು ಸ್ಫೋಟಗೊಂಡ ಪರಿಣಾಮ ಲೆಬನಾನ್‌ನ ವಿವಿಧ ಭಾಗಗಳಲ್ಲಿ ಗಾಯಗೊಂಡಿದ್ದಾರೆ, ಸಿರಿಯಾದಲ್ಲೂ ಪೇಜರ್‌ಗಳು ಸ್ಫೋಟಗೊಂಡು ತಮ್ಮ ಯೋಧರು ಗಾಯಗೊಂಡಿದ್ದಾರೆ ಇದರ ಹಿಂದೆ ಇಸ್ರೇಲ್ ಕೈವಾಡ ಇದೆ ಎಂದು ಆರೋಪಿಸಿದ್ದಾರೆ.

ಮೊಬೈಲ್ ಕೊಂಡೊಯ್ಯದಂತೆ ಎಚ್ಚರಿಕೆ ನೀಡಿದ್ದ ಹೆಜ್ಬೊಲ್ಲಾ ನಾಯಕ ಹಸನ್ ನಸ್ರಲ್ಲಾ: ಹಿಜ್ಬುಲ್ಲಾ ನಾಯಕ ಹಸನ್ ನಸ್ರಲ್ಲಾ ಅವರು ಈ ಹಿಂದೆ ಗುಂಪಿನ ಸದಸ್ಯರಿಗೆ ಸೆಲ್‌ಫೋನ್‌ಗಳನ್ನು ಕೊಂಡೊಯ್ಯದಂತೆ ಎಚ್ಚರಿಕೆ ನೀಡಿದ್ದರು, ಇಸ್ರೇಲ್ ತಮ್ಮ ಚಲನವಲನಗಳನ್ನು ಪತ್ತೆಹಚ್ಚಲು ಮತ್ತು ಉದ್ದೇಶಿತ ಸ್ಟ್ರೈಕ್‌ಗಳನ್ನು ನಡೆಸಲು ಅವುಗಳನ್ನು ಬಳಸಬಹುದು ಎಂದು ಎಚ್ಚರಿಕೆ ನೀಡಿದ್ದರು.

ಮಹಿಷ ದಸರಾ ಬದಲು ಮಹಿಷ ಮಂಡಲೋತ್ಸವ ಆಚರಣೆ

ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಆಹ್ವಾನಿಸಲು ಚಿಂತನೆ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿದರು.

ಮೈಸೂರು, ಸೆ.17(ಜಿಎ)–ಮಹಿಷ ದಸರಾ ಬದಲು ಈ ಬಾರಿ ಮಹಿಷ ಮಂಡಲೋತ್ಸವ ಆಚರಿಸಲಾಗುತ್ತಿದ್ದು, ಈ ಮಂಡಲೋತ್ಸವ ಉದ್ಘಾಟನೆಗೆ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಆಹ್ವಾನಿಸಲು ಚಿಂತಿಸಲಾಗಿದೆ ಎಂದು ಮಹಿಷ ಮಂಡಲೋತ್ಸವ ಸಮಿತಿ ಅಧ್ಯಕ್ಷ ಹಾಗೂ ಮಾಜಿ ಮೇಯರ್ ಪುರುಷೋತ್ತಮ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ದಸರಾ ಮಹೋತ್ಸವದ ಪರ್ಯಾಯವಾಗಿ ಮಹಿಷ ದಸರಾ ಆಚರಿಸುತ್ತಾರೆ ಎಂಬ ಹಿನ್ನೆಲೆಯಲ್ಲಿ ಈ ಬಾರಿ ಮಹಿಷ ದಸರಾ ಆಚರಣಾ ಸಮಿತಿ ಬದಲು ಮಹಿಷ ಮಂಡಲೋತ್ಸವ ಎಂದು ಹೆಸರು ಬದಲಿಸಿ, ಮಹಿಷ ಮಂಡಲೋತ್ಸವ ಆಚರಿಸಲು ನಿರ್ಧರಿಸಲಾಗಿದೆ ಎಂದರು.

ಈ ಹಿಂದೆ ಮಹಿಷ ದಸರಾ ಆಚರಣೆ ಬಗ್ಗೆ ಸಂಸದ ಯದುವೀರ್ ಅವರು ಬೆಂಬಲ ಸೂಚಿಸಿದ ಹಿನ್ನೆಲೆಯಲ್ಲಿ ಅವರೇ ಮಹಿಷ ಮಂಡಲೋತ್ಸವ ಉದ್ಘಾಟಿಸುವಂತೆ ಆಹ್ವಾನಿಸಲು ಸಮಿತಿ ಚಿಂತಿಸಿದ್ದು, ಸದ್ಯದಲ್ಲಿಯೇ ಭೇಟಿ ಮಾಡುತ್ತೇವೆ. ಅವರು ಇದಕ್ಕೆ ಒಪ್ಪುತ್ತಾರೆ ಎಂಬ ಆಶಾಭಾವನೆ ಇದೆ ಎಂದು ತಿಳಿಸಿದರು.

ಈ ಬಾರಿ ಮಹಿಷ ಮಂಡಲೋತ್ಸವದ ಅಂಗವಾಗಿ ಸೆ.21ರಂದು ಬೆಳಗ್ಗೆ 11ಗಂಟೆಗೆ ಉರಿಲಿಂಗಿ ಪೆದ್ದಿ ಮಠ ಹಾಗೂ ವಿಶ್ವಮೈತ್ರಿ ಬುದ್ಧ ವಿಹಾರದ ಸಂಯುಕ್ತಾಶ್ರಯದಲ್ಲಿ ಬುದ್ಧ ವಿಹಾರದಲ್ಲಿ ವಿಚಾರ ಸಂಕಿರಣ ಆಯೋಜಿಸಲಾಗುತ್ತಿದೆ. ಇದಕ್ಕೆ ಎಲ್ಲಾ ಧರ್ಮ, ಜಾತಿಯವರಿಗೆ ಮುಕ್ತ ಸ್ವಾಗತವಿದೆ. ವಿಚಾರ ಸಂಕಿರಣದಲ್ಲಿ ಪ್ರಗತಿಪರ ಚಿಂತಕರು ಪಾಲ್ಗೊಳ್ಳಲಿದ್ದಾರೆ ಎಂದರು.

ಸೆ.29ರಂದು ಬೆಳಗ್ಗೆ 8.30ಕ್ಕೆ ಚಾಮುಂಡಿ ಬೆಟ್ಟದ ಮಹಿಷನ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿದ ಬಳಿಕ ಬೆಳಗ್ಗೆ 11ಗಂಟೆಗೆ ಪುರಭವನದಲ್ಲಿ ಸುಮಾರು ಹತ್ತು ಸಾವಿರ ಮಂದಿ ಪಾಲ್ಗೊಳ್ಳುವಂತೆ ವೇದಿಕೆ ಕಾರ್ಯಕ್ರಮ ನಡೆಯಲಿದೆ ಯಾರ ಮನಸ್ಸನ್ನೂ ನೋಯಿಸುವ ಉದ್ದೇಶ ತಮಗಿಲ್ಲ. ಈ ಕಾರ್ಯಕ್ರಮದಲ್ಲಿ ಅಶೋಕಪುರಂ, ಗಾಂಧಿನಗರದ ಜನತೆ ಮಾತ್ರವಲ್ಲದೆ, ರಾಜ್ಯದ ಇತರೆಡೆಯಿಂದಲೂ ಆಸಕ್ತರು ಆಗಮಿಸಲಿದ್ದಾರೆ. ಕಾರ್ಯಕ್ರಮಕ್ಕೆ ಯಾರದೇ ವಿರೋಧವಿದ್ದರೂ ತನ್ನ ಪಾಡಿಗೆ ತಾನು ಸಾಗುತ್ತದೆ ಎಂದರು.

ಈ ಆಚರಣೆಗೆ ಮೊದಲು ಅಡಚಣೆ ಇರಲಿಲ್ಲ, ಆದರೆ ಓರ್ವರ ಕಾರಣದಿಂದಾಗಿ ಕೆಲ ಸಮಸ್ಯೆಗಳು ಎದುರಾದರೂ ಆಚರಣೆ ನಿಲ್ಲಲಿಲ್ಲ. ನಾವು ಹೇಳುತ್ತಿರುವುದು ಮಾಜಿ ಸಂಸದ ಪ್ರತಾಪ್‌ಸಿಂಹರಿಗೆ ಅರ್ಥವಾಗುತ್ತಿಲ್ಲ ಎಂದರೆ ಅವರಿಗೆ ಬುದ್ಧಿ ಭ್ರಮಣೆ ಆಗಿರಬೇಕೆಂದು ಲೇವಡಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಉರಿಲಿಂಗಿ ಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ, ಹಿರಿಯ ಸಾಹಿತಿ ಪ್ರೊ.ಕೆ.ಎಸ್. ಭಗವಾನ್, ವಿಷಕಂಠು, ಸಿದ್ದಸ್ವಾಮಿ, ಸೋಮಯ್ಯ ಮಲೆಯೂರು ಉಪಸ್ಥಿತರಿದ್ದರು.

ವಿಶ್ವ ಆತ್ಮಹತ್ಯೆ ತಡೆಗಟ್ಟುವ ದಿನಾಚರಣೆ

ಮೈಸೂರು, ಸೆ.17–ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದಡಿ ಸೆಪ್ಟೆಂಬರ್ 18ರಂದು ಅಪರಾಹ್ನ 12.30 ಗಂಟೆಗೆ ಯುವರಾಜ ಕಾಲೇಜಿನಲ್ಲಿ ವಿಶ್ವ ಆತ್ಮಹತ್ಯೆ ತಡೆಗಟ್ಟುವ ದಿನಾಚರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಪ್ರವೇಶಾತಿಗಾಗಿ ಅರ್ಜಿ ಆಹ್ವಾನ

ಮೈಸೂರು, ಸೆ17–ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಾತಿ ಪಡೆಯಲು ಬಯಸುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ

ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ 25% ಮೀಸಲಾತಿಯಿದ್ದು, ಆ ವಿದ್ಯಾರ್ಥಿಗಳು ಕೂಡ ಆನ್‌ಲೈನ್ www.swdhims.karnataka.gov.in ವೆಬ್‌ಸೈಟ್ ಮೂಲಕ ಸೆಪ್ಟೆಂಬರ್ 30 ರೊಳಗೆ ಅರ್ಜಿ ಸಲ್ಲಿಸಬಹುದಾಗಿರುತ್ತದೆ. ಅರ್ಜಿ ಸಲ್ಲಿಸಿದ ನಂತರ ಆನ್‌ಲೈನ್ ಅರ್ಜಿ ಪ್ರತಿಯೊಂದಿಗೆ ದೃಢೀಕೃತ ದಾಖಲೆಗಳನ್ನು ಆಯ್ಕೆ ಮಾಡಿರುವ ವಿದ್ಯಾರ್ಥಿನಿಲಯಗಳ ಮೇಲ್ವಿಚಾರಕರುಗಳಿಗೆ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಪಡುವಾರಹಳ್ಳಿಯಲ್ಲಿರುವ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯ ದೂ.ಸಂ: 0821–2520910 ಅನ್ನು ಸಂಪರ್ಕಿಸಬಹುದು ಎಂದು ಮೈಸೂರು ತಾಲೂಕಿನ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಜಿಲ್ಲಾಸ್ಪತ್ರೆ, ಪಿಕೆಟಿಬಿ ಆಸ್ಪತ್ರೆಯಲ್ಲಿ ಅವ್ಯವಸ್ಥೆ

ವೈದ್ಯರು, ಸಿಬ್ಬಂದಿಯ ತರಾಟೆಗೆ ತೆಗೆದುಕೊಂಡ ಶಾಸಕ ಹರೀಶ್‌ಗೌಡ



ಶಾಸಕ ಕೆ.ಹರೀಶ್‌ಗೌಡರು ಮಂಗಳವಾರ ಜಿಲ್ಲಾಸ್ಪತ್ರೆಗೆ ದಿಢೀರ್ ಭೇಟಿ ನೀಡಿ, ಪರಿಶೀಲಿಸಿದರು.

ಮೈಸೂರು, ಸೆ.17– ನಗರದ ಕೆಆರ್‌ಎಸ್ ರಸ್ತೆಯಲ್ಲಿರುವ ಜಿಲ್ಲಾಸ್ಪತ್ರೆ ಹಾಗೂ ಪಿಕೆಟಿಬಿ ಆಸ್ಪತ್ರೆಗೆ ದಿಢೀರ್ ಭೇಟಿ ನೀಡಿದ ಕೆ.ಹರೀಶ್ ಗೌಡರು, ಆಸ್ಪತ್ರೆಗಳ ಅವ್ಯವಸ್ಥೆ ಕಂಡು ಕೆಂಡಾಮಂಡಲವಾದರು.

ಹೆಬ್ಬಾಳು–ಲೋಕನಾಯಕನಗರ ಬಡಾವಣೆಗಳಲ್ಲಿ ಪಾದಯಾತ್ರೆ ವೇಳೆ, ಪಿಕೆಟಿಬಿ ಆಸ್ಪತ್ರೆಯ ಹೊರ ಗುತ್ತಿಗೆ ನೌಕರರಿಗೆ ಕಳೆದ 8 ತಿಂಗಳಿಂದ ವೇತನ ನೀಡಿಲ್ಲ, ಜಿಲ್ಲಾಸ್ಪತ್ರೆಯಲ್ಲಿ ರೋಗಿಗಳಿಗೆ ಸರಿಯಾದ ಚಿಕಿತ್ಸೆ ಸಿಗುತ್ತಿಲ್ಲ, ಆಸ್ಪತ್ರೆ ಸಿಬ್ಬಂದಿ ಸಹನೆಯಿಂದ ವರ್ತಿಸುವುದಿಲ್ಲ ಎಂಬಿತ್ಯಾದಿ ದೂರುಗಳು ಕೇಳಿಬಂದಿದ್ದರಿಂದ ಶಾಸಕರು, ಆಸ್ಪತ್ರೆಗಳಿಗೆ ದಿಢೀರ್ ಭೇಟಿ ನೀಡಿದರು.

ಈ ಸಂಧರ್ಭದಲ್ಲಿ ಹೊರ ರೋಗಿ ವಿಭಾಗದ ನೋಂದಣಿಗೆ ಜನ ಸಾಲುಗಟ್ಟಿ ನಿಂತಿದ್ದರೂ ಓರ್ವ ಸಿಬ್ಬಂದಿ ಮಾತ್ರ ನೋಂದಣಿ ಮಾಡು ತ್ತಿರುವುದನ್ನು ಗಮನಿಸಿ, ಆಸ್ಪತ್ರೆಯ ಮುಖ್ಯಸ್ಥರನ್ನು ತರಾಟೆಗೆ ತೆಗೆದುಕೊಂಡರು. ಆಸ್ಪತ್ರೆಯ ಪ್ರತಿ ವಿಭಾಗಕ್ಕೂ ಭೇಟಿ ನೀಡಿ, ಪರಿಶೀಲಿಸಿದರು. ಈ ವೇಳೆ ರೋಗಿಗಳು ಹಾಗೂ ಅವರ ಸಹಾಯಕರನ್ನು ಮಾತನಾಡಿಸಿ, ಆಸ್ಪತ್ರೆಯಲ್ಲಿನ ವ್ಯವಸ್ಥೆ ಹಾಗೂ ಅವರ ಅನುಭವದ ಬಗ್ಗೆ ತಿಳಿದುಕೊಂಡರು.

ಬಳಿಕ ವೈದ್ಯರು ಹಾಗೂ ಸಿಬ್ಬಂದಿಯೊಂದಿಗೆ ಸಭೆ ನಡೆಸಿ, ರೋಗಿಗಳಿಗೆ ಯಾವುದೇ ರೀತಿಯಲ್ಲೂ ತೊಂದರೆಯಾಗದಂತೆ ನಿರ್ವಹಣೆ ಮಾಡಬೇಕು. ಲಭ್ಯವಿರುವ ಔಷಧಿಗಳನ್ನು ಸಮರ್ಪಕವಾಗಿ ವಿತರಣೆ ಮಾಡಬೇಕು. ದೂರುಗಳು ಬಾರದಂತೆ ಬಡರೋಗಿಗಳಿಗೆ ಸೂಕ್ತ ಚಿಕಿತ್ಸೆ ಕಲ್ಪಿಸಬೇಕು ಎಂದು ತಿಳಿಸಿದರು.

ಬಾಕಿ ವೇತನಕ್ಕೆ ಕ್ರಮ: ಪಿಕೆಟಿಬಿ ಆಸ್ಪತ್ರೆಗೆ ಭೇಟಿ ನೀಡಿ ಹೊರ ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ನೌಕರರಿಗೆ ಕಳೆದ 8 ತಿಂಗಳಿಂದ ವೇತನ ನೀಡದ್ದರ ಬಗ್ಗೆ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಡೀನ್ ಮತ್ತು ನಿರ್ದೇಶಕರಾದ ಡಾ.ದಾಕ್ಷಾಯಣಿ ಹಾಗೂ ಗುತ್ತಿಗೆದಾರರನ್ನು ಕರೆಸಿ ಮಾಹಿತಿ ಪಡೆದ ಶಾಸಕರು, ಹೊರ ಗುತ್ತಿಗೆ ನೌಕರರ ವೇತನದ ಸಮಸ್ಯೆಯನ್ನು ಕೂಡಲೇ ಬಗೆಹರಿಸುವಂತೆ ಸೂಚಿಸಿದರು.

ಕುಂಬಾರಕೊಪ್ಪಲು ಸ್ಮಶಾನ ಸಮಗ್ರ ಅಭಿವೃದ್ಧಿಗೆ ಪಾಲಿಕೆ ಅಧಿಕಾರಿಗಳಿಗೆ ಶಾಸಕ ಹರೀಶ್ ಗೌಡ ತಾಕೀತು

- ಹೆಬ್ಬಾಳು–ಲೋಕನಾಯಕನಗರದಲ್ಲಿ ಪಾದಯಾತ್ರೆ
- ಸಮರ್ಪಕ ಮೂಲಸೌಕರ್ಯ ಕಲ್ಪಿಸಲು ಸೂಚನೆ

ಮೈಸೂರು, ಸೆ17(ಎಸ್‌ಬಿಡಿ)– ಮೈಸೂರಿನ ಕುಂಬಾರಕೊಪ್ಪಲು ಸ್ಮಶಾನದ ಸಮಗ್ರ ಅಭಿವೃದ್ಧಿಗೆ ಶೀಘ್ರ ಕ್ರಮ ವಹಿಸುವಂತೆ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡ ಅಧಿಕಾರಿಗಳಿಗೆ ತಾಕೀತು ಮಾಡಿದರು.

ತಮ್ಮ ಕ್ಷೇತ್ರದ ವಾರ್ಡ್ ನಂ.4, ಹೆಬ್ಬಾಳು–ಲೋಕನಾಯಕನಗರದಲ್ಲಿ ಪಾದಯಾತ್ರೆ ವೇಳೆ ಕುಂಬಾರಕೊಪ್ಪಲು ಸ್ಮಶಾನದ ಅವ್ಯವಸ್ಥೆ ಕಂಡು ಅಧಿಕಾರಿಗಳ ತರಾಟೆ ತೆಗೆದುಕೊಂಡ ಅವರು, ಸಮರ್ಪಕ ಮೂಲಸೌಕರ್ಯಗಳೊಂದಿಗೆ ಸ್ಮಶಾನವನ್ನು ಅಭಿವೃದ್ಧಿಪಡಿಸಬೇಕು ಎಂದು ಸೂಚನೆ ನೀಡಿದರು.

ಕುಂಬಾರಕೊಪ್ಪಲು, ಹೆಬ್ಬಾಳು, ಲೋಕನಾಯಕನಗರ ಹಾಗೂ ಮಹದೇಶ್ವರ ಬಡಾವಣೆಯವರು ನಿಧನರಾದರೆ ಈ ಸ್ಮಶಾನದಲ್ಲಿ ಅಂತ್ಯಸಂಸ್ಕಾರ ನೆರವೇರಿಸಲಾಗುತ್ತದೆ. ಆದರೆ ಇಲ್ಲಿ ನೀರಿನ ವ್ಯವಸ್ಥೆ, ಸ್ವಚ್ಛತೆ ಸೇರಿದಂತೆ ಯಾವುದೇ ಮೂಲ ಸೌಕರ್ಯಗಳಿಲ್ಲ. ನಿರ್ವಹಣೆ ಇಲ್ಲದೆ ಪಾಳು ಜಾಗದಂತಾಗಿದೆ. ಪುಂಡರ ಹಾವಳಿ ಹೆಚ್ಚಾಗಿರುವ ಬಗ್ಗೆ ಸಾರ್ವಜನಿಕರು ದೂರಿದ್ದಾರೆ ಎಂದು ಅಧಿಕಾರಿಗಳಿಗೆ ಬಿಸಿ ಮುಟ್ಟಿಸಿದರು.



ಮೈಸೂರು ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡರು ಪಾದಯಾತ್ರೆ ವೇಳೆ ಕುಂಬಾರಕೊಪ್ಪಲು ಸ್ಮಶಾನ ಪರಿಶೀಲಿಸಿದರು.

ಪಾಲಿಕೆ ಅಧಿಕಾರಿಗಳು ಸ್ಮಶಾನದ ಸಮಗ್ರ ಅಭಿವೃದ್ಧಿಗೆ ಕ್ರಿಯಾಯೋಜನೆ ಸಿದ್ಧಪಡಿಸಬೇಕು. ಪುಂಡರ ಹಾವಳಿ ತಪ್ಪಿಸುವ ನಿಟ್ಟಿನಲ್ಲಿ ಉದ್ಯಾನವನ ಹಾಗೂ ಸ್ಮಶಾನದ ಬಳಿ ಪೊಲೀಸರು ರಾತ್ರಿ ಗಸ್ತು ನಡೆಸಬೇಕು. ಲೋಕನಾಯಕನಗರ ಪಕ್ಕದ ರಸ್ತೆಯಲ್ಲಿ ವಿದ್ಯುತ್ ಕಂಬಗಳನ್ನು ಅವೈಜ್ಞಾನಿಕವಾಗಿ ನೆಡಲಾಗಿದ್ದು, ಅವುಗಳನ್ನು ವ್ಯವಸ್ಥಿತಗೊಳಿಸಬೇಕು. ಖಾತೆ, ಮನೆ ಕಂದಾಯ ಹಾಗೂ ನೀರಿನ ಶುಲ್ಕ ವ್ಯವಸ್ಥೆಯಲ್ಲಿನ ಸಮಸ್ಯೆಗಳನ್ನೂ ಕೂಡಲೇ ಸರಿಪಡಿಸಬೇಕು ಎಂದು ನಿರ್ದೇಶನ ನೀಡಿದರು.

ಪರ್ಯಾಯಕ್ಕೆ ಸೂಚನೆ: ಡಾ.ಸುಧಾಮೂರ್ತಿ ರಸ್ತೆ(ಹೆಬ್ಬಾಳು ಮುಖ್ಯರಸ್ತೆ) ಬಸವನಗುಡಿ ಬಳಿ 40ಕ್ಕೂ ಹೆಚ್ಚು ತಳ್ಳುಗಾಡಿಗಳಲ್ಲಿ ವ್ಯಾಪಾರ ನಡೆಸಲಾಗುತ್ತಿದೆ. ರಸ್ತೆಯಲ್ಲೇ ಗಾಡಿಗಳನ್ನು ನಿಲ್ಲಿಸಿಕೊಳ್ಳುವುದರಿಂದ ವಾಹನ ಸಂಚಾರಕ್ಕೆ ಅಡ್ಡಿಯಾಗುತ್ತಿದೆ. ಪಾದಚಾರಿಗಳಿಗೂ ತೀವ್ರ ತೊಂದರೆಯಾಗುತ್ತಿದ್ದು, ಅಪಾಯದ ಸ್ಥಳವಾಗಿ ಮಾರ್ಪಟ್ಟಿದೆ ಎಂದು ಸ್ಥಳೀಯರು ದೂರಿದ್ದಾರೆ. ಈ ಬಗ್ಗೆ ಅಧಿಕಾರಿಗಳು ಪರಿಶೀಲನೆ ನಡೆಸಿ, ಜೀವನೋಪಾಯಕ್ಕಾಗಿ ರಸ್ತೆ ಬದಿ ವ್ಯಾಪಾರ ನಡೆಸುತ್ತಿರುವವರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸುವ ಮೂಲಕ ಸುಗಮ ಸಂಚಾರಕ್ಕೂ ಕ್ರಮ ವಹಿಸುವಂತೆ ಸೂಚಿಸಿದರು.

ಇದೇ ವೇಳೆ ರಾಜಕಾಲುವೆ ಪಕ್ಕದ ರಸ್ತೆ, ಲೋಕನಾಯಕನಗರದ ಅಡ್ಡ ರಸ್ತೆಗಳು, ವೆಂಕಟೇಶ್ವರ ಪಾತ್ರೆ ಅಂಗಡಿ ರಸ್ತೆ, ಡಾ. ಸುಧಾಮೂರ್ತಿ ರಸ್ತೆ ಬೊಮ್ಮೂರು ಅಮ್ಮನ ದೇವಸ್ಥಾನದ ರಸ್ತೆ, ಬಸವೇಶ್ವರ ನಗರ, ಆಶಾಮಂದಿರ ಹಾಗೂ ಬಸವನಗುಡಿ ಪ್ರದೇಶದಲ್ಲಿ ಪಾದಯಾತ್ರೆ ಜೊತೆಗೆ ಸಾರ್ವಜನಿಕ ಸಭೆ ನಡೆಸಿ, ಕುಂದು–ಕೊರತೆ ಆಲಿಸಿದರಲ್ಲದೆ, ಪರಿಹಾರ ಕ್ರಮಕ್ಕೆ ಸ್ಥಳದಲ್ಲಿದ್ದ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಈ ವೇಳೆ ನಗರಪಾಲಿಕೆ ಮಾಜಿ ಸದಸ್ಯ ಪೈಲ್ವಾನ್ ಶ್ರೀನಿವಾಸ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು, ವಾರ್ಡ್ ಅಧ್ಯಕ್ಷ ಕೇಬಲ್ ನಾಗಣ್ಣ, ಮುಖಂಡರಾದ ಕೇಬಲ್ ಮಹೇಶ್, ಜಯರಾಮೇಗೌಡ, ಅಪ್ಪಾಜಿಗೌಡ, ಎಲೆಕ್ಟ್ರಿಕ್ ಪ್ರಕಾಶ್, ಟ್ರಾವೆಲ್ಸ್ ರವಿ, ಶಿವಮಾದೇಗೌಡ, ನಾಗೇಗೌಡ, ಅನಿಲ್, ಅರವಿಂದ್, ಚಿಲ್ಲಿ ದಿನೇಶ್, ಶ್ರೀನಿವಾಸ್, ಮನೋಹರ್, ನಾಗೇಶ್, ವೆಂಕಟೇಶ್, ರವೀಶ್, ರತ್ನಮ್ಮ, ಕಮಲಮ್ಮ ಮತ್ತಿತರರಿದ್ದರು.


ಪ್ರೇರಣ ಟ್ರಸ್ಟ್ ಅಧ್ಯಕ್ಷರು
ಹಾಗೂ ಉದ್ಯಮಿಗಳಾದ
ಶ್ರೀರಂಗರಾಜು ರವರಿಗೆ
ಹುಟ್ಟುಹಬ್ಬದ
ಶುಭಾಶಯಗಳು
ಶುಭಕೋರುವವರು : ದುರ್ಗಾ ಗ್ರೂಪ್ಸ್